ಫೂಟ್‌ಬೋಲ್ ಇನ್ಫ್ಲೇಟರ್‌ಗಳು 1ಕ್ಕೆ 1-4 0, 1 8-0, 1 12-0, 2—4—0, 2—8—0, 3- 0—0, 3—8—0, 4—0—0

ಬೆಳಕಾಲಕ್ಕೆ ಶಾಕವಾಗಿಯೂ, ಬಹಳ ನಯವಾಗಿಯೂ, ಸುಲಭವಾಗಿ ಬಾಳಿಕೆ ಬರುವ ವಿಲಾಯತಿ ಉಲನ್ ರಗ್ಸ್

ಸೈಜು	60×100	62 110
K. ನಂಬ್ರ	6—8—0,	7—0—0
R. ನಂಬ್ರ	8-12 -0,	9—8—0
S ನಂಬ್ರ	12—8—0	13—8—0
J. ನಂಬ್ರ	13—8 0,	14 8—0
L. ನಂಬ್ರ	16—8—0	18—0 —0

ಬಹಳ ನಯವಾಗಿ ನೇಯಿರುವ ರಂಗವಾಲಿ ಚಿತ್ರಗಳ್ಳಿ (ಪೆಟ್ಟಾರಿ, ಬಟ್ಟಾದಾರಿ) ಒಂಟೇ ಕೂದಲು ರಗ್ಸ್

A. ನಂಬ್ರ 1ಕ್ಕೆ 12—14—0, 60×90
E. ನಂಬ್ರ 1ಕ್ಕೆ 16—10—0, 60 90
" " 17—0—0, 60×90 ಇವು ಸಹ ಮಾವಾದ್ದು
F. ನಂಬ್ರ 1ಕ್ಕೆ 22—0—0, 60×90

ನಮ್ಮಲ್ಲಿ ಜಿಲ್ಯೂಮಿನಿಯಂ ಪಾತ್ರೆಗಳು ಬಹಳ ರಂಗುರಂಗು ಸುಂದರವಾಕ್ಕೆ ಗಳು, ಡೆಕ್ಷಾಗಳು, ಟೋಪಾಗಳು, ಕೊಂಬು ಟೋಪಾಗಳು, ಸಾದ್ಯ ಟಿಂಬ್ಲರುಗಳು, ಪೈಲ್ಟ್ ಕೂಜಾಗಳು, ತಟ್ಟೆಗಳು ವಗೈರೆ ಸಾಮಾನುಗಳು ಬಹಳವಾಗಿವೆ

ಅವಲ್ ರಖಂ ಕೊಂಡು ತೂಕಕ್ಕೆ 1-10—0.
ದುಯಂ " " " 1—7—0.
ಸಾಧಾರಣ " " " 1—4—0.

ಎಲ್. ಎ. ಪೋರುವಾಲ್ ಕಂಪೆನಿ.
ಬೆಂಗಳೂರು ಸಿಟಿ.

ಬಳಿ ಕೃಷ್ಣ ಮತ್ತು ಕಂಪನಿ

1ಕ್ಕೆ ರೂಪಾಯಿ 2—0—0, 2—8—0, 3—0—0

ಅನಂತನ ದಾರಗಳು

ರೂಪಾಯಿ 1ಕ್ಕೆ 4, 6, 8, 10, 12, 16 ಜೊತೆಗಳು. ಹಾಸಲು ಪ್ರತ್ಯೇಕ.

ಹೆಚ್. ಎನ್. ರಾವ್ ಬ್ರದರ್ಸ್,
ಚಿಕ್ಕಪೇಟೆ ಬೆಂಗಳೂರು ಸಿಟಿ.

"ವಿದ್ಯಾನಂದ" ಗ್ರಂಥಮಾಲಾ.

ಮಹಾ ಕವಿ ಕಾಳಿದಾಸಕೃತ

"ರಘುವಂಶ ಮಹಾಕಾವ್ಯ"

ತಾನಾಗಿಯೇ (ಸ್ವತಃ) ಸಂಸ್ಕೃತವನ್ನು ಕಲಿತುಕೊಳ್ಳುವವರಿಗೂ ಸಂಸ್ಕೃತ ವಿದ್ಯಾರ್ಥಿಗಳಿಗೂ ಉಪಯುಕ್ತವಾಗಿರುವಂತೆ ಶ್ಲೋಕ, ಪದ, ಶಬ್ದ, ಅನ್ವಯ, ಅರ್ಥ, ಆಕಾಂಕ್ಷೆ, ವಿಸ್ತಾರ, ಧಾತು ರೂಪ, ಪಾತ್ರರ್ಥ, ವ್ಯಾಕರಣ ವಿಷಯ, ವಿಶೇಷ ನಿಯಮಗಳು ಇವುಗಳೊಂದಿಗೆ ಮೊದಲ ಸಲ ಪ್ರಿಂಟಾಗಿ ಸಿದ್ಧವಾಗಿದೆ. ಬೆಲೆ 1—0—0

ಮುಕುಂದಮಾಲಾ ಸ್ತೋತ್ರ

ಕೆಲವು ಪಾಠಗಳೊಂದಿಗೆ ಪ್ರತಿ ಪದ ಅರ್ಥ, ಅನ್ವಯವಾರ್ಥ, ತಾತ್ಪರ್ಯ ಸಹಾ ಇರುತ್ತದೆ ಬೆಲೆ 0—4—0

ವಿಳಾಸ - ಮ್ಯಾನೇಜರ್,
ವಿದ್ಯಾನಂದ ಆಫೀಸು,
ಚಿಕ್ಕಪೇಟೆ ಬೆಂಗಳೂರು ಸಿಟಿ.

ಕುಂತಳ ಕೌಮುದಿ ತೈಲ

ಕುಚ್ಚಿಪಾರ್ತಿ ಮಹಾರಾಣಿಯವರು—ಅವರು ಉಪಯೋಗಿಸಿದ ಕೇಶದಲ್ಲಿ ನ ತೈಲಗಳಲ್ಲೆಲ್ಲಾ ಇದೇ ಅತ್ಯುತ್ತಮವಾದುದು.

ಮೈಸೂರಿನ ಮಹಾರಾಣಿಯವರು—ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ

ಪದ್ದಾ ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈದ್ಯಗುಣವುಳ್ಳ ತೈಲವೆಂದು ನಿರ್ಧಾರ ಮಾಡಲ್ಲಿನು.

ಶ್ರೀ ಸುರೇಂದ್ರನಾಥ ಬಾನರ್ಜಿಯವರು—ನಾನು ಉಪಯೋಗಿಸಿದ್ದೇನೆ, ಸರ್ವರೂ ಇದನ್ನು ಉಪಯೋಗಿಸಬಹುದು

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ, ತಲೆಬಾಚಿಕೊಳ್ಳುವದಕ್ಕೂ ಅತ್ಯಂತೋಪಯುಕ್ತವಾದದ್ದು ಇದರಲ್ಲಿ ಅತ್ಯಾಶ್ಚರ್ಯಕರವಾಗಿ ಕೂದಲನ್ನು ಬೆಳೆಸುವ ಗುಣಗಳಿರುವದಲ್ಲದೆ, ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ. ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳೆಲ್ಲೆಲ್ಲಾ ಇದೇ ಅತ್ಯಂತ ಸುಲಬ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು. ೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೫ ಆಣೆಗಳು.

ಕವಿರಾಜ ಆರ್. ಸಿ. ಸೆನ್, ಎಲ್. ಎಮ್. ಎಸ್,
216 ಕಾರನ್‌ವಾಲಿಸ್ ಬೀದಿ. ಕಲ್ಕತ್ತಾ.

ಟೆಲಿಗ್ರಾಫ್ ವಿಳಾಸ.—"ಕೌಮುದಿ"

ಮೈಸೂರು ದೇಶಕ್ಕೆ ವಿಜಂಟರು:—ಎಲ್. ಎ. ಪೋರುವಾಲ್ ಎಂಡ್ ಕೊ,
ಚಿಕ್ಕಪೇಟೆ, ಬೆಂಗಳೂರು.

ಮಂಗಳೂರಿಗೆ ವಿಜಂಟರು:—ಮೆ। ರಾ। ರಾ। ಸಿ. ಆರ್. ಕಾಮತರು,
ಉಲನ್ ಮರ್ಚೆಂಟ್ಸ್, ಮಂಗಳೂರು.

ಅನುಭವ ಸಿದ್ಧವಾದ ಔಷಧಗಳು

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ವಿರುದಿನ ಬೆಲ್ಲಿಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ರೂ ೧೦ ಆಣೆ.

೨ ಪ್ರಮೇಹರಿಪು ಬಿಂದು ಉಂಬುನ್ನೂ ಕೇವನ್ನೂ ಕೂಡಲೆ ನಿಲ್ಲಿಸಿ ಪಸ್ಯವನ್ನಿಲ್ಲದೆ ಪರಿಪೂರ್ಣವಾಗಿ ಗುಣ ಕೊಡುವದು ಬಾಟ್ಲಿಗೆ ೨ರೂ

೩ ಕಾಮೇಶ್ವರ ಮಾತ್ರೆ ಧಾತು ವರ್ದಕವೂ ಉತ್ತೇಜಕವೂ ಪ್ರಾಣಕವೂ ನಪುಂಸಕತ್ವ ನಾಶಕವೂ ಆಗಿದೆ ಅರ್ಧ ತೊಲೆಗೆ ೨ರೂ

೪. ವಂಚಜೀರಕ ವಾಕ ಎಲ್ಲ ಪ್ರದರಗಳನ್ನೂ ಮುಟ್ಟಿ ಕಟ್ಟಿಕಿಯೋಪಗಳನ್ನೂ ಒಂಜೆತನವನ್ನೂ ತಪ್ಪದೆ ಗುಣಪಡಿಸುವದು ರಾತ್ರಿ ೨ರೂ

೫ ನೂರಣಾಮ ಲೇಹ ರಕ್ತ ಅದವಾ ಪಿತ್ತಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು ಸ್ಪೆಷಿಕವಾಗಿದೆ ರಾತ್ರಿಗೆ ೨ರೂ

೬ ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೂ ಬಗೆಹಾಯವಿಲ್ಲದೆ ದಾರುಣವಾಗಿ ಬೆಳೆದ ಪ್ಲೀಹ ಯಕೃತ್ತಿನ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣ ಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ರೂ ೮ ಆಣೆ

೭ ಜಗನ್ಮೋಹನ ದಂತಮಂಜನ ದಂತ ಸಂಬಂಧವಾದ ಸರ್ವ ಬಾಧೆಗಳನ್ನು ವರ್ಜಿಂಚಕ್ಕೆ ಬೆಲಾಯಿತಿಂ ಮಂಜನದಷ್ಟೇ ಸೊಗಸಾಗಿ ಪಲ್ಲುಗಳನ್ನು ಅನೇಕ ವರ್ಷಗಳಿಂದ ಕಾಪಾಡಿಕೊಂಡು ೧೦ ತೊಲೆಗೆ ೧೦ ಆಣೆ

೮ ನರಳಘೃತ ಮಾತ್ರೆ ಅಜೀರ್ಣವನ್ನೂ ಮಲಬದ್ಧವನ್ನೂ ನಿವಾರಿಸಿ ವಿರೇಚಕವು ತೊಲೆಗೆ ೨ರೂ

೯ ಮಹಾಜ್ವರಾಂಕುಶ ಮಾತ್ರೆ. ಜಳಿಜ್ವರ, ವರಿಧ್ಯಯ [illegible] ಎಲ್ಲ ಜ್ವರಗಳನ್ನು ಕಪ್ಪದೆ ಗೆಲ್ಲುವದು ಅರ್ಧ ತೊಲೆಗೆ ೩ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಬುಬ್ಬಸ, ಕಫ, ಕ್ಷಯರೋಗ ನಾಮಜಾಣವು ರಾತಲಿಗೆ ೨ರೂ

೧೧ ಶಾಲ್ಮಲೀ ಪಾಕ ಸ್ವಪ್ನವಸ್ಥೆ, ಮೂತ್ರದಲ್ಲಿ ಧಾತುಕ್ಷಯ, ದುರ್ವ್ಯಸನಗಳಿಂದ ಮೂಲಕವಾಗಿ ಸ್ಯಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು ರಾತಲಿಗೆ ೨ರೂ.

೧೨ ವಾತಮುರಾರಿ ಬಾವಂ ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತಭಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೬ ಆಣೆ ೩ ಬಾಟ್ಲಿಗೆ ೧ರೂ ೬ ಆಣೆ

೧೩ ಗಜಕರ್ಣ ಕೇಸರಿ ಮುಲಾಮು ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಬಂದೊಡನೆ ಲಾಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ ಕರಡಿಗೆಗೆ ೪ ಆಣೆ ೩ ಕರಡಿಗೆಗೆ ೧೧ ಆಣೆ.

೧೪ ನವ್ವೀರಾಂಜನ (ಸುರುಮಾ) ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು ತೊಲೆಗೆ ೧ರೂ

೧೫ ಪ್ರಜ್ಞಾ ಸಾರಸ್ವತ ಚೂರ್ಣ ಉನ್ಮಾದ, ಅಪಸ್ಮಾರ, ಉಗ್ರಸ್ವಪ್ನ, ಬುದ್ಧಿಮಾಂದ್ಯಗಳನ್ನು ನಿವಾರಿಸುವದು ಸ್ಮರಣಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ರೂ ೮ ಆಣೆ

ಪ್ರಿಯ ಮೇರನ ದೇಶದ ಅಂಬಿಯ ಹಾಸಲು ಸೇರಿಸಿಲ್ಲ ನಮ್ಮಲ್ಲಿ [illegible] ವಾದ ಎಲ್ಲ ಔಷಧಗಳು ಜೊತೆ ಬೆಲೆಗೆ ದೊರೆಯುವವು ನಮ್ಮ ದೊಡ್ಡ ಕನ್ನಡ ಕೆಟಲಾಗ್ ನೋಡಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಮೋಸವಿಲ್ಲದೆ ಮಾಡುವೆವು ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ—B M. Nathu & Co, *Ayurvedic Chemists*, Vepery Post, **MADRAS.**

Royal Indian Balm Depot.

ರೊಯಲ್ ಇಂಡಿಯನ್ ಬಾಮ್.

[illegible] ಸಂಪೂರ್ಣ ತೆಗೆದು ಹಾಕುವದು ಮತ್ತು ಎಲ್ಲ ತರದ ಜ್ವರಗಳಿಂದ ಬಿಡುಗಡೆ ಹೊಂದಿ ಪೂರ್ಣ ಆರೋಗ್ಯವಂತರಾಗಿ ಇರಲು ಈ ಔಷಧವು ಸಹಾಯಕವಾಗಿದೆ. ಇದು ಸಂಪೂರ್ಣ ಶುದ್ಧ ಪೌಷ್ಟಿಕ ಔಷಧವಾಗಿದ್ದು ಇದರಲ್ಲಿ ಯಾವ ವಿಷಕಾರಕ ಪದಾರ್ಥವೂ ಇಲ್ಲ. ಇದು ಸಂಪೂರ್ಣ ಆಯುರ್ವೇದ ಔಷಧವಾಗಿದೆ. ಇದರಲ್ಲಿ ಕ್ವಿನೈನ್ ಅಥವಾ ಇತರ ಯಾವ ಅಪಾಯಕಾರಿ ಔಷಧಗಳೂ ಇಲ್ಲ. ಇದು ಸಾಮಾನ್ಯ ಜ್ವರಗಳಿಗೆ ಮಾತ್ರವೇ ಉಪಯೋಗಿಸಲ್ಪಡುವದು.

ಗಜಕರ್ಣದ ಮುಲಾಮು — [illegible] ಹುಳುಕಡ್ಡಿ ಇತ್ಯಾದಿಗಳಿಗೆ ಒಮ್ಮತು 0—12—0

ದಂತಮಂಜನ — ಹಲ್ಲುಗಳನ್ನು ಗಟ್ಟಿಪಡಿಸುವಕ್ಕೆ 0—2—0

ಜ್ವರದ ಗುಟಿಕೆಗಳು — ಎಲ್ಲಾ ತರದ ಜ್ವರಕ್ಕೆ (ಕ್ವಿನೈನ್ ರಹಿತ) ,, 0—8—0

ಶಕ್ತಿವರ್ಧಕ ಗುಟಿಕೆ — ಧಾತುವೃದ್ಧಿ ರಕ್ತವೃದ್ಧಿ ,, 0—8—0

ಕಾಲಾಮೃತ — ಮಕ್ಕಳ ಪುಷ್ಟಿಗೆ ,, 0—12—0

ಮನೋಹರ ತೈಲ — ,, ,, 0—8—0

ಕಾಂತಿವರ್ಧಕ ತೈಲ — ,, ,, 0—8—0

ವಿಳಾಸ — ಮನೋರಂಜನ ಕಂಪೆನಿ, ಗಿರಗಾಂ ಮುಂಬಯಿ.

ವಿಜಂಟರು, ಪರ್ಲ ಎಂಡ್ ಸನ್ಸ್ ಮಂಗಳೂರು.

ಬೇಕಲ ವೆಂಕಟ ರಾವ್, ಉಡುಪಿ.

ಗಿರಾಕಿಗಳು ತಮ್ಮ ವಿಳಾಸವನ್ನು ಶುದ್ಧವಾಗಿಯೂ, ಪೂರ್ಣವಾಗಿಯೂ, ಬರೆಯಬೇಕು.

ಪಂಡಿತ್ ಬಿ. ಬಾಬುರಾಯರ

ಪರಿಮಳಾಂಜನ.

ಇದರ ಬಾಹ್ಯಲೇಪನದಿಂದಲೇ ತಲನೋವು, ಶಿರೋಧಾರ, ಒರ್ಕೆನ್ನೆ, ಅರ್ಧಾಂಗವಾಯು, ವಾತ, ಸಂಮಿವಾತ, ಶೀತ ಕೆಮ್ಮು, ಗಂಟ್ಲುನೋವು. ಜಿಮ್ಮ್, ಉಳುಕು, ಹೊಯಿಗಳು, ಪಕ್ಷವಾತ, ಬೆನ್ನುನೋವು, ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಪೂರ್ಣವಿಲ್ಲದೆ ನಿಲ್ಲುವವು ಡಬ್ಬಿಗೆ ರ ಕ್ರಯ 0—8—0.

ಆರು ಬಾಟ್ಲಿಗಳನ್ನು ಒಂದೇ ಸಾರಿ ತರಿಸಿಕೊಂಡರೆ ೨—8—0.

ಇನ್ನೂ ಅನೇಕ ಔಷಧಗಳು ಇರುವದರಿಂದ ಪೂರ್ಣ ವಿವರವು ಕೆಟಲಾಗಿಗೆ ಬರೆಯಿರಿ.

ವಿ ಪಿ ಖರ್ಚು ಪ್ರತ್ಯೇಕ ಪ್ರೀ ಬಾಬುರಾಯರ,

ಆಯುರ್ವೇದಿಕ್ ಔಷಧಾಲಯ, [illegible] ಮಂಗಳೂರು, ದ. ಕ.

ನೇತ್ರಬಿಂದು

ಸರ್ವ ಕಣ್ಣಿನ ದೃಷ್ಟಿಸಂಬಂಧ ಕ್ಷೀಣರು ಸೋಮಿಕೆ, ಕಣ್ಣಿನ ಮೂಲೆ ತುರಿಸುವಿಕೆ, ಕೆಂಪಾಗ್ಸ, ರೆಪ್ಪೆ ಉದುರುವಿಕೆ ಈ ಮೊದಲಾದ ರೋಗಗಳಿಗೆ ಸಿದ್ಧೌಷಧವು. ಕ್ರಯ ಬಾಟ್ಲಿ ಗರ ರೂ 0—8—0 ವಿ ಪಿ. 0—4—0.

ಸಿದ್ಧಲಕ್ಷ್ಮೀ ವಿಲಾಸ—ಇದು ಒಳ್ಳೇ ರಕ್ತಶುದ್ಧಿ ಮಾಡುತ್ತದೆ ಕ್ರಯ ಬಾಟ್ಲಿ ಗರ 0-12-0 ವಿ. ಪಿ. 0—4—0

ಇದು ವಿನಹ ಇನ್ನಿ ಆಸವಗಳೂ, ಅರಿಷ್ಟಗಳೂ, ಘೃತಗಳೂ, ಲೇಹಗಳೂ, ಚೂರ್ಣಗಳೂ, ತೈಲ್ಯಗಳೂ, ಮಾತ್ರೆಗಳೂ, ಭಸ್ಮಗಳೂ ವಗೈರೆ ದೊರೆಯುತ್ತವೆ.

ವಿಳಾಸ:— ಧನ್ವಂತರಿ ಆಯುರ್ವೇದಿಕ್ ಔಷಧಾಲಯ

ಮಂಗಳೂರು.

Printed & published by V. S. Kainath, at the Mangalore Trading Association's Sharada Press Mangalore.

ವೈದ್ಯಶಿಕ್ಷಾಮಂಜರಿ

ಪ್ರತಿಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ—ವರ್ಷಕ್ಕೆ ರೂ 1-4-0 ಟಪ್ಪಾಲು ಹಾಸಲುಸೇರಿದೂ 2-1-0

ಪುಸ್ತಕ 4 ಮಂಗಳೂರು, ತಾರೀಕು ೧೬ನೇ ಶುಕ್ರವಾರ ಸಪ್ಟೆಂಬರ 1910 ಸಂಚಿಕೆ 36

Amrutanjan Depot Fort Bombay.

ಅಮೃತಾಂಜನ

Trade Mark Registered

ಹಿಂದುಸ್ಥಾನದ ವನಸ್ಪತಿಗಳಿಂದ ತಯ್ಯಾರಿಲ್ಪಟ್ಟ ಜೀವಿದಾ ಮೂಲಾಮು. ಇದರಿಂದ ಪಾತ, ಸುಡುವಂತ, ತಲೆನೋವು, ಶಿರೋಭಾರ ಉದಾಸೀನ ಮಾಯವು, ಸೊಂಟನೋವು ಗಂಟ್ಲು ನೋವು ಜಜ್ಜಿ ಉಳುಕು, ಘಾಸು, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವವು ಇದು ಕಣ್ಣು ಮೂಸಿ ಳಗೆ ನೇಹಕ್ಕಿದರೂ ಜಯವಿದೆಯೆಂತ ಮಾ ಹದ್ದುಪಡಿಸಿದೆ. ನಾನಾಪ್ರಕಾರ ಹಕ್ಕ ಪ್ರಯೋಗಗಳಲ್ಲಿ ಈ ಅಮೃತಾಂಜನವನ್ನೆ ಬಿಟ್ಟು ಬೇರೆಯಾವ ಔಷಧವನ್ನೂ ಸಿಸ್ಕರಿಸುತ್ತದೆ ಅಮೃತಾಂಜನವು ಎಲ್ಲಾ ಔಷಧಿ ಅಂಗಡಿಗಳಲ್ಲಿಯೂ ಸ್ಟೋರ್ಸ್‌ಗಳಲ್ಲಿಯೂ ಸಿಕ್ಕುವುದು ಬಾಟ್ಲಿಗೆ ಕಿಮ್ಮತ್ತು ೨ ಆಣೆ

ಗಜಕರ್ಣದ ಮೂಲಾಮು.

ಕಿಮ್ಮತ್ತು		ಕಿಮ್ಮತ್ತು
ಆರು		ಆರು
ಆಣೆ		ಆಣೆ
ಈ		ಈ
ನಮೂನೆ		ನಮೂನೆ
ಡಬ್ಬಿ		ಡಬ್ಬಿ

ಗಜಕರ್ಣದ ಪುಲಾವು.

ಇದನ್ನು ತಾಗಿಸಿದರೆ ಸಣ್ಣಾ ತರದ ಸಿಜ್ಜಿಯು ನಾಶವಾಗಿ ಹೋಗುವದು ಇದರಿಂದ ಉರಿದ ಬರವಣಿಗೆ ಇರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಬಂದು ತಾರೀಕನ್ನೀಕ್ಷಿಸಿದಲ್ಲಿ ತಿಳಿಯುವದು ಸುಲಭವಾಗಿ ತಾಗಿಸುವದರೊಳಗೆ ರಜಕರ್ಣವು ಹೋಗುವದು ಡಬ್ಬಿಗೆ ಕಿಮ್ಮತ್ತು ೬ ಆಣೆ ಗಂತ ಡಬ್ಬಿ ರೂ 4

ನಜ್ರಗುಟಿಕೆ.

ರಕ್ತಶುದ್ಧಿ ಧಾತ ಪುಷ್ಟಿ ಸ್ಪಷ್ಟೀಕರಿಸುವು ಅಗುವದು ಸಿಲ್ಲಿಸುತ್ತದೆ. ಸಿಪ್ರಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡತ್ತದೆ ಇದರಲ್ಲಿ ಡೆಮೆಯಿನ ಕೊಕೊ, ಲೆಸೆತಿನ್ ಎಂಬ ಧಾತು ಪುಷ್ಟಿ ದಾಯಕಗಳಿವೆ. ೫೦ ಗುಟಿಕೆಗಳ ಡಬ್ಬಿಗೆ ಕಿಮ್ಮತ್ತು ರೂ 1.

ಪಂಕ್ತಾಂಜನ

ಹಲ್ಲುಗಳಿಗೆ ಬರುವ ರಕ್ತ ಸಿಲ್ಲಿಸುತ್ತದೆ ಹಲ್ಲುಗಳು ಬೆಳ್ಳಗಾಗುತ್ತವೆ. ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಸೊಂಗಲಾಡಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಈ ವಿಜಯವನ್ನು ಬಿಟ್ಟು ಬೇರೆ ಸಾರಿ ಪರೀಕ್ಷಿಸಿ ನೋಡಿದಲ್ಲಿ ಬೇರೆ ಗುಣವು ತಿಳಿಯುವದು ಡಬ್ಬಿಗೆ ಕಿಮ್ಮತ್ತು ೬ ಆಣೆ

ಪ್ರೇವರ್ಡಿಸ್ ಎಣ್ಣೆ

ಇದನ್ನು ಕೂದಲುಗಳಿಗೆ ತಾಗಿಸುವದರಿಂದ ಕೂದಲುಗಳ ಕಪ್ಪಾಗಿ ಯೂ ಉದ್ದವಾಗಿಯೂ ಬೆಳೆಯುವವು ಇದಕ್ಕೆ ಮನೋಹರವಾದ ಪರಿಮಳವು ಸಹ ಇದೆ ಬಾಟ್ಲಿ ಒಂದರ ಕಿಮ್ಮತ್ತು ರೂ 1

ಸುಂದರಿ ತೈಲ.

ಇದನ್ನು ಮೋರೆಗೆ ತಾಗಿಸುವದರಿಂದ ಮುದ್ದಣಗಳೂ ಕಪ್ಪು ಕಲೆಗಳೂ ಹೋಗಿ ಮೈಗುವಾದ ಮತ್ತು ಮನೋಹರವಾದ ಕಾಂತಿಯು ಬರುವದು ಬಾಟ್ಲಿ ಒಂದರ ಕಿಮ್ಮತ್ತು 8 ಆಣೆ

ಖಜ್ಜಿ ಮೂಲಾವು.

ಬಾಟ್ಲಿ ಒಂದರ ಕಿಮ್ಮತ್ತು 3 ಆಣೆ

ಜುಲಾಬು ಮಾತ್ರೆ.

ಬಾಟ್ಲಿ ಒಂದರ ಕಿಮ್ಮತ್ತು 8 ಆಣೆ.

ವಿಳಾಸ:—ಅಮೃತಾಂಜನ ಡಿಪೋ, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಎಡ್ರೆಸು:—"ಅಮೃತಾಂಜನ", ಮುಂಬಯಿ

ಅತ್ಯಂತ ಉಪಯುಕ್ತವಾದ ಆಯುರ್ವೇದ ಚಿಕಿತ್ಸಾ ಗ್ರಂಥವು ಇನ್ನು ಸದ್ಯದಲ್ಲಿಯೇ ಪ್ರಕಟವಾಗುವುದೆಂಬುದನ್ನು ಸ್ವದೇಶಾಭಿಮಾನಿಯ ವಾಚಕರೆಲ್ಲರೂ

ತಿಳಿಯಬೇಕಾಗಿರುವುದು.

ಕನ್ನಡಭಾಷೆ ಗೊತ್ತಿರುವವರ್ಯಾರಾದರೂ ತನ್ನ ಹೆಸರು ಮತ್ತು ವಿಳಾಸವನ್ನು ಕಳುಹಿಸಿಕೊಟ್ಟಲ್ಲಿ ಟನ್ವಾಲು ಹಾಸಲು ಇಲ್ಲದೆ ಸಹಾ ಗ್ರಂಥವನ್ನು ಉಚಿತವಾಗಿ ಪಡೆಯಬಹುದು ಇಂಗ್ಲೀಷು ಭಾಷೆಯಲ್ಲಿ ಹೆಸರು ಮತ್ತು ವಿಳಾಸವನ್ನು ಕಳುಹಿಸುವಾಗ ತಮ್ಮ ಸ್ನೇಹಿತರ ಯಾ ಸೆಂಟರಿಷ್ಟರ ಪೈಕಿ 10 ಜನರ ಹೆಸರು ಮತ್ತು ವಿಳಾಸಗಳನ್ನು ಬರೆದು ಕಳುಹಿಸತಕ್ಕದ್ದು.

ಟಿ. ಎನ್ ಸುಬ್ರಮಣ್ಯಮಂ ಅಂಡ್ ಕೊ
32 ಆರ್ಮೇನಿಯನ್ ರಸ್ತೆ, ಮದ್ರಾಸು

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತ್ತರ ವ ದಕ್ಷಿಣಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಎಮಿಶನ ಮೂಲಕ ರವಾನಿಸುತ್ತೇವೆ ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಜಿಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ

ವಿಳಾಸ — ರಂಗಪ್ಪಾ ರಾಮಕೃಷ್ಣ ಕವಿ,
ಸೆಕ್ರೆಟರಿ ದಿ ಸೌತ್ ಕೆನರಾ ಮರ್ಚಂಟ್ಸ್ ಅಸೋಸಿಯೇಷನ್ ಲಿಮಿಟೆಡ್
ಬೊಂಬಾಯಿ

ಕವಿ ಎಂಡ್ ಸನ್ಸ್ ಜನರಲ್ ಮರ್ಚಂಟ್ಸ್,
ಮಂಗಳೂರು, ದ ಕ

ನಮ್ಮಲ್ಲಿ ಎಲ್ಲಾ ತರದ ಟೀಟು ಬಿಟ್ಟಿವ ಕೋಟಿಂಗ್, ಸ್ಟೇಶನರಿ, ಕಪ್ಪೆರಿ, ಗ್ಲಾಸ ವೇರ, ಬಿಯರ್‌ಪೆನ್ ಸೈಕ್ಲಿಸ್ ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಮಾನುಗಳೂ ಮೀಗಾಲಕ್ಕೆ ಉಪಯೋಗವಾಗುವ ಸ್ಟೀಲು, ಎಲ್ಲಾ ಜಾತಿಯ ಕೊಡೆಗಳು ರಿಪೇರಿಗೂ ಜಿಲ್ಲೆಯಲ್ಲಿಗೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾಗುತ್ತದೆ

ಶೇಕ್ಸಪಿಯರ್ ಮಹಾಕವಿಯವರ "ಸಿಂಬೆಲೈನ್" ಎಂಬ ನಾಟಕವನ್ನು ಹೋಲುವ, "ಇಂದಿರಾಬಾಯಿ" ಗ್ರಂಥಕರ್ತರಿಂದ ಬರೆಯಲ್ಪಟ್ಟ,

ಸೀಮಂತಿನಿ,

ಎಂಬ ಒಂದು ಮನೋರಂಜನೀಯವಾದ ಹೊಸಗನ್ನಡ ನಾವೆಲ್,

ಸ್ತ್ರೀ ವೈದುಷ್ಯ, ವಸಾಹಸ ವಿವೇಕ ವಿದ್ಯಾವಿಹೀನರ ದುರ್ಗತಿ, ಇವೇ ಮುಂತಾದ ಮಹತ್ವಿಷಯಗಳನ್ನು ಹೃದಯಂಗಮವಾಗಿಯೂ ರಮ್ಯವಾಗಿಯೂ ವಿವರಿಸಿರುವದು ಓದುವುದಕ್ಕೆ ತೊಡಗಿದರೆ ಕೊನೆ ಮುಟ್ಟುವ ವರೆಗೂ ಬಿಡಲು ಮನಸ್ಸಾಗದು. ಮೈಸೂರು ಗವರ್ನಮೆಂಟಿನವರಿಂದ ಪ್ರೊಮಿಸರಿ ಮತ್ತು ಮದ್ರಾಸು ಗವರ್ನಮೆಂಟಿನವರಿಂದ ಯುರೋಪಿಯನ್ ಮತ್ತು ಯುರೇಷ್ಯನ್ ಸಿವಿಲ್ ಆಫೀಸರುಗಳ ಪರೀಕ್ಷೆಗೆ ವಿಶೇಷವಾಗಿ ನೇಮಿಸಲ್ಪಟ್ಟಿದೆ ಅನೇಕ ಇಂಗ್ಲಿಷ ಕನ್ನಡ ವರ್ತಮಾನ ಪತ್ರಗಳ ಮೆಚ್ಚಿಕೆಯನ್ನು ಪಡೆದಿದೆ.

ಕ್ರಯ 12 ಆಣೆ ಸ್ನೇಹಿತರಿಗೆ ಮಾತ್ರ 10 ಆಣೆ ಟನ್ವಾಲ್ ಒತ್ತು ವೇರೆ

ಜಿ ವೆಂಕಟರಾವ್, ಮಹಾದೇವ ಪೇಟೆ ಪತಿಕೇರಿ

ಇವರಲ್ಲಿ ಸಿಕ್ಕುವುದು.

ನವೀನ ಶೃಂಗಾರ ಸ್ತ್ರೀ ಲುಕಸಹಸ್ತತಿ ಕಥೆ

ನೀವು? ಶೃಂಗಾರ ಮತ್ತು ಚಮತ್ಕಾರವಾಗಿರುವ ಕಥೆಯನ್ನು ಓದಬೇಕಾಗಿ ಅಭಿಲಾಷೆ ಇದ್ದರೆ ಮೇಲ್ಕಂತ ಕಥೆಗೆ ಸಮಾನವಾದ ಕಥೆ ಯಾವದೂ ಇಲ್ಲ ಕ್ರಯ ಹಾಸೆಲ್ ಸಹಾ ೧೦ ಆಣೆ

ಮತ್ತು ನಮ್ಮಲ್ಲಿ ಕನ್ನಡ, ತೆಲುಗು, ಸಂಸ್ಕೃತ ಪುಸ್ತಕಗಳು ಪರಮಾಯದ ಊದಬತ್ತಿಗಳು, ಹಸಿಗಂಧ ಹಸಿ ಬಿಲ್ಲೆಗಳು, ಪನ್ನೀರು, ತರಹೆವಾರಿ, ಜವಳಿ ಸಹಾ ದೊರಿಯುವದು ಅಲ್ಲದೆ, ಇತರ ಯಾವ ಪದಾರ್ಥಗಳು ಬೇಕಾದರೂ ನಂಬಿಕೆಯಿಂದ ಕಮಿಷನಿಗೆ ರವಾನೆ ಮಾಡುವೆವು. ಒಂದಾವರ್ತಿ ತರಿಸಿ ನೋಡಿದರೆ ಗೊತ್ತಾಗುತ್ತೆ ನಮ್ಮ ಕಂಪೆನಿ ಕೆಟಲಾಗ್ ಮುಪತ್ತಾಗಿ ದೊರೆಯುವದು.

ಟಿ. ಯನ್. ಶ್ರೀನಿವಾಸ ಶೆಟ್ಟಿ, ಬುಕ್‌ಡಿಪೊ,
ಕಾಡುಕ್ಕಪೇಟೆ, ಬೆಂಗಳೂರು ಸಿಟಿ.

ಅತ್ಯಂತ ಗಮ್ಮತ್ತಿನ ಮಂಟಿ ನಾಟಕ

ಲ್ಯಾಫ್ ಎಶ್ಯೂರೆನ್ಸ್ ಕಂಪನಿ

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸ

ಟ್ರಸ್ಟೀ.— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವಂತೇ ಪ್ರಯೋಜನ ಕುಳ್ಳದ್ದಾಗಿರುವುದು

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವನ ವಿಮೇ ಅತಿ ಕಮ್ಮಿಯಾದರೂ ಬದ್ರವಾದ ವಿಮೇ ದರಗಳಲ್ಲಿ ಉತ್ತರಾಯಿನ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಬದ್ರತಾಪತ್ರಗಳಲ್ಲಿ ರೀನವೆಸ್ಟ್ ಮಾಡಿ ಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಶೇಷ ಸೂಚನೆ — ಪ್ರಖ್ಯಾತಿಗೊಂಡ ಶ್ರೀಕೃಷ್ಣ ಬ್ರದರ್ಸರವರ ನಾನಾ ತರದ ದೃಷ್ಟಿ ಚಕ್ಕಗಳನ್ನು ಅಲ್ಪ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಡಲಾದೀತು.

ಎಲ್ಲೂರು ರಾಮರಾವ್, ಜನರಲ್ ಏಜಂಟ್, ಮಂಗಳೂರು, ದ. ಕನ್ನಡ.

ಒಹುಮಾನ! ಒಹುಮಾನ! ಬಹುಮಾನ!

THE KALA-NIDHI MANGALORE,

(ಪೊಟ್ಟಣ 1 ಕ್ಕೆ 3 ಪೈ)

ಬರುವ ದಶಂಬರ ತಿಂಗಳ ವರೆಗೆ ಮಾತ್ರ ೪ ರೂಪಾಯಿಗಳ ಶಾಯಿ ಪೊಟ್ಟಗಳನ್ನು ತೆಗದುಕೊಳ್ಳುವವರಿಗೆ ಓವನ್ ಪೇಸ್ ನಿಕ್ಕಲ್ ಸಿಲ್ವರ್ ರಾಸ್ಕೋವ್ ಕೀಲಿನ ಫೆಡಿಯಾರವು

ಈ ಶಾಯಿಯ ದ ಪೊಟ್ಟಣ ಪೆಂಗಳಿಗೆ ಕುಳ್ಳ ಹಿಡಿಯುವುದು ಶಾಯಿಯು ಮೇಲ್ಗಡೆ ಬೂಜು ನಿಲ್ಲುವ ಪರಿಯಾಗಿ ಸೀಲು ಒತ್ತಿದವರಿಗೆ ಹಣ ವಾಪಸು ಕೊಡಲಾಗುವದು.

ಬಹುಮಾನಗಳ ವಿವರ ೪ ಆಣೆಯ ಪೊಟ್ಟಣಗಳನ್ನು ತಕ್ಕೊಳ್ಳುವವರಿಗೆ ಸುಗಂಧ ದಂತ [illegible] ಎನ್ನುವ ತಕ್ಕೆ ಇವರಿಗೆ ತೀರ್ಪು ಫೌಂಟ್ ಪೆನ್ಸಿಲ್ ಡಜನ್ ೧; [illegible] ಪೊಟ್ಟಣಗಳನ್ನು ಎಣಿಸಿ ತಂದಿರಿ ದೊಡ್ಡವರ ಉತ್ತರವ ಮಂಡಿ ಬಿಸಿಯನ್ ೧; ೨ ರೂಪಾ ವಿವರ್ನ ಕಾಗದಗಳನ್ನುವವರಿಗೆ ಬಿಸಿಯನ ೧ ಕೆಸಿ ಇಂಜಿ ಪೆನ್ಸಿಲ್ ೧, ೪ ರೂಪಾಯಿಗಳಷ್ಟು ಕಾಗದಗಳನ್ನುವವರಿಗೆ ಬಿಸಿಯನ ಸಿಲ್ವರ್ ರಾಸ್ಕೋವ್ ಕೀಲಿನ ಕಿಸೆ ಫೆಡಿಯಾರವು ಗ್ಲಾಸ್ ಫ್ರೀ ಇ ಕ

ಟ್ಟಣಗಳಿಗೆ ದಿ ಕರಿಯಾಗಿ ಒಟ್ಟಿಗೆ ಆಣೆ ೮ ಪೈಸ್ಟಾದಕ್ಕೆ ಆಣೆ ೪ ಶಾಯಿಯು ಗಾಜಿನ ಕಾಡಾಗಿ ಎಲ್ಲಿಕ್ಕವು ಪೊಟ್ಟಣವರಿಗೆ ೨ ಬಾಜಾರ ಪ್ರತಿಕ್ಷೇಪ

ವಿಳಾಸ — ಕಲಾನಿಧಿ. ಮಂಗಳೂರು

ಅಥವಾ ದಿ ಯೂಲನ್ ಮಾರ್ಟ್ ನಂಬ್ರ ೧ ಮಂಗಳೂರು (ದ. ಕ)

ವೈಟ್ ಮೆಟಲ್

(ರಜತ ಲೋಹದ ಸರಪಣಿ)

ಕಗ್ಗತ್ತಲೆಯಲ್ಲಿಯೂ ಇದರ ಹೊಳಪ ಚಂದ್ರಕಾಂತಿಯಂತೆ ಇರುವದು, ನೋಟಕ್ಕೆ ರಮ್ಯವಾಗಿ, ಮನಸ್ಸಿಗೆ ಉಲ್ಲಾಸಕರವಾಗಿ, ಕಿಶೆಗಡಿಯಾರಕ್ಕೆ ದಿವ್ಯಾಭರಣವಾಗಿ ರೋಫಿಸುವುದು, ಎಂತಹ ಪೋಶಾಕ್‌ಗಳು ಧರಿಸಿದರೂ ಸುಂದರವಾಗಿ, ಧಗಧಗಿಸುವ ಈ ಸರಪಣಿ ಪ್ರತಿಯೊಬ್ಬರಲ್ಲಿಯೂ ಇಲ್ಲದಿದ್ದರೆ ತಾಂಬೂಲವಿಲ್ಲದ ಮುಖದಂತೆ ಶೋಭಾಯಮಾನವಾಗಿರದು ಇದರ ಗುಣದಲ್ಲಿ ಎಳ್ಳಷ್ಟೂ ಸಂದೇಹ ಪಡಬೇಕಾದಿಲ್ಲ.

ಸಂತೋಷಕರವಾದ ಕಾಂತಿ! ಎಂದಿಗೂ ಕೆಡದ ಗುಣ!

ಅತ್ಯಂತ ಆಗ್ಗವಾದ ಬೆಲೆ!

ಸರಪಣಿ 1ಕ್ಕೆ ಕ್ರಯ 1—8—0 ಚಿಕ್ಕಸೈಜು ಧಾರಣಿ ವಾಚು 1ಕ್ಕೆ 3—8—0 ರಾಸ್ಕೋಪ್ ರಿವರ್ ವಾಚು 1ಕ್ಕೆ 2—8—0.

ವಿಳಾಸ:— ದಿ. ಯೂಲನ್ ಮಾರ್ಟ್,
ಆಸ್ಪತ್ರೆ ಎದುರು, ಮಂಗಳೂರು

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 9ನೇ ಸೆಪ್ಟಂಬರ 1910

ಭಾರತೀಯ ಪುನರುಜ್ಜೀವನವು.

ಅನೇಕ ವರುಷಗಳಿಂದ ಬಹಳ ದೀನಸ್ಥಿತಿಗೆ ಇಳಿದಿರುವ ಭರತಖಂಡದ ಪುನರುಜ್ಜೀವನವು ಪ್ರಕೃತ ಕಾಲಕ್ಕೆ ಸಾಗುತ್ತಿರುವುದೆಂಬುದನ್ನು ಸಿದ್ಧಪಡಿಸುವುದು ಈ ದೇಶದಲ್ಲಿಯೇ ಇರುವ ನಮಗಿಂತಲೂ ಈ ದೇಶವನ್ನಲ್ಲದೆ ಬೇರೆ ಯಾವುದೆಲ್ಲಿಯೂ ದೇಶವನ್ನು ಬಿಟ್ಟು ವಿದೇಶಗಳಲ್ಲಿ ಹಲವು ವರುಷಗಳ ವರೆಗೆದ್ದು ಸ್ವದೇಶ ಸಂಚಾರಾರ್ಥವಾಗಿ ಬಂದಂಥಾ ಸೆಂಟ್ ನಿಹಾಲ ಸಿಂಗರಂಥವರಿಗೆ ಬಹಳ ಚೆನ್ನಾಗಿ ತಿಳಿದಿರುವುದು ಇಂಥವರ ಅಭಿಪ್ರಾಯಗಳೇ ಈ ವಿಷಯದಲ್ಲಿ ದೇಶದ ಸ್ಥಿತಿಯನ್ನು ಹೊರಪಡಿಸುವುದರಿಂದ ಸೇಂಟ್ ನಿಹಾಲ್ ಸಿಂಗರವರು ಭಾರತೀಯ ಪುನರುಜ್ಜೀವನದ ವಿಷಯವಾಗಿ ಪ್ರಕೃತ ಯಾವ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವರೆಂಬುದನ್ನು ದೇಶದ ಹಿತಾರ್ಥವಾಗಿ ತಿಳಿಯುವುದು ಅಗತ್ಯ. ಆಗ ದೇಶದ ಅಭಿವೃದ್ಧಿ ಸಾಧನೆಯಲ್ಲಿ ಇವ್ವಷ್ಟು ಪರಿಯಂತರ ಮುಂದುವರಿದಿರುವುದೆಂಬುದನ್ನು ತಿಳಿಕೊಳ್ಳಲು ಸಾಧ್ಯವಾಗಿ ಇನ್ನು ಮುಂದಿನ ಅಭಿವೃದ್ಧಿ ಪ್ರಯತ್ನಗಳಲ್ಲಿ ನಮಗೆ ಇದರಿಂದ ಪ್ರೋತ್ಸಾಹವು ದೊರೆಯುವುದು.

ಹಿಂದುಸ್ಥಾನದ ವಿಷಯವಾಗಿ ಹೊರ ರಾಷ್ಟ್ರಗಳಲ್ಲಿ ತಿಳಿದು ಬರುವ ವಿಷಯಗಳು ಪ್ರಕೃತವಿರಲೇ ನಿರಕ್ಷರ ಕುಕ್ಷಿಗಳಾದ ವಿದೇಯಶಕ್ತಿಯು ಜನರ ಜೀವನವೂ ಶಿಕ್ಷಣವನ್ನು ಹೊಂದಿದ ಹಿತಿಮಂ ಭಾರತೀಯ ವಿದ್ಯಾವಂತರ ರಾಜಕೀಯ ಕಳಕಳವೂ. ವಿದೇಶ ಲೇಖಕರು ಮುಖ್ಯವಾ ಆಂಗ್ಲೇಯರು ಮತ್ತು ಸಾಧಾರಣವಾಗಿ ಇತರ ದೇಶಸ್ಥರು ಹಿಂದುಸ್ಥಾನದಲ್ಲಿಯ ರಾಜದ್ರೋಹದ ವಿಷಯ ತೆಗೆದಾಗಲೆ ಬರೆಯುತ್ತಿರುವರಲ್ಲದೆ ದೇಶೀಯ ಪತ್ರಕರ್ತರೂ ಗ್ರಂಥಕರ್ತರೂ ಸಹಾ ರಾಜಕೀಯ ಮತ್ತು ಅರ್ಥಶಾಸ್ತ್ರ ವಿಷಯಗಳಿಗೆಯೇ ಮಾತ್ರ ಲಕ್ಷ್ಯ ಕೊಡುತ್ತಿರುವರು. ಈ ಸ್ಥಿತಿಯಲ್ಲಿ ಸೆಂಟ್ ನಿಹಾಲ್‌ಸಿಂಗರವರು ಭಾರತೀಯ ಪುನರುಜ್ಜೀವನದ ವಿಷಯವನ್ನು ಪ್ರಾರಂಭಿಸಿರುವರು.

ದೇಶದಲ್ಲಿ ವ್ಯಾಪಿಸಿರುವ ಅಸಮಾಧಾನ ಸ್ಥಿತಿಯನ್ನೂ ಸಿಡಿಮದ್ದಿನ ತೋಪೆ ಮೊದಲಾದವುಗಳ ಉಪಟಳಗಳನ್ನೂ ಮಾತ್ರ ಗ್ರಹಿಸಿಕೊಂಡು ವಿದ್ಯಾನಂತರದಲ್ಲಿ ಪ್ರತಿಯೊಬ್ಬರು ರಾಜದ್ರೋಹಿ ಯಾ ರಾಜಕೀಯ ಕಳಕಳವಿಲ್ಲದವರೆಂಬ ಅಭಿಪ್ರಾಯವು ಯಥಾರ್ಥವಲ್ಲವೆಂತ ಮೆ. ಸಿಂಗರವರು ಸಿದ್ಧಾಂತಿಸಿರುವರು. ದೇಶಕ್ಕೆ ಬಂದೊದಗಿರುವ ಒಡಕ್ಷಿತಿಯನ್ನೂ ಕ್ಷಾಮವನ್ನೂ ಜಲಪ್ರಳಯಗಳನ್ನೂ ಕೊಳೆರಾ ಪ್ಲೇಗು ಮೊದಲಾದವುಗಳನ್ನು ಶಮನಿಸುವುದು ಮಾತ್ರವಲ್ಲ, ದೇಶ ಹಿತಾರ್ಥವಾದ ಇನ್ನು ಬಗೆ ಬಗೆಯ ಸಾಧನೆಗಳನ್ನು ಭಾರತೀಯ ಸುಂದರಾಳಾಳು ಕೈಕೊಂಡಿರುವರೆಂದು ಮೆ. ಸಿಂಗರವರು ಸೂಚಿಸಿರುತ್ತಾರೆ. ಇತರ ಜನಾಂಗಗಳಿಗೆ ಗೋಚರವಾಗದೆಯೂ ಅವುಗಳಿಂದ ಪ್ರೋತ್ಸಾಹಿಸಲ್ಪಡದೆಯೂ ಹಿಂದುಸ್ಥಾನವು ತನ್ನ ಸಮಾಜವನ್ನು ವ್ಯವಸ್ಥೆ ಪಡಿಸುತ್ತ ಸಮಯಕ್ತನುಸಾರವಾಗಿ ತನ್ನನ್ನು ತಾನು ಆಡಳಿತಗೊಳಿಸುತ್ತಿರುವುದು ಇಂಥಾ ಮಾರ್ಪಾಟುವು ಹಿಂದುಸ್ಥಾನದಲ್ಲಿ ಪ್ರಾರಂಭವಾಗದ್ದು ಇತ್ತಲಾಗಲ್ಲ ಎರಡು ಮೂರು ತಲಾಂತರಗಳ ಹಿಂದಿನಿಂದ ಈ ಮಾರ್ಪಾಟಿಕ್ಕೆ ಪ್ರಾರಂಭವಾಗಿರುವುದು

ನೀವು ಎಂದಾದರೂ ಎರಡು ಚಕ್ಕುಮುಕ್ಕು ಕಲ್ಲಿನ ತುಂಡುಗಳನ್ನು ಒಲವತ್ತಾಗಿ ಒಂದಕ್ಕೊಂದು ಹೊಡೆದದ್ದನ್ನು ನೋಡಿರುವಿರಾ? ಈ ಎರಡು ಕಲ್ಲಿನ ತುಂಡುಗಳ ಸಂಘರ್ಷಣೆಯಿಂದ ಏನು ಉದ್ಭವಿಸುತ್ತದೆಂದು ತಿಳಿದಿರುವಿರೋ? ಬೆಂಕಿಯ ಕಿಡಿಗಳು ಈ ಕಲ್ಲುಗಳಿಂದ ಉದ್ಭವಿಸುವವಲ್ಲ. ಹೀಗೆಯೇ ಹಿಂದುಸ್ಥಾನದಲ್ಲಿ ಭಾರತೀಯ ಪುರಾತನ ನಾಗರೀಕತೆ ಮತ್ತು ಪಾಶ್ಚಾತ್ಯ ನವನಾಗರೀಕತೆಗಳ ಸಂಘರ್ಷಣದಿಂದ ಭಾರತೀಯ ಪುನರುಜ್ಜೀವನ ಜ್ಯೋತಿಯ ಕಿಡಿಗಳು ಉದ್ಭವಿಸಿರುವವು. ಭಾರತೀಯ ಮತ್ತು ಪಾಶ್ಚಾತ್ಯ ಸುಧಾರಣೆಗಳು ಒಂದಕ್ಕೊಂದು ಸಂಘರ್ಷಿಸದೆ ಬಹುಕಾಲ ಹಿಂದುಸ್ಥಾನದಲ್ಲಿ ಒಂದಕ್ಕೊಂದು ತಾಗಿ ಸಂಗಾತವಿದ್ದವು. ರುಶ್ಯಜಪಾನೀಯ ಯುದ್ಧ, ಪರ್ಶಿಯಾ ಮತ್ತು ತುರ್ಕಿ ದೇಶದಲ್ಲಿ ಸ್ಥಾಪಿಸಲ್ಪಟ್ಟ ಪ್ರಜಾನಿಯುಕ್ತ ಸರಕಾರ ಮತ್ತು ಚೀನಾದೇಶದಲ್ಲಿ ತೋರುವ ಅಭಿವೃದ್ಧಿ ಸಾಧ್ಯವು ಇವ್ವೆಲ್ಲಾ ಸ್ಥಾನದಲ್ಲಿ ಪಾಶ್ಚಾತ್ಯ ಮತ್ತು ಭಾರತೀಯ ಸುಧಾರಣೆಗಳ ಸಂಘರ್ಷಣೆಯಿಂದ ಹಿಂದುಸ್ಥಾನದ ಅಸಂತುಷ್ಟಿ ಎಂಬ ಕಿಡಿಗಳು ಇದರಿಂದ ಉದ್ಭವಿಸಿರುವವು. ಶತಮಾನ ಈ ಕಿಡಿಗಳು ಬೆಳದು ಜ್ಯೋತಿಯುಂಟಾಗಿ ಈ ಜ್ಯೋತಿಯಿಂದ ಜನಾಂಗದ ಅಲಸ್ಯವೆಲ್ಲವು ತೊಲಗಿಸಲ್ಪಟ್ಟು ಭೂಲೋಕದ ಮುಂದಾಳುಗಳಾಗಿರುವ ಜನಾಂಗಗಳಲ್ಲಿ ಭಾರತೀಯ ಜನಾಂಗವು ಒಂದಾಗಿ ಪರಿಣಮಿಸುವುದೆಂತ ಸೆಂಟ್ ನಿಹಾಲ್ ಸಿಂಗರವರು ಪ್ರವಾದಿಸಿರುವರು.

ಭಾರತೀಯರು ದಾಸ್ಯವನ್ನು ಸ್ವೀಕರಿಸುವ ಸ್ವಭಾವದವರೂ. ಸ್ವತಂತ್ರಕಾರ್ಯಗಳನ್ನು ಮಾಡಲಶಕ್ತರೂ ಎಂಬ ಭಾವನೆಗೆ ಪಾಶ್ಚಾತ್ಯರಲ್ಲಿ ಆಸ್ಪದವಿತ್ತು. ಆ ಭಾವನೆಯು ಎಂದೂ ಪೂರ್ಣವಾಗಿ ನಿಜವಾಗಿದ್ದಿಲ್ಲ ಈಗಲೀಗ ಇರು ಮಾಡಿಹೋಗುತ್ತಲಿದ್ದು ಭಾರತೀಯರಲ್ಲಿ ಪ್ರಕೃತ ಸ್ವಾತಂತ್ರ್ಯ ಪ್ರೀತಿಯೂ ಸ್ವಾವಲಂಬನವೂ ಹೊರಹೊಮ್ಮುತ್ತಿರುವುದೆಂತ ಹೇಳಿ ಸ್ವರ್ಗಸ್ಥ ಸ್ವಾಮಿ ವಿವೇಕಾನಂದರವರು ದಿವಾರಾತ್ರಿ ತನ್ನ ದೇಶಬಾಂಧವರು ಪರಿಪಟೇಕೆಂದು ಬೋಧಿಸುತ್ತಿದ್ದ ವ್ಯಾಪ್ತಿಯನ್ನು ಎತ್ತಿ ಹೇಳಿರುವರು "ಮಹೋನ್ನತನಾದ ದೇವನೇ! ಸೃಷ್ಟಿಯ ಆದಿಗೆ ದೇವತೆಯಾದ ಮಾತೆಯೇ, ನನ್ನಲ್ಲಿ ಪೌರುಷವನ್ನು ದಯಪಾಲಿಸು, ಶಕ್ತಿವಂತತೆಯೇ, ನನ್ನಲ್ಲಿಂದ ಅಪೌರುಷತ್ವವನ್ನು ತೊಲಗಿಸುಬಿಡು," ಎಂಬೀ ವ್ಯಾಪ್ತಿ ನೆಯು ತನ್ನ ದೇಶ ಬಾಂಧವರಿಗೆ ಸ್ವಾಮಿ ವಿವೇಕಾನಂದರವರಿಂದ ಬೋಧಿಸಲ್ಪಟ್ಟದ್ದಾಗಿರುವುದು ಈ ವ್ಯಾಪ್ತಿಗೆನುಗುಣವಾಗಿ ಭಾರತೀಯರು ಪೌರುಷವನ್ನು ಹೊಂದುತ್ತಿರುವರೆಂತ ವ್ಯಕ್ತಪಡಿಸಿ ಇಂಥಾ ಪೌರುಷವು ಭಾರತೀಯರಲ್ಲಿ ಸ್ಥಾಗೆ ನೈಕ್ತವಾಗುತ್ತಿರುವುದೆಂಬುದನ್ನು ಋಜುಪಡಿಸಿರುವರು ಹಿಂದುಸ್ಥಾನದಿಂದ ಭೂಲೋಕದ ನಾಲ್ಕು ಕಡೆಗೆಯೂ ಹೋಗಿ ಲಕ್ಷ ಲಕ್ಷಾಂತರದ ಸಂಕಷ್ಟಗಳಿಗೆ ಗುರಿಯಾಗಿಲ್ಪಟ್ಟರೂ ಧೀರತನದಿಂದ ಅಲ್ಲಿ ನಿವಾಸಿಸಿಕೊಂಡು ಜಾಯಪ್ರದವನ್ನು ಹೊಂದಿರುವುದು ಭಾರತೀಯರ ಈ ಪೌರುಷತನ ಮೊದಲನೇ ಗುರುತಾಗಿರುವುದು ಮೂರಜಕ್ತಿಯು ಕಟ್ಟಳೆ ವಿಚಾರ ಮೊದಲಾದವುಗಳನ್ನು ಗಣನೆಗೆ ತಾರದೆ ಶಿಕ್ಷಣಾರ್ಥ ಅವಾ ವಿಹಾರಾರ್ಥವಾಗಿ ಕೆಲವರೂ, ವಿದೇಶಗಳಲ್ಲಿ ಸ್ವಲ್ಪಕಾಲದ ವರೆಗೆ ಅವಾ ಕಾಯಂ ಆಗಿ ಇಳಿದುಕೊಳ್ಳುವರೆಯನುತ್ತ ಕೆಲವರೂ, ಸ್ವದೇಶವನ್ನು ಬಿಟ್ಟು ಹೋಗಿರುವರಲ್ಲದೆ, ತಾವು ಹೋದಂಥಾ ಅಂಗ್ಲಾಳ್ಕ, ಅಮೇರಿಕ ಮೊದಲಾದ ವಿದೇಶಗಳಲ್ಲಿ ಅಲ್ಲಿಯ ದೇಶಸ್ಥರಿಗಿಂತ ಮಿಗಿಲೆಂಬುವ ಕೀರ್ತಿಯನ್ನು ಸಹಾ ಪಡದಿರುವರು ಭಾರತೀಯ ವಿದ್ಯಾರ್ಥಿಗಳಲ್ಲಿ ಹಲವರು ವಿದೇಶಗಳ ಶಿಕ್ಷಣಾಲಯಗಳಲ್ಲಿ ಪ್ರಥಮ ಸ್ಥಾನವನ್ನು ಹೊಂದಿರುವರು ಭಾರತೀಯ ಕೆಲಸಗಾರರು ವಿದೇಶಗಳಿಗೆ ಕೆಲಸಕ್ಕಾಗಿ ಹೋಗಿ ಬುದ್ಧಿಶಕ್ತಿಯುಳ್ಳವರೂ ಕೆಲಸ ಜಾಣರೂ, ಕಷ್ಟಸಹಿಷ್ಣುಜನರೂ ಎಂಬ ಖ್ಯಾತಿಯನ್ನು ಪಡದಿರುವರು ಇದೇ ರೀತಿ ಭಾರತೀಯರು ವರ್ತಕ ರಾಜ್ಯಕಾರ ವಕೀಲ ಮೊದಲಾದ ವೃತ್ತಿಗಳನ್ನು ಅನಿವಾರ್ಯವಾದ ಪ್ರವೀಣತೆಯಿಂದ ವಿದೇಶಗಳಲ್ಲಿ ನಡಿಸುತ್ತಿರುವರು ಈ ವಿದ್ಯಮಾನಗಳಿಂದ ಭಾರತೀಯ ಪುನರುಜ್ಜೀವನವು ಚಲೋದಾಗಿ ಸಾಗುತ್ತಿರುವುದೆಂಬುದನ್ನು ಯಾರು ತಾನೇ ಹೇಳಲಾರರು?

ಹಿಂದುಸ್ಥಾನದಲ್ಲಿಯೂ ವಿದೇಶಗಳಲ್ಲಿಯೂ ಇರುವ ಭಾರತೀಯರು ವಿದೇಶಗಳಿಗೆ ಹೋಗಿ ವಾಸಿಸುವ ತಮ್ಮ ಒಂದು ಜನರಿಗೆ ಅಲ್ಪಿಯ ಸ್ವದೇಶಸ್ಥರ ದ್ವೇಷದಿಂದ ಉಂಟಾಗುವ ಅಪದೆಸೆಯನ್ನು ಕುರಿತು ಜಾತಿ ಮತ ಕುಲಭೇದ ಮೊದಲಾದವುಗಳನ್ನು ಲೆಕ್ಕಿಸದೆ ಪಡುವ ಅನುತಾಪದಿಂದಲೂ ದುಃಖದಿಂದಲೂ ಭಾರತೀಯ ಜನಾಂಗ ಏಕ್ಯವ್ಯವೈಕ್ಯವಾಗುವುದು. ಈ ಜನಾಂಗ ಏಕ್ಯದ ಭಾವನೆಯನ್ನು ನಂದರ್ಭಾನುಸಾರ ಭಾರತೀಯರಿಂದ ಗೋಚರಿಸಲ್ಪಟ್ಟು ವಿವಿಧ ಜಾತಿ ಮತಗಳುಳ್ಳ ಭಾರತೀಯರು ಒಂದೇ ಜನಾಂಗವಾಗುವರೆಂತ ಸೆಂಟ್ ನಿಹಾಲ್ ಸಿಂಗರವರು ವಿಶದಪಡಿಸಿರುವರು.

ಪರದೇಶಗಳಲ್ಲಿ ಹೋಗಿ ವಸ್ತಿಮಾತಿಕೊಂಡಿರುವ ಭಾರತೀಯರಲ್ಲಿಯೂ ಹಿಂದುಸ್ಥಾನದ ಯುವಕ ವರ್ಗದಲ್ಲಿಯೂ ವ್ಯಕ್ತವಾಗುತ್ತ ಬರುತ್ತಿರುವ ಪೌರುಷದಿಂದ ಅನ್ಯ ಜನಾಂಗದವರೊಂದಿಗೆ ವೈಷಮ್ಯವು ಉಂಟಾಗಲಿಕ್ಕಿಲ್ಲವೆಂತ ಮೆ| ಸಿಂಗರವರ ಅಭಿಮತ. ಯಾಕಂದರೆ ಭಾರತೀಯರಲ್ಲಿ ಅಂಕುರಿಸಿರುವ ಪೌರುಷಯುತವಾದ ನವಚೇತನವು ಸ್ವಾರ್ಥಪರವಾಗಿಲ್ಲ. ಆಜ್ಞೋಪಕ್ಕೆ ಸಾಧ್ಯವಾಗಿದ್ದು ಪರಿಶುದ್ಧವಾಗಿರುವುದು. ಟ್ರಾನ್ಸ್‌ವಾಲ್ ಭಾರತೀಯರು ಬೂರರಿಂದ ಪಡಿಯುವ ಸಂಕಷ್ಟಗಳನ್ನು ಧೀರತನದಿಂದಲೂ ತಾಳ್ಮೆಯಿಂದಲೂ ಸಹಿಸಿಕೊಂಡಿರುವುದೇ ಈ ನವಚೇತನಯುತವಾದ ಪೌರುಷದ ದೃಷ್ಟಾಂತವಾಗಿರುವುದು. ಶತಾಬ್ದಗಳಿಂದ ಧರ್ಮಬದ್ಧನಾಗಿ ಭಾರತೀಯನು ಪಡೆದಿರುವ ಧರ್ಮವಿಕಾಸವು ಆತನನ್ನು ಎಂದೂ ಬಿಟ್ಟು ತೊಲಗದ್ದಾದ್ದರಿಂದ ನವಚೇತನದಿಂದ ಅನ್ಯ ಜನಾಂಗ ವೈಷಮ್ಯವು ಉಂಟಾಗದೆ ಇತರ ಜನಾಂಗಗಳಿಗೆ ಭಾರತೀಯ ನವಚೇತನದಿಂದ ಮತ ತತ್ವಜ್ಞಾನಾಧಿಕ್ಯಗಳು ಪೂರ್ವಕಾಲದಂತೆಯೇ ಈಗಲೂ ಪ್ರಾಪ್ತವಾಗುವನೆಂತ ಮೆ| ಸಿಂಗರವರ ಅಭಿಮತವಾಗಿರುತ್ತದೆ.

ಪ್ರಾಮುಖ್ಯತೆಯಲ್ಲಿ ಇಂಗ್ಲೀಷ್ ಭಾಷಾ ಶಿಕ್ಷಣದಿಂದ ಭಾರತೀಯರಲ್ಲಿ ಕುಂಟಾಗಿದ್ದ ಕುಂದು ಕಾರಣ ವರ್ಣಿಸಿ, ವ್ಯವಸಾಯ, ಕಲಾಶಿಕ್ಷಣಗಳಲ್ಲಿ ಭಾರತೀಯರು ಅಭಿವೃದ್ಧಿಯ ಮೆಟ್ಟಿಲ್ಲಾಗಿ ಹೊಂದುತ್ತಿರುವರೆಂಬದನ್ನು ಸೂಚಿಸಿ ರಾಜಕೀಯ ವಿಷಯಗಳಲ್ಲಿ ಮಾತ್ರ ವಲ್ಲ ದೇಶಾಭಿವೃದ್ಧಿಕರವಾದ ಎಲ್ಲಾ ವಿಷಯಗಳಲ್ಲಿಯೂ ಭಾರತೀಯ ಪುನರುಜ್ಜೀವನ ವಾಗುತ್ತಿರುವುದೆಂಬುದನ್ನು ರುಜುಪಡಿಸಿರುವರು

ಮೂಲಗೇಣಿ ಆಸ್ತಿಗಳ ಹೆಚ್ಚಿದ ತೀರ್ವೆ ಕುರಿತು

ಮದ್ರಾಸು ಹೈ ಕೋರ್ಟ್ ಫುಲ್ ಬೆಂಚಿನ ತೀರ್ಮಾನ.

[illegible]

ಮೂಲಗೇಣಿ ಆಸ್ತಿಯ ಮೂಲಗಾರನಿಗ ಮೂಲಗೇಣಿ ಚೀಟ್ಟಿನಲ್ಲಿ ನಮೂದಿ ಸೋಣಾದ ಗೇಣಿ ಹೊರತು ಮತ್ತೇನೂ ಹೆಚ್ಚಿನ ಪ್ರಯೋಜನವಿಲ್ಲ ಆಸ್ತಿಯ ಇತರ ಎಲ್ಲಾ ಪ್ರಯೋಜನಗಳನ್ನು ಮೂಲಗೇಣಿ ಒಕ್ಕಲೇ ಅನುಜವಿಸಿ ಬರುತ್ತಿರುವುದರಿಂದ ತೀರ್ವೆಯ ಹೆಚ್ಚಿದಂಗವನ್ನು ಪೂರ್ಣವಾಗಿ ಒಕ್ಕಲೇ ಕೊಡಬೇಕು ಇಲ್ಲವಾ ಮೂಲಗಾರನೂ ಒಕ್ಕಲೂ ಆಸ್ತಿಯಿಂದ ಪಡೆಯುವ ಪ್ರಯೋಜನದ ದಾಮಾಷಾಯಿಯಂಗ ಈ ಹೆಚ್ಚಿದ ತೀರ್ವೆಯು ತಂತಮ್ಮೊಳಗೆ ಕುಂದಿ ತೆರಬೇಕೆಂತ ವಾದ ಉದ್ದಾ ಮೂಲಗೇಣಿ ಆಸ್ತಿಯ ಪಟ್ಟಾದಾರರ ಕಡೆಯಿಂದ ವಾದವು ಕ್ಯಾಕೋರ್ಟ್ ಜತ್ತರ ಮುಂದೆ ಗೂಡ ಲ್ಪಟ್ಟಿತ್ತು. ಆದರೆ ಕ್ಯಾಕೋರ್ಟ್ ಜತ್ತರವರ ಈ ವಾದವನ್ನು ಒಗಿಂಕರಿಸಿದಲ್ಲ 1818ನೇ ವರುಷದಲ್ಲಿ ರೆವಿನ್ಯು ಬೋರ್ಡಿನವರು ದಿನುಸಿರುವ ಮೂಲಗೇಣಿಚೀಟ್ಟಿನ ಕ್ರಮಕ್ಕೂ ತದನಂತರದಲ್ಲಿ ನಮ್ಮ ಜಿಲ್ಲೆಯಲ್ಲಿ ಬ್ಯಾಲಮಲ್ಲಿರುವ ಮೂಲಗೇಣಿಚೀಟ್ಟು ಗಳ ಕ್ರಮಕ್ಕೂ ಜೇವವಿಲ್ಲವೆಂತ ಹೇಳಿ ಈ ಜಿಲ್ಲೆಗೆ ವಿಶೇಷವಾಗಿರುವ ಈ ಕ್ರಮದಿಂದ ಆಸ್ತಿಯ ಮೂಲಗಾರರು ಹಲವು ಸಂದರ್ಭಗಳಲ್ಲಿ ಮೂಲಗೇಣಿ ಮೇಲೆ ಆಸ್ತಿಗಳನ್ನು ಕೊಡುವಾಗ ಮುಂಗಡವನ್ನು ಪಡೆಯುವುದುಂಟಾಗಲೂ, ಇನ್ನು ಹಲವು ಸಂದರ್ಭಗಳಲ್ಲಿ ಸಾಧಾರಣ ಇತಲಿಗೆಣಿಗಿಂತ ಹೆಚ್ಚಾಗಿರುವ ಗೇಣಿಯನ್ನು ಮೂಲಗೇಣಿಯಾಗಿ ಪಡೆಯುವುದರಿಂದಲೂ ಮೂಲಗೇಣಿಯಾಗಿ ಕೊಟ್ಟಾಗಾಗಲಿ ಇವೆರಿನ ಹೊರತು ಇತರ ಪ್ರಯೋಜನಗಳು ಆಸ್ತಿಯ ಮೂಲಗಾರರಿಗೆ ದೊರಕುವುದುಂಟು. ಇಲ್ಲದೆ ಮೂಲಗೇಣಿ ಆಸ್ತಿಗಳನ್ನು ಪರಾಧೀನ ಮಾಡುವುದು. ಅದರಲ್ಲಿರುವ ಮರಮಟ್ಟು ಪೊಲಾವಳಿ ವುಗಳನ್ನು ಕಡಿಯುವುದು ಈ ಮೊದಲಾದ ಸ್ವತಂತ್ರಗಳು ಸಾಧಾರಣವಾಗಿ ಮೂಲ ಗೇಣಿ ಒಕ್ಕಲಿಗಿರುವುದಿಲ್ಲ ಮತ್ತು ಮೂಲಗೇಣಿ ಆಸ್ತಿಯು ತನಗೆ ಬೇಕಾದಂತೆ ಒಕ್ಕಲಿಗೆ ತೋರಿದಲ್ಲಿ ಅಂದರೆ ಮಾತೋಷಾಗ ಕೃತಗಳ ಮೌಲ್ಯವನ್ನು ಕೊಟ್ಟು ಆಸ್ತಿಯನ್ನು ಪುನಹ ಸ್ವಾಧೀನಮಾಡಿಕೊಳ್ಳುವ ಹಕ್ಕು ಮೂಲಗೇಣಿಚೀಟ್ಟುಗಳಲ್ಲಿ ಧನಿಗೆನೇ ಇಟ್ಟಿರುವುದು ಒಂದು ವೇಳೆ ಮೂಲಗಾರಿಕೆ ಒಕ್ಕಲು ನಿಸ್ಸಂತತಿಯಾಗಿ ಮೃತಪಟ್ಟಲ್ಲಿ ಆಸ್ತಿಯು ಮೂಲಗಾರರಿಗೇ ದೊರಕುವುದುಂಟು. ಈ ವಿಶೇಷಾನ ಗಳಲ್ಲಿ ಮೂಲಗೇಣಿ ಆಸ್ತಿಯ ಪ್ರಯೋಜನವು ಸಂಪೂರ್ಣವಾಗಿ ಮೂಲಗಾರನಿಗೆ ಒಕ್ಕಲಿಗೆನೇ ಉಂಟೆಂತ ಹೇಳುವ ವಾದವನ್ನು ಜಸ್ಟೀಸ್ ಬೆನ್ನನರವರು ಸ್ವೀಕರಿಸಲಿಲ್ಲ

ಪ್ರತಿವಾದಿ ಯಾ ಮೂಲಗೇಣಿ ಒಕ್ಕಲು ಏರಿದ ತೀರ್ವೆಯನ್ನು ಪೂರ್ಣವಾಗಿ ಮೂಲಗಾರನೇ ಕೊಡಬೇಕೆನ್ನುವುದು ನಮ್ಮ ಯುಕ್ತವಲ್ಲವೆಂತ ಸ್ಟೀಂಸ್ ಜಸ್ಟರವರು ವ್ಯಕ್ತಪಡಿಸಿರುವರು ದಾವೆಗೆ ಕಾರಣವಾದ ಮೂಲಗೇಣಿ ಚೀಟ್ಟು 1870ರಲ್ಲಿ ಉದ್ದಾ ಏರಿದ ತೀರ್ವೆಯನ್ನು ಯಾರು ಕೊಡಬೇಕೆಂಬ ವಿಚಾರದಲ್ಲಿ ನಮೂದಿಸಿಲ್ಲವಾದ ಕಾರಣ ಆ ಕಾಲದಲ್ಲಿರಲಿಲ್ಲ 1811ರಲ್ಲಿ ನಮ್ಮ ಜಿಲ್ಲೆಯಲ್ಲಾರ ರಾಮ್ ಪೆಟ್ಟ್ ಮೆಂಟ್ ಪ್ರಕಾರ ಅಯಾ ವರ್ಗಗಳ ಮೇಲೆ ವಿಧಿಸಲ್ಪಟ್ಟ ಜೊಕಂದಾಯವು ಎಲ್ಲಾಯಿ ಸಲ್ಪಡಲಿಲ್ಲ ಮೂಲಗೇಣಿಗೆ ಕೊಟ್ಟಿರುವ ಆಸ್ತಿಯನ್ನು ಕೂಡಿರುವ ವರ್ಗದ ಮೇಲಿನ ಭೂಕಂದಾಯವನ್ನು ವರ್ಗದಾರರೇ ತೆರುತ್ತಿದ್ದರಾದರೂ ಅಂಥಾ ಜೊಕಂದಾಯವು ಪ್ರಕೃತ ವರ್ಗದಲ್ಲಿ ಕೂಡಿರುವ ಗದ್ದೆ ತೋಟಗಳಾದವುಗಳ ಮೇಲೆ ವಿಂಗಡ ವಿಂಗಡವಾಗಿ ವಿಧಿಸಲ್ಪಟ್ಟಿದ್ದರೂ, ಈ ಕಾರಣಗಳಿಂದ ಏರಿದ ತೀರ್ವೆಯನ್ನು ದನಿಯೇ ಕೊಡಬೇಕೆನ್ನುವ ಅವ್ಯಕ್ತವಾದ ಶರ್ತವಿರುವುದೆಂದು ವಾದಿಸುವುದು ಈ ದಾವೆಯ ವಿದ್ಯಮಾನಗಳಲ್ಲಿ ಉಚಿತ ತೋರುವುದಿಲ್ಲ. ಪ್ರತಿವಾದಿಯು ಏರಿದ ತೀರ್ವೆಯನ್ನು ತಾನು ಕೊಡಲು ಬದ್ಧನಲ್ಲವೆಕೆಂಬುವ ತನ್ನ ವಾದವನ್ನು ಆದರಿಸುವರೆ ತಮ್ಮ ಲಕ್ಷ್ಯಕ್ಕೆ ತಂದಿರುವ ಮುಂಬಯಿ ಹೈಕೋರ್ಟಿನ (I L R. 3 Bom 154, 4 Bom 473) ತೀರ್ಮಾನಗಳು ಈ ದಾವೆಗೆ ಸಮರ್ಪಕವಾಗಿ ಲಗಾವಾಗುವಂಥವುಗಳೆಂತ ಹೇಳಲಾಗಲಿಕ್ಕಿಲ್ಲ. ಯಾಕಂದರೆ ಮುಂಬಯಿ ಹೈಕೋರ್ಟಿನ ಈ ಎರಡು ತೀರ್ಮಾನಗಳಲ್ಲಿ ಮೂಲಗೇಣಿ ಚೀಟ್ಟಿನ ಕ್ರಮವನ್ನು ವ್ಯಕ್ತಪಡಿಸದೆ ಸರಕಾರದಿಂದ ಹೆಚ್ಚಿಸೋಣಾದ ತೀರ್ವೆಯ ಅಂಶವನ್ನು ಮೂಲಗಾರನಿಗೆ ದೊರಿಯೋಣಾಗುವ ಮೂಲಗೇಣಿ ಆಸ್ತಿ [illegible] ಯಾಗಿಯೇ ಕೊಡಿಸೋಣಾಗಬೇಕೆಂಬುವ ಮೂಲಗಾರನ ಹಕ್ಕನ್ನು [illegible] ದೆಂದು ಆ ಕೋರ್ಟಿನವರು ಅಭಿಪ್ರಾಯಪಟ್ಟು ಮೂಲಗೇಣಿಚೀಟ್ಟಿನಲ್ಲಿ ಗೇಣಿಯನ್ನು ಹೆಚ್ಚಿಸುವ ಶರ್ತವಿಲ್ಲದ್ದರಿಂದ ಈ ಏರಿದ ತೀರ್ವೆಯ ಹೆಚ್ಚಿನಂಶವು ಮೂಲಗಾರನಿಗೆ ವಕ್ಕಲಿನಿಂದ ದೊರಿಯಲಾರದೆಂದು ತೀರ್ಮಾನಿಸಿರುವರು. ಆದರೆ ಈ ದಾವೆಯಲ್ಲಿ ಮೂಲಗಾರರು ಆಸ್ತಿಯ ಗೇಣಿಯನ್ನು ಹೆಚ್ಚಿಸುವ ಹಕ್ಕನ್ನು ಕೇಳಿರುವರೆಂತ ತಾನು ಅಭಿಪ್ರಾಯಪಡುವುದಿಲ್ಲವೆಂತ ಜಸ್ಟೀಸ್ ಬೆನ್ನನರವರು ಆಜ್ಞಾಪಿಸಿರುವರು. ಆಸ್ತಿಯ ಜೊಕಂದಾಯವೂ, ಗೇಣಿಯೂ ಮೂಲಗೇಣಿಚೀಟ್ಟಿನ ಪ್ರಕಾರ ಸಮ್ಮಂಧಪಟ್ಟವುಗಳಲ್ಲ ಗೇಣಿಯೊಡನೆ ಈ ಏರಿದ ತೀರ್ವೆಯ ಅಂಶವು ತನಗೆ ಕೊಡಿಸೋಣಾಗದೇ ಕೆಂಬುದು ಮೂಲಗಾರರ ಹೇಳಿಕೆಯಾಗಿರುವುದು. ವಾದಿ ಯಾ ಪ್ರತಿವಾದಿಯು ಯೋಚಿಸದಿರುವ ಸರಕಾರದವರು ಹೆಚ್ಚಿಸಿರುವ ತೀರ್ವೆಯನ್ನು ಯಾರು ಕೊಡಬೇಕೆಂಬ ವಿವಾದಾಂಶವನ್ನು ಮುಂಬಯಿ ಹೈಕೋರ್ಟಿನವರು ಪರ್ಯಾಲೋಚಿಸಲಿಲ್ಲ.

ಈ ಸಂಸ್ಥಾನದಲ್ಲಿ ಜೊತೆಗೆ ಯಾಗಿ ಜೊ ಉತ್ಪತ್ತಿಯ ಒಂದಂಶದ ಮೌಲ್ಯವು ಸರ ಕಾರದವರಿಗೆ ತೆತ್ತೋಣಾಗುವುದು ಜೊ ಉತ್ಪತ್ತಿಯ ಮೌಲ್ಯವು ಹೆಚ್ಚಾದಾಗ ಅಥವಾ ಜಮೀನಿನ ಉತ್ಪತ್ತಿ ಗುಣವು ಅಧಿಕವಾದಾಗ, ಒಯ್ಯೋಣ ಸೌಕರ್ಯಗಳನ್ನು ಹೆಚ್ಚಾಗಿ ರಚಿಸಿದಾಗ ಅಥವಾ ಜೊ ಕಂದಾಯವು ಇತರ ಯಾವುದಾದರೂ ಕಾರಣ ಗಳಿಂದ ಅತಿ ಕಡಿಮೆಯೆಂತ ತೋರಿದಾಗ ಸರಕಾರದವರು ಜಮೀನು ಕಂದಾಯವನ್ನು ಹೆಚ್ಚಿಸುವರು ತೀರ್ಮಾನದ ಬಗ್ಗೆ ಹೈಕೋರ್ಟಿಗೆ ಮುಂದೆ ಬಂದ ಈ ದಾವೆಯಲ್ಲಿ ವಾದಿಯು ಪ್ರತಿವಾದಿಯ ಕೃತಗಳಿಂದ ಬೇರೇಜು ಹೆಚ್ಚಲು ಕಾರಣವಾದ್ದರಿಂದ ಹೆಚ್ಚಿದ ಬೇರೇಜನ್ನು ಪ್ರತಿವಾದಿಯೇ ಕೊಡಬೇಕೆಂಕ ವಾದಿಸಲ್ಪಟ್ಟಿರುವುದು ಆದರೆ ಈ ದಾವೆಯನ್ನು ತನಬಿ ಮಾಷಿಲ ಡಿಸ್ಟ್ರಿಕ್ಟ್ ಮುನ್ಸಿಫರು ಪ್ರತಿವಾದಿಯ ಕೃತದಿಂದ ತೀರ್ವೆಯು ಹೆಚ್ಚಿಸಲ್ಪಟ್ಟಿದ್ದಲ್ಲವೆಂತ ತೀರ್ಮಾನಿಸಿರುವರು ಆದಲ್ಲದೆ ಕೃತಗಳಿಂದ ತೀರ್ವೆಯ ಎಷ್ಟಂರವು ಹೆಚ್ಚಿಸಲ್ಪಟ್ಟಿರುವುದೆಂಬದನ್ನು ನಿರ್ಣಯಿಸುವುದು ಕಷ್ಟ ಮತ್ತು ಸೆಟ್ಲಮೆಂಟ್ ಇಲಾಪೆಯವರು ಕೃತಗಳ ಮೇಲೆ ತೀರ್ವೆಯನ್ನು ಹೆಚ್ಚಿಸುವುದಲ್ಲ, ತೀರ್ವೆಯನ್ನು ನಿರ್ಣಯಿಸುವುದರಲ್ಲಿ ಒಂದೆರಡು ಗದ್ದೆಗಳ ಉತ್ಪತ್ತಿ ಗುಣಗಳನ್ನು ವಿಚಾರಿಸದೆ ಅಂಥಾ ಹಲವು ಗದ್ದೆಗಳನ್ನು ಸೇರಿಕೊಂಡಿರುವ ಪ್ರದೇಶದ ಉತ್ಪತ್ತಿಗುಣ ಮೊದಲಾದ ವುಗಳನ್ನು ಸಮುದಾಯವಾಗಿ ಪರ್ಯಾಲೋಚಿಸುವರು ಎಂತ ಈ ವಿಷಯವಾಗಿರುವ ರೆವಿನ್ಯು ಬೋರ್ಡಿನ ಸ್ಟೆಂಡಿಂಗ್ ಒರ್ಡರಿನ ಅಧಾರದ ಮೇಲೆ ಜಸ್ಟೀಸ್ ಬೆನ್ನನರವರು ಅಭಿಪ್ರಾಯಪಟ್ಟರು. ಒಂದು ವೇಳೆ ಏರಿದ ತೀರ್ವೆಯ ಒಂದಂಶವು ಒಕ್ಕಲು ಮಾಡಿದ ಕೃತಗಳ ಕಾರಣದಿಂದಲೇ ಹೆಚ್ಚಿಸಲ್ಪಟ್ಟಿದ್ದರೂ ದನಿಯು ಈ ಕೃತಗಳಿಂದ ಏರಿದ ತೀರ್ವೆಯ ಒಂದಂಶವನ್ನು ಕೊಡಲು ಬದ್ಧನಾಗುವುದಿಲ್ಲವೆಂತ ಹೇಳಲಾಗದು ಯಾಕಂದರೆ ಮೂಲಗೇಣಿ ಆಸ್ತಿಯ ಮೇಲೆ ಮೂಲಗಾರನಿಗಿರುವ ರಿವರ್ಸನರಿ ಯಾ ಮಾಲ್ಕತೆ ಹಕ್ಕಿಗಿರುವ ಜವಾಬ್ದಾರಿಯು ಇನ್ನಷ್ಟು ಈ ಕೃತಗಳಿಂದ ಹೆಚ್ಚುವುದು ಅದ್ದರಿಂದ ತೀರ್ವೆಯು ಮೂಲಗೇಣಿ ವಕ್ಕಲಿನ ಕೃತಗಳಿಂದ ಏರಿದಂತಾದರೂ ಇದರ ಒಂದಂಶವನ್ನು ಕೊಡುವರೆ ಮೂಲಗಾರನು ಬದ್ಧನಾಗಿರುವನು. ಜಮೀನಿನ ಉತ್ಪತ್ತಿಯ ಒಂದಂಶದ ಮೌಲ್ಯವಾಗಿ ಜೊಕಂದಾಯವು ಸರಕಾರದವರಿಂದ ಮೇಲೆ ನಮೂದಿಸಿದಂತೆ ವಿಧಿಸಲ್ಪಟ್ಟಿರುವುದೆ ಮತ್ತು 1801ನೇ ಇಸವಿಯ ಎಪಡನೇ ರೆವಿನ್ಯು ಒಕವು ಆಕ್ಟು ಪ್ರಕಾರ ಜಮೀನೂ ಅದರ ಮೇಲಿರುವ ಕಟ್ಟಡಗಳೂ, ಆದರ ಉತ್ಪತ್ತಿಯೂ ಸರಕಾರ ಕಂದಾಯಕ್ಕೆ ವಾಜ್ಞಾರಿಯಾಗಿರುವವು ಮದ್ರಾಸು ರೆವಿನ್ಯು ಸೆಟ್ಲಮೆಂಟ್ ವಿಧಿಯಲ್ಲಿ ಸೆಟ್ಲಮೆಂಟ್ ತೀರ್ವೆಯನ್ನು ಅಂಗೀಕರಿಸುವವರೆ ಜಮೀನಿನ ಮಾಲಿಕನು ಯಾವೆಂತ ಪ್ರಮಾಣವನ್ನೆ ನಿರ್ಣಯಿಸುವ ವಿಧಾನವು ಕೇರಿರುವುದಿಲ್ಲ. ಸೆಟ್ಲಮೆಂಟ್ ವಿಧಿಪ್ರಕಾರ ಸರಕಾರದವರು ಆಸ್ತಿಗೆನೆ ಯೋಗ್ಯ ಆ ಆಸ್ತಿಯಿಂದ ತಮಗೆ ತೀರ್ವೆಯು ಎಷ್ಟು ದೊರಕಬೇಕೆಂಬುವುದನ್ನು ನಿರ್ಣಯಿಸಿರುವರು ಹೀಗೆ ಆಸ್ತಿಯ ತೀರ್ವೆಯನ್ನು ಕೊಡಲು ಸರಕಾರದವರಿಗೆ ಒಪ್ಪಿಗೆ ಕೊಟ್ಟದ್ದು ದನಿಯೋ ವಕ್ಕಲೆಂಬುವುದು ಸೆಟ್ಲಮೆಂಟ್ ಕ್ರಮಪ್ರಕಾರ ವ್ಯಕ್ತವಾಗುವುದಿಲ್ಲ. ಆದ್ದರಿಂದ ಮೂಲಗೇಣಿಚೀಟ್ಟಿನಲ್ಲಿ ಏರಿದ ತೀರ್ವೆಯನ್ನು ಯಾರು ಕೊಡಬೇಕೆನ್ನುವ ಶರ್ತಗಳು ಇಲ್ಲದ್ದರಿಂದ ಇಂಗ್ಲಿಷ್ ಲೆಂಡ್ ಲೇಕ್ಸ್ ಪ್ರಕಾರ ಮೂಲಗಾರನೂ ಮೂಲಗೇಣಿ ವಕ್ಕಲೂ ತಂತಮಗೆ ಆಸ್ತಿಯಿಂದ ದೊರಿಯುವ ಪ್ರಯೋಜನದ ದಾಮಾಷಾಯಿಯಲ್ಲಿ ಹೆಚ್ಚಿದ ತೀರ್ವೆಯನ್ನು ಕೊಡಬೇಕೆಂತ ಮೊದಲೊಮ್ಮೆ ಮದ್ರಾಸು ಹೈಕೋರ್ಟಿನಲ್ಲಿಯೇ ಇಂಥಾದೊಂದು ಇದೇ ಜಿಲ್ಲೆಗೆ ಸಮ್ಮಂಧಪಟ್ಟ ದಾವೆಯಲ್ಲಿ ಜಸ್ಟೀಸ್ ಶಂಕರನ್ನಾಯರರವರೂ ಮಿಲ್ಲರರವರೂ ತೀರ್ಮಾನಿಸಿದ್ದರು. ಆದರೆ ಆಗ್ಗೆ ಅವರು ರೆವಿನ್ಯು ರಿಕವರಿ ಆಕ್ಟಿನ

ತೀರ್ಮಾನಕ್ಕೆ ಸಾಕಾಗಿ ಕೊಡಲಿಲ್ಲ. ಆದ್ದರಿಂದ ರವಿನ್ಯು ರಿಕವರಿ ಆಕ್ಟಿನ ಈ ಪ್ರಕರಣದಲ್ಲಿ ಜಸ್ಟೀಸ್ ಶಂಕರನ್ನಾಯರರವರು ಮತ್ತು ಮಿಲ್ಲರರವರು ಕೊಟ್ಟ ತೀರ್ಮಾನವು ನೀತಿಪರವಾಗಿದ್ದರೂ ಅದನ್ನು ಸ್ವೀಕರಿಸುವರೆ ಆಗುವುದಿಲ್ಲ. ಏಳಿದ ತೀರ್ಮಾನವನ್ನು ಪಟ್ಟಾದಾರನೇ ಕೊಡಬೇಕೆಂತ ಜಸ್ಟೀಸ್ ಬಿನ್ನನರವರು ತೀರ್ಮಾನಿಸಿರುವರು.

ಈ ಅಪೀಲನ್ನು ತೀರ್ಮಾನಿಸಿದ ಇನ್ನೊಬ್ಬ ಜಡ್ಜರಾದ ಜಸ್ಟೀಸ್ ಒಲ್ಲಿಸ್‌ರವರು ತಮ್ಮ ತೀರ್ಮಾನದಲ್ಲಿ ಮೂಲಗೇಣಿ ವಕ್ಕಲಿನ ಹೆಸರಲ್ಲಿಯೇ ಒಂದು ಪೇಳೆ ಪಟ್ಟೆಯು ಕೊಡೋಣಾದರೂ ಕಾನೂನು ಪ್ರಕಾರ ಮೂಲಗೇಣಿ ವಕ್ಕಲು ಪಟ್ಟಾದಾರನಾಗ ಸೆಂದೂ ಗವರ್ನಮೆಂಟು ಹುಕುಂ ಪ್ರಕಾರ ಪಟ್ಟೆಯು ವರ್ಗದಾರರ ಹೆಸರಲ್ಲಿಯೇ ಕೊಡೋಣಾಗಬೇಕೆಂದು ಇರುವುದರಿಂದ ವರ್ಗದಾರನೇ ಪಟ್ಟಾದಾರನಾಗಿರಬೇಕೆಂದೂ ವಾದಿಸಿ ಸರಕಾರಕ್ಕೆ ಸಲ್ಲಬೇಕಾದ ತೀರ್ಮಾನವನ್ನು 1914ನೇ ರವಿನ್ಯು ರಿಕವರಿ ಆಕ್ಟು ಮೇರೆಗೆ ಆಸ್ತಿಯ ಮೂಲಧಾರನಿಗೆ ಸಂದಾಯವಾಗುವ ಗೇಣಿಯಿಂದ ಕೊಡಬಹುದಾದ್ದರಿಂದ ವಾದಿಯು ತಂದಿರುವ ಅಪೀಲನ್ನು ತೆಗೆದುಹಾಕಿರುವರು. ಈ ದಾವೆಗೆ ಸಮ್ಬಂಧಪಟ್ಟ ಮುಂಬಯಿ ಹೈಕೋರ್ಟಿನ ಮೇಲೆ ಸಮೂಹದಿಸೋಕಾದ ತೀರ್ಮಾನಗಳಿಗನುಸಾರವಾಗಿಯೇ ಈ ದಾವೆಯು ಇರುವುದೆಂತ ಜಸ್ಟೀಸ್ ಒಲ್ಲಿಸ್‌ರವರು ಅಭಿವ್ಯಾಯಪಟ್ಟರೂ ಏಳಿದ ತೀರ್ಮಾನವನ್ನು ಮೂಲಧಾರನೂ ಮೂಲಗೇಣಿ ವಕ್ಕಲೂ ತಂತಮ್ಮೊಳಗೆ ತಾರತಮ್ಯಾನುಸಾರ ತಂಡಿಕೊಂಡು ಸರಕಾರಕ್ಕೆ ತೆರುವುದು ನೀತಿಯುಕ್ತವಾಗಿರುವುದಲ್ಲದೆ ಸರಕಾರದವರು ಈ ಒಗ್ಗ ಕಾನೂನನ್ನು ಎರ್ಪಡಿಸುವುದು ಸಂತೋಷಕರವಾಗಿರುವುದೆಂದು ಸಹಾ ಅಭ್ಯಾಪಿಸಿದರು. ಆದರೆ ಇಂದಾದ್ದೇನೂ ಕಾನೂನು ಇಲ್ಲದೆ ಕೋರ್ಟಿನವರು ಈ ರೀತಿ ವರ್ತಿಸಿದ್ದಲ್ಲಿ ರವಿನ್ಯು ರಿಕವರಿ ಆಕ್ಟಿನ 67ನೇ ಪ್ರಕರಣವನ್ನು ಉಲ್ಲಂಘಿಸಿದಂತಾಗುವುದೆಂಬ ಸುಪಿನ ಮೇಲೆ ವಾದಿಯ ಅಪೀಲನ್ನು ತೆಗೆದುಹಾಕಿರುವರು.

ಫುಲ್‌ಬೆಂಚಿನ ಮೂರನೇ ಜಡ್ಜರಾದ ಕೃಷ್ಣಸ್ವಾಮಿ ಅಯ್ಯರರವರು ಜಸ್ಟೀಸ್ ಬಿನ್ನನರವರ ತೀರ್ಮಾನವನ್ನು ಅಂಗೀಕರಿಸಿರುವರು

ಮುಕ್ತಾಹಾರ.

(ಕಳದ ಸಂಚಿಕೆಯಿಂದ ಮುಂದರಿದಿದು)

IV

ರಥೋತ್ಸವ ರಾತ್ರೆ—ದೇವಾಲಯದ ಗೋಪುರದ ಮಾಳಿಗೆಯಲ್ಲಿ ಕೂತಿದ್ದ ರಮಣಿಯರ ಸಮೂಹವು ಚಿಟಿಕೆಗಳಲ್ಲಿ ಸೇರಿ ಕೆಳಗೆ ನಡಿಯುವ ಸಮಾರಂಭವನ್ನು ನೋಡಲಿಕ್ಕೆ ಬಿತ್ತಾಡುವರು ಎಂದು ಕಿಟಿಕಿಯಲ್ಲಿ ಕಲ್ಯಾಣಿಯು ನಿಂತು ಅತ್ಯಂತ ಸ್ಥಿರ ದೃಷ್ಟಿಯಿಂದ ಯಾರೋ ಒಬ್ಬನನ್ನು ನೋಡುತ್ತಿದ್ದಳು ಉತ್ತರಕ್ಷಣದಲ್ಲಿ ಅವಳು ಕೆಳಗಿಳಿದು ದೇವಾಲಯದೊಳಗೆ ಹೋದಳು ಒಳಗೆ ಯಾರೂ ಇರಲಿಲ್ಲ, ದೀವಾವಳಿಯು ಮಂದಮಂದವಾಗಿ ಉರಿಯುತ್ತಿತ್ತು ಅವಳು ಸಾಲೆಯೊಂದರಲ್ಲಿ ಕೂತಳು ಸ್ವಲ್ಪ ಸಮಯದಲ್ಲಿ ಒಬ್ಬ ವ್ಯಕ್ತಿಯನ್ನು ಅವಳ ಬಳಿ ಬಂದು ನಿಂತನು ಆಗ್ಯೆ ಕಲ್ಯಾಣಿಯು—"ರಮೇಶ ಬಾಬೂ, ನಿಮ್ಮನ್ನು ಸಂಗತಿಗರ ಮೇಳದಿಂದ ಉತ್ತನ ಕಾಲದಲ್ಲಿ ಕರೆತರಿಸಿದ ತಪ್ಪನ್ನು ಕ್ಷಮಿಸಬೇಕು ನನ್ನ ಕೆಲಸವು ಅತ್ಯಾವಶ್ಯಕವಾಗಿದೆ, ನಿಮ್ಮಕೂಡೆ ನಾನೊಂದು ವಿಷಯವನ್ನು ಆಲೋಚಿಸಬೇಕಾಗಿದೆ" ಎಂದು ಹೇಳುವಾಗ ಅವಳ ಮುಖವು ಮನೋವೇದನೆಯಿಂದ ಕಾಗದದಂತಾಯಿತು ಇದನ್ನು ಕಂಡು ರಮೇಶನು—"ಶ್ರೀಮತಿ, ಆ ವಿಷಯವನ್ನು ಮನಸ್ಸೋಯದೆ ಹೇಳಲಸಾಧ್ಯವಾದರೆ ಹೇಳತೀರಿತೆಂದು ಎಣಿಸಬಹುದೆಂದನು. "ಇಲ್ಲ, ಅದನ್ನು ಹೇಳಿಯೇ ತೀರಬೇಕು. ಆಮೇಕ್ಕು ತಾವು ನನ್ನ ಪಾಣಿಗ್ರಹಣಾರ್ಥ ನಮ್ಮ ಮನೆಗೆ ಬರೋಣಾಯಿತು, ಆದರೆ ತಮಗೆ ಪ್ರತ್ಯುತ್ತರ ದೊರಕುವ ಮೊದಲೇ—"

"ಗತಗೋಷ್ಟಿಯಿಂದ ಈಗ ಫಲವೇನು, ಪ್ರತ್ಯುತ್ತರ ಕವಿಯಾರೆ ಕೇಳಿಯೇ ನಾನು ಹೊರಟೆನು "

"ಇಲ್ಲ ನಿಮಗೆ ಜವಾಬು ಕೊಟ್ಟಲ್ಲ. ನಾನು ನಿಮ್ಮ ಕುರಿತು ಅದಿನ ಆಡಿದ ಕ್ಷುಯುಕ್ತಿಗಳು ಬರೇ ಅತಿಶಯೋಕ್ತಿ ಎಂದು ನೆನಸಬೇಕು. ಅದಕ್ಕೋಸ್ಕರ ನಾನು ಮೃನನಪಡುತ್ತೇನೆ."

ಇದನ್ನು ಕೇಳಿ ರಮೇಶನು ಏಳುವಂತೆ ತೋರಿತು. "ಬಾಬುಗಳೇ ಸ್ವಲ್ಪ ತಾಳಿರಿ, ನನ್ನನ್ನು ಪಾಪಾತ್ಮಳೆಂದು ಬಗೆಯದಿರಿ. ನಾನು ನಿಮ್ಮನ್ನು ಪ್ರೀತಿಸುತ್ತೇನೆನ್ನುವದಲ್ಲ, ಅದು ಸತ್ಯವಾಗದು, ನಾನು ಯಾಕೆ ಪ್ರೀತಿಸಬೇಕು, ನಿಮ್ಮ ಮೇಲೆ ಅನುರಾಗ ಉಂಟೆಂದು ಯಾವ ತರದಲ್ಲಿಯೂ ನೀವು ತೋರಿಸಲಿಲ್ಲ, ಮನೆಗೆ ಒಳ್ಳೇ ಯಜಮಾನಿಯಾಗಬಹುದೆಂದು ನನ್ನನ್ನು ತಾವು ಬಯಸಿರಬಹುದು ಆದರೆ ಈಗ ತಮಗೆ ಸಂತೋಷವಿದ್ದರೆ ನನ್ನನ್ನು ಕೊಂಡುಕೊಳ್ಳಬಹುದು: ನಾನು ಹೇಳಿದ ಕ್ರಯ ಕೊಡಬೇಕಾಗುವದು."

"ಕ್ರಯವೇನು?"

"ನನ್ನ ತಂದೆಯ ಮರ್ಯಾದೆ ಕಾಪಾಡಲಿಕ್ಕೆ ನಾಳೆ ಸಾಯಂಕಾಲದೊಳಗೆ ೫೦ ಸಾವಿರ ರೂಪಾಯಿ ಬೇಕಾಗಿದೆ. ಅದೇ ನನ್ನ ಕ್ರಯ. ತಾಳಿ ತಾಳಿ ಇಪ್ಪತ್ತಲ್ಲ ಹದಿನೈದು ನಾಕು, ಬೇರೆ ಐದು ಮುಂದಿನ ಸಂಗತಿ "

"ನನಗೆ ಸಂತೋಷವಿಲ್ಲವಿದ್ದರೆ?"

"ನಿಮ್ಮ ಸಂತೋಷ. ತಾತಸಿಗಾಗಿ ಕೂಡಿದಷ್ಟು ಮಾತಿದೆ, ಪ್ರೀತಿ ಇಲ್ಲಾದಡೆ ದೇಹವನ್ನು ವಿಕ್ರಯಿಸಲೊಪ್ಪಿದೆ ಇನ್ನು ನಾನೇನು ಮಾಡಲಿ!"

"ಶ್ರೀಮತಿ, ನಾನು ನಿನ್ನನ್ನು ಕ್ರಯಕ್ಕೆ ಕೊಳ್ಳೆನು, ನಿನ್ನ ನನ್ನ ತನುಮನಗಳು ಒಪ್ಪಿಸಿಹೋದದ್ದೇನೋ ನಿಜ, ಅವನ್ನು ನಾನು ಈ ಮೊದಲು ಬೇಗೆ ಪ್ರದರ್ಶಿಸದಿದ್ದದ್ದು ನನ್ನ ಕುಯ್ತುತನ. ನಿನ್ನ ಮುಂದೆ ನಾನು ಅಲ್ಪನೆಂದೆನಿಸಿ ಅಂಜಿ ಅಂತರ್ಮುವನ್ನು ಹೊರಪಡಿಸಲಿಲ್ಲ ಪರಸ್ಪರ ಪ್ರೇಮವಿಲ್ಲದ್ದಲ್ಲಿ ನಿನ್ನನ್ನು ಬೇಗ ಪಡೆಯಲಾರೆ ನಿನ್ನ ತಂದೆಯನ್ನು ಉಳಿಸರಿಕ್ಕೆ ಬೇರೆನಾದರೂ ಉಪಾಯ ನೋಡುವಾ" ಎಂದು ರಮೇಶನು ಅವಳ ಹಾದರ ಕಡೆಗೆ ದೃಷ್ಟಿ ತಿರುಗಿಸಿದನು ಕಲ್ಯಾಣಿಯು ಹಾದರವನ್ನು ಹಿಡಿದು "ಇನ್ನು ಜಾತಿ ವಸ್ತುವಾಗಿರುತ್ತಿದ್ದರೆ ನಾವು ಕೊಂದರೆಯಿಂದ ಪಾರಾಗುತ್ತಿದ್ದೆವು" ಎಂದಳು

ರಮೇಶ "ನಿಂಸೆನ್ನುವದೇನು? ಅದು ವಾಚಾ ಸರವೆಂದು ಕಾಣುತ್ತದೆ"

"ಅಲ್ಲ, ಅದನ್ನು ನಾನು ಎರವಾಗಿ ತಂದಿದ್ದೇನೆ, ಅದು ರಕ್ತಾಯಿದೆ."

"ಏನೂ! ನಿಮಿವಾಗಿಯೂ ಇವು ಜಾತಿ ರತ್ನಗಳು ಇವಕ್ಕೆ ಕನಿಷ್ಟಪಕ್ಷ ೫೦ ಸಾವಿರ ಯಾರೂ ಕೊಟ್ಟಾರು ಆದರೂ ನಾನು ನಾಕು ನನ್ನ ಕಾರ್ಯಸೋಲಿ ಅನುಭವಸ್ಥ ಸರಕಾಪನ್ನು ನಿನ್ನೊಡನೆ ಕಳುಹಿಸುವೆನು ಅವನು ಕಟ್ಟಿದ ಬೆಲೆಗೆ ಇದನ್ನು ಮಾರಬಹುದು ಒಂದುವೇಳೆ ಎವನೇ ಇದನ್ನು ಕೊಂಡುಕೊಳ್ಳಲೂ ಬಹುದು." ಇಷ್ಟರಲ್ಲಿ ಉತ್ಸವದೊಡನೆ ಜನರು ದೇವಾಲಯದೊಳಗೆ ಬರುವದನ್ನು ನೋಡಿ ಕಲ್ಯಾಣಿಯು ಬೇಗನೇ ಮಾಳಿಗೆಯನ್ನೇರಿದಳು ಆ ರಾತ್ರೆ ಬಾಲೆಯು ನಿದ್ರಾಹಾರಮುಕ್ತಳಾಗಿ ಹಾಸಿಗೆಯಲ್ಲಿ ಹೊರಳುತ್ತಾ ಮುಕ್ತಾಹಾರದ ಪ್ರಕರಣವು ಹ್ಯಾಗೆ ಪರಿಣಮಿಸುವದೆಂದೇ ನಿರೀಕ್ಷಿಸುತ್ತಿದ್ದಳು.

ಮರುದಿನ ಮುಂಜಾನೆ ಶ್ರೀಶನು ಮಗಳ ಕೋಣೆಗೆ ಬಂದು ಇವನ ಕೈಯಲ್ಲಿ ಒಂದು ಕಾಗದವಿತ್ತು "ಅಮ್ಮಣ್ಣಿ, ರುಜ ಸಣ ಮಾನ, ನಿನ್ನೆ ರಾತ್ರೆ ನಿನ್ನ ಮಗಳು ಕೊರಳಿಗೆ ಇಟ್ಟ ಹಾರವನ್ನು ತಮಗೆ ಕೊಟ್ಟರೆ ನಿನ್ನ ಸಾಲ ವಜಾ ಮಾಡುವೆ ಎಂದು ರಮೇಂದ್ರ ಬಾಬು ಕಂಪನಿಯ ಕಾಗದ ಬಂದದೆ ಸರಿ ತೋರಿಸಮ್ಮಾ" ಎಂದು ಶ್ರೀಶನು ಮಗಳ ಕಾಸಿಗೆಯಲ್ಲಿದ್ದ ಹಾರವನ್ನು ಎತ್ತಿ ಪರೀಕ್ಷಿಸಿದನು.

"ತಾಂಪ್ಪ, ಹಾರ ಸಿಕ್ಕಿದು ನಿನ್ನೆ ರಾತ್ರೆ ನಾನು ನನ್ನನ್ನೂ ಹಾರವನ್ನೂ ನಲಮಿಗೆ ಇಟ್ಟೆ. ನಾನು ವಾಪಾನು ಬಂದೇ ಹಾರಕ್ಕೆ ಗಿರಾಕಿಯಾಯಿತು "

"ಹುಚ್ಚು ಮಾರಿ! ನಿನ್ನ ಮಾತು ನನಗೆ ತಿಳಿಯದು. ಇನ್ನೂ ಬುದ್ಧಿ ಬಾರದೇ—ಆಪಿನ ರಮೇಶನನ್ನು ಒಲ್ಲೆನೆಂದಿ, ಈಗ ಸರವೂ ಕೊಡಲೊಲ್ಲೆ, ನೀನು ನನಗೆ ಶತ್ರುವಾದೆ" "ನಿನ್ನ ಕಲ್ಯಾಣವನ್ನು ಬಯಸಿದರೆ ನಿನಗೆ ಶತ್ರುವಾದೆ ಶಚೀಂದ್ರನು ಗಿಳಿ ಸಾವಿರವಲ್ಲವೆ ಕೊಡುವನು? ನನ್ನ ಕೂಡೆ ಇಪ್ಪತ್ತು ಸಾವಿರಕ್ಕೆ ಗಿರಾಕಿಯದೆ; ಪತ್ತು ಗಂಪೆಯ ವರೆಗೆ ತಾಳು" ಶ್ರೀಶನು ಏನೋ ಗುಣುಗುಟ್ಟಿ ನಡೆದನು.

ಪತ್ತು ಗಂಪೆಗೆ ಸರಿಯಾಗಿ ಒಬ್ಬ ಗೃಹಸ್ಥನು ಒಂದು ಶ್ರೀಮತಿ ಕಲ್ಯಾಣಿಬಾಯಿಯನ್ನು ಕೇಳಿದನು. ಅವನಿಗೆ ಮೇಲೆ ತರಲಿಕ್ಕೆ ಹುಕುಂ ಆಯಿತು ಆ ಗಂತುಕನು ಕಲ್ಯಾಣಿಗೆ ನಮಸ್ಕರಿಸಿ "ಶ್ರೀಮತಿಬಾಯಿ, ತಮ್ಮ ಸೇವಕ ಕಾಳಿಚರಣ. ತಮ್ಮ ಹತ್ತರವೊಂದು ಹಾರ ವಿಕ್ರಯಿಸಲಿಕ್ಕಿದೆಯೆಂದು ನನ್ನ ಮಿತ್ರನಿಂದ ತಿಳಿದು ಬಂದೆ" ಎಂದನು

ಕಲ್ಯಾಣಿ ಸರವನ್ನು ಕಾಳಿಚರಣನ ಕೈಯಲ್ಲಿ ಕೊಟ್ಟಳು. ಅವನದನ್ನು ಪರೀಕ್ಷಿಸಿ "ಸರಿ, ರಮೇಶನು ಕಟ್ಟಿದ ಬೆಲೆ ಠೀಕಾಗಿದೆ. ಇದೋ ಅಮ್ಮಾ ಸರದ ಬೆಲೆ" ಎಂದು ೫೦ ಸಾವಿರ ರೂಪಾಯಿ ನೋಟುಗಳನ್ನು ಮೇಜಿನಮೇಲೆ ಇಟ್ಟನು. ಕಲ್ಯಾಣಿಯು ಅವನ್ನು ಎಣಿಸಿ ತೆಗದಾನಂತರ ಕಾಳಿಚರಣನು ರಜಾ ಪಡೆದು ಹೋದನು.

ಕಲ್ಯಾಣಿಯು ಹಾರಮುಕ್ತಳಾದಳು. ತಂದೆಯು ಚಿಂತಾವಿಮುಕ್ತನಾದನು. ಈ ಶುಭ ಪರಿಣಾಮವು ಆ ವಾಮನ ರಮೇಶನಿಂದಾಯಿತು. ಅವನು ಆದಿನ ಕೇಳಿದ ನಿಂದಾವಾಕ್ಯಗಳನ್ನು ಕ್ಷಮಿಸಿ ಕರೆಕಳುಹಿಸಿದಾಗ ಒಂದನು. ಹಾರ ವಿಕ್ರಯವನ್ನು ತೋರಿಸಿದನು. ಗಿರಾಕಿಹಚ್ಚಿ ಮಾನ ಉಳಿಸಿದನು. ಇದಲ್ಲದೆ ತನ್ನನ್ನು ಅನುರಾಗಿ ಸಿದರೂ ಕ್ರಯಕ್ಕೆ ಕೊಳ್ಳಲೊಪ್ಪದೆ ಉದಾತ್ತ ಮನಸ್ಸನ್ನು ತೋರಿದನು ಈ ಯೋ ಜನಾ ಪರಂಪರೆಯು ಕಲ್ಯಾಣಿಯ ಮನಸ್ಸಿನಲ್ಲಿ ಎದ್ದಿತು. ಆಗ್ಗೆ ರಮೇಶನ ಮೇಲಿನ ಅಕಾರಣ ವೈಮನಸ್ಸು ಕರಗಿಹೋಗಿ ಅವನ ಉಪಕಾರಕ್ಕೆ ಕೃತಜ್ಞತೆ ಹುಟ್ಟಿತು. ಆದರೆ ಕೃತಜ್ಞತೆ ಪ್ರೇಮವಲ್ಲ ಅವನು ತನ್ನ ಹಿತೈಷಿ ಎಂದು ತಿಳಿದಳು

ಸಕೀಪ

ಜಪಾನರ ಹಬ್ಬಗಳು

ಜಪಾನೀಯರು ಆಚರಿಸುವ ಹಬ್ಬಗಳಲ್ಲಿ ಮುಖ್ಯವಾದುವು ನಾಲ್ಕು ಮಾತ್ರವೆ' ಅವು ಯಾವುವೆಂದರೆ, (೧) ಸಂವತ್ಸರಾದಿ ಹಬ್ಬ (೨) ಚಾನ್‌ಗುಟ್ಸೂರಿ (೩) ಜೊಂಬಿಯ ಹಬ್ಬ (೪) ದ್ವಜೆಗಳ ಹಬ್ಬ ಇವುಗಳಲ್ಲಿ ಮೊದಲನೆಯದನ್ನು ವಿವರಿಸುವೆವು

"ಸಂವತ್ಸರಾದಿ ಹಬ್ಬ"

ಈ ಹಬ್ಬವು ಶೀತಕಾಲದ ಪ್ರಾರಂಭದಲ್ಲಿ ಬರುವುದು. ಜಪಾನೀಯರಲ್ಲಿ ಇದೇ ದೊಡ್ಡದು ಇದು ಸಮೀಪಿಸಿದಾಗ ಎಲ್ಲರೂ ತಮ್ಮತಮ್ಮ ಕೆಲಸಗಳನ್ನು ನಿಧಾನಮಾಡಿ, ಮಹೋಲ್ಲಾಸದಿಂದ ಕಾಲವನ್ನು ಕಳೆವರು. ತಮ್ಮತಮ್ಮನ್ನು ಮನೆಯನ್ನೆಲ್ಲಂಕರಿಸುವರು. ಪ್ರತಿಯೊಂದು ಬೀದಿಯಲ್ಲಿಯೂ ದಸರೆಗಳಿಂದಲೂ, ಪುಷ್ಪಗುಚ್ಛಗಳಿಂದಲೂ ಕಮಾನುಗಳನ್ನು ಕಟ್ಟಿ, ನೋಟಕ್ಕಾಗಿ ಅತ್ಯಾವಶ್ಯಕವೆಂದು ತೋರುವಹಾಗೆ ಮಾಡುವರು. ಪ್ರತಿ ಮನೆಯ ಸಿಂಹದ್ವಾರದ ಬಾಯಲ್ಲಿ ಎರಡು ಉದ್ದವಾದ ದೇವದಾರು ವೃಕ್ಷವನ್ನು ಸಿಕ್ಕಿಸುವರು ಈ ಗಿಡಕ್ಕೆ ಒಂದು ಹಗ್ಗವನ್ನು ಕಟ್ಟಿ, ರಸ್ತೆಯಲ್ಲಿ ತಿರುಗಾಡುವುದಕ್ಕೂ, ಮನೆಯ ಮುಂಭಾಗದಲ್ಲಿ ಸಂಚರಿಸುವುದಕ್ಕೂ ಅನುಕೂಲಪಡಿಸಿಕೊಳ್ಳುವರು ಭೂತ ಪ್ರೇತ ಪಿಶಾಚಿಗಳಿಗೆ ಈ ಸ್ಥಳವನ್ನು ದಾಟಲಾರದೆಂದೂ, ಆದುದರಿಂದ ಆ ನೂತನ ವರುಷದಲ್ಲಿ ಆ ಮನೆಯವರು ಸೌಖ್ಯವಾಗಿರುತ್ತಾರೆಂದೂ ಅವರ ನಿಶ್ಚಯವು ಅವರ ಬಾವುಟದ ಮೇಲೆ ವಿವಿಧವಾದ ಚಿತ್ರಗಳನ್ನು ಬರೆಸಿ, ಅದಕ್ಕೆ ಎಲೆ, ಮೂ, ಮೊರ ಲಾದವುಗಳನ್ನು ಸುತ್ತುವರು ಈ ರೀತಿಯಾದ ಅಲಂಕಾರದಿಂದ ಪ್ರತಿ ಬೀದಿಯು ಶೃಂಗಾರವನಂತೆ ಕಾಣುವುದು

ಇವರು ಅತ್ಯಂತ ಸುಮಾ ದೆಯಾಗಿ ಪ್ರವರ್ತಿಸುವರು ಬೀದಿಯಲ್ಲಿ ಹೋಗು ತ್ತಿರುವಾಗ ಎಲ್ಲರೂ ಸಂಘಶಃ ದೊಡ್ಡ ಸ್ವರವಾಗಿ ನಮಸ್ಕಾರಗಳನ್ನು ಮಾಡಿದೆ ನುಂಡಕ್ಕೆ ಹೋದಾಗ ಒಬ್ಬ ಈ ಹಬ್ಬದ ದಿನದಲ್ಲಿ ಪ್ರಯಾಣವಾಗುವುದಿಲ್ಲ ಇದಲ್ಲದೆ ಈ ದಿನ ಅಚರಿಸಬೇಕಾದ ಪ್ರತ್ಯೇಕ ವಿಧವಾದ ನಮಸ್ಕಾರವುಂಟಿತೆ! ಸ್ನೇಹಿತರನ್ನು ಎಲ್ಲಾದರೂ ಸಂಧಿಸಿದಾಗ ಅಲ್ಲಿಯೇ ನಿಂತು ಒಂದಾಗಿ ನಮಸ್ಕಾರವನ್ನು ಮಾಡಿದ್ದರೆ ದೊಡ್ಡ ತಪ್ಪಾಗಿ ಪರಿಗಣಿಸುವರು

ಈ ಹಬ್ಬದ ಸಂಭ್ರಮವು ಬೆಂಗಳೂರಿನ ದೀಪಾವಳಿಯ ಸಂಭ್ರಮವನ್ನು ಹೋಲುವುದು. ಜಪಾನೀಯರು ಈ ಹಬ್ಬಕ್ಕಾಗಿ ಬಹಳ ಖರ್ಚುಮಾಡುವರು ಈ ಹಬ್ಬದ ಸಮಯದಲ್ಲಿ ಯಾವಾಗಲೂ ಮಾಡುತ್ತಿದ್ದಂತೆಲ್ಲದೆ ಪ್ರತ್ಯೇಕ ವಿಧವಾದ್ದೊಂದು ಇರುವುದು ಬಾವರು, ವಿಕರು ಎಂಬ ವೀಪಿಲ್ಲದೆ ಎಲ್ಲರೂ ಕೊಳ್ಳುವುದು ಆದರೆ ಬಾಳೆ ವಂತರಿಗೆ ಹೇಗೆ ಕೊಳ್ಳಬೇಕೋ, ಮಧ್ಯ ತರಗತಿಯವರಿಗೆ ಹೇಗೆ ಕೊಳ್ಳಬೇಕೋ, ಪೂರ್ವದ ಆಚಾರದಂತೆ ಈಗ ನಡಿಸುತ್ತಲಿರುವರು ತಮಗುಕೊಳ್ಳುವರ ಸ್ಥಿತಿಗತಿ ಗಳನ್ನು ಎಲ್ಲಾನದ ಮೂಲಕ ನಾವು ತಿಳಿಯಬಹುದು ಎಲ್ಲಾನವನ್ನು ಬಾಗಿಲು ದಾರದಲ್ಲಿ ಕಟ್ಟಿದೆ ಅದನ್ನು ಕಾಗದದಲ್ಲಿ ಸುತ್ತಿದೆ ಕೊಳ್ಳುವರು ಈರೀತಿಯಾಗಿದ್ದರೆ ಅದು ಹೆಚ್ಚಿದ ಎಲ್ಲಾನವೆಂದು ತಿಳಿಯಬೇಕು

ಅತ್ಯುನ್ನತದೆರೆಯಲ್ಲಿರುವರು ಮೊದಲು ಬಡವರಾದಿಯಾಗಿ ಎಲ್ಲರೂ ಈ ಹಬ್ಬದಲ್ಲಿ ಉತ್ಸಾಹಶೀಲರಾಗಿ, ಹಾಸ್ಯವಿನೋದಗಳಲ್ಲಿ ಕಾಲವನ್ನು ಕಳೆಯುವರು ಗುಂಪು ಗುಂಪಾಗಿ ಹೋಗುತ್ತಿರುವರು ಬಿಡುವಿಲ್ಲದೆ ಟೀಯನ್ನು ಕುಡಿಯುವರು ಈ ರೀತಿ ತಮೋಷೆಯಲ್ಲಿ ಕಾಲ ಕಳೆವುದಲ್ಲದೆ ರಾತ್ರಿಯಲ್ಲಿಯೂ ವಿನೋದವಾಗಿರುವರು. ಅಂಗಡಿಗಳು ಅಲಂಕರಿಸಲ್ಪಟ್ಟು,, ವಿವಿದ ಬಣ್ಣದ ಕಾಂತಿ ಕೊಡುವ ದೀಪವು ಪ್ರಕಾಶಿಸುತ್ತಿರುವುದು. ಜನರು ವಿಚಿತ್ರವಾದ ಬಟ್ಟೆಗಳನ್ನೂ, ರೇಷ್ಮೆ ಬಟ್ಟೆಗಳನ್ನೂ ಧರಿಸಿ, ತಿರುಗುತ್ತಲಿರುವರು. ಈ ಅಂಗಡಿಗಳಲ್ಲಿ ಮಕ್ಕಳ ಆಟದ ವಸ್ತುಗಳ ಧ್ವನಿಯ, ಮೊರೆಯುತ್ತಿರುವುದು.

ಒಂದೊಂದೆಸಾರಿ ಜನರು ಒಂದು ಮೆರವಣಿಗೆಯ ಉತ್ಸವವನ್ನು ಮಾಡುವರು ಆಗ ಒಬ್ಬನು ಬಣ್ಣದಲ್ಲಿ ಮಾಡಿದ ಭಯಂಕರವಾದ ಮುಖವನ್ನು ಮಾಡಿ ತನ್ನ ತಲೆಯಮೇಲೆ ಇಟ್ಟುಕೊಂಡು, ಶರೀರವು ಕಾಣದಂತೆ ಬಟ್ಟೆಗಳನ್ನು ಧರಿಸಿ ಆಡುತ್ತಾ ಹೋಗುತ್ತಿರುವನು. ಇವನ ಮುಂದುಗಡೆ ಒಬ್ಬ ತಟ್ಟೆಯವನು ಸಜ್ಜು ಮಾಡಿಕೊಂಡು ಇವನ ಬರುವಿಕೆಯನ್ನು ತಿಳಿಸುತ್ತಲಿರುವನು. ಮತ್ತೆ ಕೆಲವರು ಪೌರಾಣಿಕ ಸಂಬಂದವಾದ ಉತ್ಸವಗಳನ್ನು ಸೂಚಿಸುವ ವೇಶಗಳನ್ನು ಧರಿಸಿ, ತಮ್ಮ ಕೊಂಡಿರುವ ಒಂದು ಗಾಡಿಯು ಕೂಲಿಯಾಳುಗಳಿಂದ ಎಳೆಯಲ್ಪಡುತ್ತಲಿರುವುದು. ಕೆಲವು ಹುಡುಗರು ಅತ್ಯುಲ್ಲಾಸದಿಂದ ಕೇಕೆಗಳನ್ನು ಹಾಕಿಕೊಂಡು, ಪಕ್ಕುತ್ತಾ ಗುಂಪಾಗಿ ಹೋಗುತ್ತಲಿರುವರು

ಈ ಹಬ್ಬದ ಸಂದರ್ಭದಲ್ಲಿ ಒಂದು ವಿಚಿತ್ರ ಜರುಗುವುದು. ಪ್ರತಿಯೊಬ್ಬ ಜವಾಸೀಯನು ಎಷ್ಟು ಸಾಲವಿದ್ದರೂ ಆ ದಿನದ ಕೊಟ್ಟು ಋಣ ವಿಮುಕ್ತನಾಗುವನು ಇದು ಮೊದಲಿನಿಂದಲೂ ಆಚರಣೆಗೆ ಬಂದಿರುವುದಂತೆ' ಹಾಗೆ ಮಾಡದಿದ್ದರೆ ಅವನಿಗೆ ಗೌರವವಿರದು ಅವನು ಋಣವಿಮುಕ್ತನಾಗುವವನು ತನ್ನಲ್ಲಿ ಹಣವಿಲ್ಲದಿದ್ದರೆ, ತನ್ನ ಮನೆಯಲ್ಲಿನ್ನ ಸಾಮಾನುಗಳನ್ನಾದರೂ ಮಾರಿ ಅಥವಾ ಆ ಸಾಮಾನುಗಳನ್ನೇ ಲೇವಾದಾರರಿಗೆ ಕೊಟ್ಟು ತೃಪ್ತಿಪಡಿಸಿ ತಾನು ಸಂತೋಷಪಡುವನು

ಹೊಸಜೊಪಟ್ಟಣದಲ್ಲಿ ಆ ದಿವಸ ರಾತ್ರಿ ದೊಡ್ಡ ಸಂತೆಯು ನೆರೆದಂತೆ ಊರ ಹೊರಭಾಗದಲ್ಲಿ ಅಂಗಡಿಗಳು ಸಾಲಾಗಿ ವೈರಿ ವಿಸ್ತಾರವಾಗಿರುವುದಂತೆ. ದೀಪ ವೆ ಸಾಲಾಗಿ ಇಟ್ಟಿರುವುದು ಇದ್ದಿ ಬೇಕಾದ ಸಾಮಾನುಗಳನ್ನು ನಾವು ನೋಡ ಬಹುದು'

ಇವೆಲ್ಲಾ ಪಾತ್ರೆಗಳು, ಮೇಜೋಡು, ಅಲಂಕಾರಗಳು, ಕಂಚಿನ ಸಾಮಾನುಗಳು, ಬಟ್ಟೆ ಪಾತ್ರೆ, ಎಲ್ಲವೂ ಇರುವವು ಎಲ್ಲರೂ ತಮ್ಮ ವಂಶದವರ ಐಶ್ವರ್ಯವನ್ನು ತೋರಿಸುವುದಕ್ಕೋಸ್ಕರ ಅಮೂಲ್ಯವಾದ ವಸ್ತುಗಳನ್ನು ತಂದು, ಮಾರಿ, ಸಾಲಗಾರರ ಬಾಧೆಯಿಂದ ನಿವಾರಣೆಯಾಗುವರು

ಎಮ್. ಟಿ ವಲ್ಲಜ ಐಯ್ಯಂಗೌರ್,
ಬೀರೂರು-

ಕಂಬಳಿ ಹುಳುಗಳು

ಮೂರಾನಾಡಿವಿಕ್ಟರಿ ವ್ಯವಸಾಯ ಇಲಾಖೆಯವರು ಕಂಬಳಿ ಹುಳುಗಳ ವಿಚಾರವಾಗಿ ಬರೆದ ವಾಯಿದಾ ಪತ್ರಿಕೆಯಲ್ಲಿ ಬರೆದಿರುವ ಲೇಖನದಲ್ಲಿ ಕಂಡುಬರುವ ಕೆಲವು ಅಂಶಗಳನ್ನು ಇಲ್ಲಿ ಉದಹರಿಸಿದೆ

ಕಂಬಳಿ ಹುಳುಗಳು ಮೂರಾಲದ ಮೇಲೆ ಕಾಣಿಸಿಕೊಂಡು ಪೈರುಗಳಿಗೆ ವಿಶೇಷ ಹಾನಿಯನ್ನುಂಟುಮಾಡುತ್ತವೆ ಕಬ್ಬು, ಜೋಳ, ಸೆಲಗಡಲೆ ಮುಂತಾದವುಗಳಿಗೆ ಈ ಹುಳುಗಳಿಂದ ವಿಶೇಷ ಹಾನಿ ಉಂಟಾಗುತ್ತೆ ಪೈರುಗಳನ್ನು ನಾಶ ಮಾಡಿದ ಮೇಲೆ ಇವುಗಳು ಮಣ್ಣಿನಲ್ಲಿ ಮೀಟರ್‌ಗಳ ಆಳದಲ್ಲಿ ಹೋಗಿ ಮಣ್ಣಿನಂತೆ ರೂಪವನ್ನು ತೊಟ್ಟು ಭೂಮಿಯೊಳಗೆ ಸೇರಿ ಮುಂದಿನ

ದಯವಿಟ್ಟು ಓದಿರಿ ! ಸೌಖ್ಯವನ್ನು ಹೊಂದಿರಿ !!

ಕಾಮಶಾಸ್ತ್ರ

ಜಂತಿವಾಗಿ ಕಳುಹಿಸಲ್ಪಡುವುದು' ಕನ್ನಡದಲ್ಲಿ ಈ ಪುಸ್ತಕವು ಅಚ್ಚಾಗುತ್ತಾ ಇರುವುದು ಇದನ್ನೋದುವುದರಿಂದ ದೇಹ ಮನಸ್ಸಿಂಬಂಧವಾದ ಸಕಲ ಬಾಧೆಗಳೂ ಪರಿಹಾರವಾಗುವವು' ಅಖಂಡಾರೋಗ್ಯ ಸಂಪದಗಳುಂಟಾಗುವವು!!

ಅತಂಕ ನಿಗ್ರಹ ಮಾತ್ರೆ

ಊಟವಾದ ಒಳಿಕ ಹಗಲಿರುಳೂ ಸೇವಿಸಬೇಕಾದದ್ದು ! ಆರೋಗ್ಯಶಾಲಿಗಳಿಗೂ ರೋಗ ಪೀಡಿತರಿಗೂ ಉಪಯುಕ್ತವಾದದ್ದು

ಈ ಮಾತ್ರೆಗಳು —

(೧) ಜೀರ್ಣಕೋಶ ಸಂಬಂಧವಾದ ವ್ಯಾಧಿಗಳನ್ನೆಲ್ಲಾ ಪರಿಹರಿಸುವದು. (೨) ನರಗಳನ್ನು ದೃಡಪಡಿಸುವದು (೩) ಜ್ಞಾಪಕ ಶಕ್ತಿಯನ್ನು ವೃದ್ಧಿಗೊಳಿಸುವದು (೪) ಮೆದುಳನ್ನು ಸರಿಪಡಿಸುವದು. (೫) ಶಕ್ತಿಯನ್ನುಂಟುಮಾಡುವದು. (೬) ವ್ಯಾಹಾರಗಳಿಂದ ಅಂಗಗಳನ್ನು ಬಲಪಡಿಸುವದು. (೭) ನಷ್ಟವಾದ ಶಕ್ತಿಯನ್ನು ಮತ್ತೆ ವೃದ್ಧಿಗೊಳಿಸುವದು ೩೦ ಮಾತ್ರೆಗಳಿರುವ ಡಬ್ಬಿ ೧ಕ್ಕೆ ರೂ. ೧—೦—೦

ಅತಂಕನಿಗ್ರಹ ಔಷಧಾಲಯ
೩೩ ಬ್ರಾಡ್ವೇ ಮದರಾಸು. } ವೈದ್ಯ ಶಾಸ್ತ್ರಿ
ಮಣಿಶಂಕರ ಗೋವಿಂದಜೀ

ಅರಳಿಕೊಳ್ಳಬರುವದಿಲ್ಲ. ಮಳೆ ಬಿದ್ದ ಒಡನೆ ಇವುಗಳು ರೆಕ್ಕೆಯಿಂದ ಹಾರುವ ಮತ್ತು ಹೊದಿ ಬಣ್ಣದ ಚಿಟ್ಟೆಗಳಾಗಿ ಮೇಲಕ್ಕೆ ಬರುತ್ತವೆ ಗುಂಪು ಗುಂಪಾಗಿ ದೀಪದ ಸುತ್ತುಮುತ್ತಲೂ ಹಾರಾಡುತ್ತಿರುವ ಈ ಚಿಟ್ಟೆಗಳನ್ನು ಎಲ್ಲರೂ ನೋಡಿರಬಹುದು. ಈ ಚಿಟ್ಟೆಗಳಲ್ಲಿ ಹೆಣ್ಣಾದವುಗಳು ಕಂಬು, ಜೋಳ, ನೆಲಗಡಲೆ ಮೊದಲಾದ ಪೈರುಗಳ ಕಳದಲ್ಲಿ ಮೊಟ್ಟೆ ಇಟ್ಟಿರುವದನ್ನೂ ನೋಡಿರಬಹುದು ಈ ಮೊಟ್ಟೆಗಳೇ ಒಡೆದ ನಂತರ ಕಂಬಳಿ ಹುಳಗಳಾಗುವದು

ಒಂದು ಚಿಟ್ಟೆಯು ೫೦೦ರಿಂದ ೧೫೦೦ ವರೆಗೂ ಮೊಟ್ಟೆ ಇಡುತ್ತೆ ಆದ್ದರಿಂದ ಒಂದನ್ನು ಕೊಂದರೆ ೫೦೦ರಿಂದ ೧೫೦೦ರಷ್ಟು ಕಂಬಳಿ ಹುಳಗಳನ್ನು ಕೊಂದ ಹಾಗೆ ಆಗುವದು.

ಬೆಳ್ಳಿ ಮಳೆ ಬಿದ್ದು ಭೂಮಿಯು ಹಸನ್ನಾಗಿ ತೇವುವಾದ ಕೂಡಲೆ ಏಕಕಾಲದಲ್ಲಿ ಚಿಟ್ಟೆಗಳು ಗುಂಪುಗುಂಪಾಗಿ ಮೇಲಕ್ಕೆ ಬರುವವು ಇವುಗಳು ದೀಪದ ಕತ್ತರಿ ಸಾಮಾನ್ಯವಾಗಿ ಹೆಚ್ಚಾಗಿ ಸೇರುವದರಿಂದ ಇವುಗಳ ವಾಧೆಯು ವಿಶೇಷವಾಗಿರತಕ್ಕೆ ಸ್ಥಳಗಳಲ್ಲಿ ದೀಪಗಳನ್ನಿಟ್ಟು ಗುಂಪುಗುಂಪಾಗಿ ನಾಶಮಾಡಿ ಹಾಕಬಹುದು ಕೆಂಗಂದೆ ಒಂದು ದೀಪ ಮಾಡಿಸಿ ಅದರ ಕೆಳಗೆ ಒಂದು ತಟ್ಟೆಯಲ್ಲಿ ಶೀಮೆಜೆಣ್ಣೆ ಬೆರೆಸಿದ ನೀರನ್ನು ಇಟ್ಟಲ್ಲಿ ದೀಪದ ಬಳಿಗೆ ಬಂದ ಹುಳುಗಳು ತಮ್ಮಷ್ಟಕ್ಕೆ ತಾವೇ ತಟ್ಟೆಯಲ್ಲಿ ಬಿದ್ದ ನೀರು ಹೊಗುವವು. ಈ ದೀಪಗಳನ್ನು ಕೆಳಗೆ ತಿಳಿಸುವ ಪೆಲೆ ತಯಾರು ಮಾಡಿಕೊಳ್ಳಬಹುದು ಒಂದು ಲಾಂದ್ರದಲ್ಲಿ ಒಂದು ಕರೋಸಿನ್ ದೀಪವನ್ನು ಇಟ್ಟು ಅದರ ಕೆಳಗೆ ೨ ಅಡಿ ಚದರ ೩ ಅಂಗುಲ ಆಳವುಳ್ಳ ಒಂದು ತಟ್ಟೆಯಲ್ಲಿ ತಿಮಗೆ ಎಣ್ಣೆ ಜೆ ಗ ನೀರನ್ನ ತುಂಬಿಡಬಹುದು. ದೀಪಕ್ಕೆ ಶೀಮೆ ಎಣ್ಣೆ ಜೊತೆಗೆ ಕೊಂಚ ಸೀಮೆ ಎಣ್ಣೆ ಬೆರೆಸಿದರೆ ಹುರಿಯು ಪ್ರಕಾಶವಾಗುವದಲ್ಲದೆ ಹೊಗೆಯೂ ಕಮ್ಮಿಯಾಗಿ ಹುಳುಗಳನ್ನು ಚೆನ್ನಾಗಿ ಆಕರ್ಷಿಸುತ್ತದೆ ಒಂದು ಬೊಂಬನ್ನು ನೆಟ್ಟು ಅದಕ್ಕೆ ಲಾಂದ್ರವನ್ನು ತೂಗುಹಾಕಿ ಅದರ ಕೆಳಗೆ ತಟ್ಟೆಯನ್ನು ಇಟ್ಟರೂ ಇರಬಹುದು ಎದವಾ ತಟ್ಟೆ ಮಣ್ಣಿನ ಬಿಲ್ಲು ಇಟ್ಟು ದೀಪವನ್ನು ಇಟ್ಟರೂ ಸರಿಯೆ ಎತ್ತರದ ಜಿಗಿಯುವಂತೆ ಹೊಲದಲ್ಲಿ ಪೈರಿನ ಮಟ್ಟಕ್ಕಿಂತ ಎತ್ತರದಲ್ಲಿ ದೀಪವನ್ನು ಇರಬೇಕು

ಆರ್ಕಾಟ್ ಡಿಸ್ಟ್ರಿಕ್ಟಿನ ಕೆಲವು ಪ್ರಾಮಗಳಲ್ಲಿ ೧೯೦೯ ಸಾಲ್ ಜುಲೈ ಮತ್ತು ಆಗಷ್ಟು ತಿಂಗಳುಗಳಲ್ಲಿ ಈ ದೀಪಗಳನ್ನಿಟ್ಟು ಈ ಹುಳುಗಳನ್ನು ಮಾಡಿಸಿ ಮಾಡಿಸಿದ್ದಾಗಿತ್ತು ಜುಲೈ ತಿಂಗಳಲ್ಲಿ ಒಂದು ರಾತ್ರಿ ಬಿಗ ಇಂಚು ಮಳೆಯಿಂದ ೨ ದಿನದ ಮೇಲೆ ಮತ್ತೊಮ್ಮೆ ಗುಂಪು ಕಾಣಿಸಿಕೊಂಡು ೪ ದಿನಗಳಲ್ಲಿ ೭೯೦೦ ಹುಳಗಳು ನಾಶವಾದವು ಇವರಲ್ಲಿ ಮೊದಲನೆ ರಾತ್ರಿಯೇ ೩೬೦೦ ಹುಳಗಳಿಗಿಂತ ಹೆಚ್ಚಾಗಿ ಸಿಕ್ಕಿಕೊಂಡವು ಹೆಣ್ಣು ಹುಳಗಳು ಅದರ ಹಿಂದಿನ ದಿವಸ ೨೦೦ ಹೆಣ್ಣು ಹುಳುಗಳು ಬಂದು ಮೊಟ್ಟೆ ಇಡಬಹುದೆಂಬುದನ್ನು ಯೋಚಿಸಿ ಸ್ಕೌಂಡ್ರಲ್ ಎಸ್ಟೇಟ್ ಮಿಷನ್ ತಪ್ಪಿಸಲ್ಪಟ್ಟಿತೆಂಬುದನ್ನು ತಿಳಿಯಬಹುದು ಎಂದು ಅಧಿಕಾರಿಗಳು ಹೇಳಿದ್ದಾರೆ ಬಹಳ ಮಟ್ಟಿಗೆ ಸುತ್ತಮುತ್ತಲೂ ಕಮ್ಮಿ ಆಯಿತು ಸಾಮಾನ್ಯವಾಗಿ ಮಿಷನರಿ ಪೈರುಗಳು ಎಲ್ಲರೂ ಸೇರಿ ಈ ದೀಪಗಳನ್ನು ಎಂಸಿದ್ದಾರೆ ಹಳ್ಳಿ ಪ್ರಾಂತ್ಯದ ಅದ್ದರಿಂದ ಏಕಕಾಲದಲ್ಲಿ ಈ ದೀಪಗಳನ್ನು ಪ್ರತಿಯೊಬ್ಬ ರೈತರೂ ತಮ್ಮ ತಮ್ಮ ಹೊಲಗಳಲ್ಲಿ ಇಟ್ಟಲ್ಲಿ ಒಂದು ದಫಾಕ್ಕೆ ಸುಮಾರು ೫ ದಿನಗಳಿಗಿಂತ ಹೆಚ್ಚು ಕಾಲ ಇರಬೇಕಾಗಿಲ್ಲ ಅಂತು ಈ ವಿಚಾರದಲ್ಲಿ ಮುಖ್ಯವಾಗಿ ಗಮನಿಸತಕ್ಕ ಎರಡು ವಿಷಯಗಳು ಹೀಗಿವೆ—(೧) ಮಳೆಗಳು ಬಂದು ನಿಂತ ಪಡನೆ ಈ ದೀಪಗಳನ್ನು ಇಡಬೇಕೇ ಹೊರ ಸಾಪಕಾರ ಮಾಡಿಕೊಡದು (೨) ಬಿತ್ತಿಗಾಗಿ ಗದ್ದೆ ಕಟ್ಟುವದಕ್ಕೆ ಮುಂಚೆಯೇ ಎಲ್ಲರಕ್ಕೂ ಈ ದೀಪಗಳನ್ನು ಮಾಡಿಸಿ ಹಚ್ಚಿದಲ್ಲಿ ಬಹಳ ಮಟ್ಟಿಗೆ ಹುಳುಗಳ ಹಾವಳಿ ಕಮ್ಮಿಯಾಗಿ ಕ್ರಮೇಣ ಹುಳುಗಳು ಸಂಪೂರ್ಣವಾಗಿ ನಾಶವಾಗಿ ಹೋಗುವವು ಈ ದೀಪಗಳನ್ನು ಹಚ್ಚುವದರಿಂದ ಹುಳುಗಳ ಹಾವಳಿ ಕಮ್ಮಿಯಾಗಿ ಕ್ರಮೇ ಸಂಪೂರ್ಣವಾಗಿ ನಾಶವಾಗುವದಲ್ಲದೆ ಹೊಗೆಯೂ ಕಮ್ಮಿಯಾಗಿ ಚಿಟ್ಟೆಗಳನ್ನು ಚೆನ್ನಾಗಿ ಆಕರ್ಷಿಸುತ್ತದೆ ಒಂದು ಬೊಂಬನ್ನು ನೆಟ್ಟು ಅದಕ್ಕೆ ಲಾಂದ್ರವನ್ನು ತೂಗುಹಾಕಿ ಅದರ ಕೆಳಗೆ ತಟ್ಟೆಯನ್ನು ಇಟ್ಟರೂ ಇರಬಹುದು ಎದವಾ ತಟ್ಟೆ ಮಣ್ಣಿನ ಬಿಲ್ಲು ಇಟ್ಟು ದೀಪವನ್ನು ಇಟ್ಟರೂ ಸರಿಯೆ ಎತ್ತರದ ಜಿಗಿಯುವಂತೆ ಹೊಲದಲ್ಲಿ ಪೈರಿನ ಮಟ್ಟಕ್ಕಿಂತ ಎತ್ತರದಲ್ಲಿ ದೀಪವನ್ನು ಇರಬೇಕು

ರೆ ಗ

ಪತ್ರವ್ಯವಹಾರ

ಮಂಗಳೂರು ಸೈಂಟ್ ಅಲೋಸಿಯಸ್ ಕೋಲೇಜಿನ ಘನಹೊಂದಿದ ಫಾದರ್ ರೆಕ್ಟರರ ವರುಷೋತ್ಸವ

ಸೈಂಟ್ ಎಲೋಸಿಯಸ್ ಕೊಲೇಜಿನ ಫಾದರ್ ರೆಕ್ಟರರ ವರುಷೋತ್ಸವವನ್ನು ಕೊಲೇಜಿನ ಹುಡುಗರು ಪ್ರತಿ ವರುಷ ಬಹು ಸಂಭ್ರಮದಿಂದ ಆಚರಿಸುವ ಸಂಗತಿಯು ವಾಚಕ ಮಹಾಶಯರಲ್ಲಿ ಕೆಲವರಿಗೆ ಈ ಮೊದಲೇ ಗೊತ್ತಿರಬಹುದು ಈಗ ಕೊಲೇಜಿನ ಫಾದರ್ ರೆಕ್ಟರರಾಗಿರುವ ರೆವರೆಂಡ್ ಫಾದರ್ ಪಿರೆನಿಯಸ್ ಜಿ ಯವರು ಮಂಗಳೂರಿನ ಬಿಶೋಪರಾಗಿ ನಿಯಮಿಸಲ್ಪಡುವ ಸಂಭವವಿರುವುದೆಂತಲೂ, ಇಂಥಾ ಗೌರವಯುಕ್ತವಾದ ಪದವಿಗೆ ನಿಯಮಿಸಲ್ಪಟ್ಟರೆ ಇವರು ಕೊಲೇಜು ರೆಕ್ಟರರ ಕೆಲಸವನ್ನು ಇನ್ನೂ ವರುಷ ನಿರ್ವಹಿಸುವರೆಂತಲೂ ತಿಳಿದು ಬಂದಿರುವ ಕಾರಣ ಈ ವರುಷದ ರೆಕ್ಟರರ ವರುಷೋತ್ಸವವು ವಿಶೇಷ ವಿಜೃಂಭಣೆಯಿಂದ ಆಚರಿಸಲ್ಪಡಲಿಕ್ಕೆ ಇದೇ ಮಹೋತ್ಸವವು ಇದೇ ತಿಂಗಳ ೫ನೇ ತಾರೀಕು ಸೋಮವಾರ ಪ್ರಾರಂಭವಾಗಿ ತಾರೀಕು ಮಂಗಳವಾರ ಸಮಾಪ್ತಿಯಾಯಿತು. ಈ ಬಗ್ಗೆ ಸೋಮವಾರ ಸಾಯಂಕಾಲ ಕುಮಾರು ೧೫೦ ಮಂದಿ ಕೊಲೇಜಿನ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರೊಂಗಡೆ ಹೂಗೊಂಚಲ್ಲುಗಳನ್ನೂ, ಪುಷ್ಪಮಾಲಿಕೆಗಳನ್ನೂ ಸ್ಯೆಯಲ್ಲಿ ಹಿಡಿದುಕೊಂಡು ಕೊಲೇಜಿನ ದೊಡ್ಡ ಹೋಲಿನಲ್ಲಿ ನೆರದು ಬಂದಿದ್ದರು ಈಗಿನ ರೆಕ್ಟರರ ಕಾಲದಲ್ಲಿ ಕೊಲೇಜು ಎಷ್ಟು ಉತ್ಕೃಷ್ಟವಾದ ಸ್ಥಿತಿಗೆ ಬಂತೆಂಬದನ್ನು ವರ್ಣಿಸಿ ಚಲೋದಾಗಿ ಬರೆಯಲ್ಪಟ್ಟ ಒಂದು ಸಾಬಿಮಾನ ಪತ್ರವನ್ನು ಓದಿ ತೀರಿಸಿದ ನಂತರ ಕೊಲೇಜಿನ ರೋಮನ್ ಕಥೋಲಿಕ್, ಹಿಂದೂ, ಮಹಮ್ಮದೀ ವಿದ್ಯಾರ್ಥಿಗಳು ತಾವು ತಂದ ಪುಷ್ಪಮಾಲಿಕೆಗಳನ್ನು ಕ್ರಮಪ್ರಕಾರವಾಗಿ ವಾರ್ದ್ ರೆಕ್ಟರರ ಕುತ್ತಿಗೆಗೆ ಹಾಕಿದರು ನಂತರ ಕೊಲೇಜಿನ ಸೀನಿಯರ್ ಕರ್ಣಾಟಕ ಪಂಡಿತರಾದ ಮರಾರಾ ಸಜೀವ ರಾಮಕೃಷ್ಣಯ್ಯನವರು ತಾವು ರಚಿಸಿರುವ ಸುರಸವಾದ ಕವಿತೆಯನ್ನು ಕೆಲವು ಬಾಲಕರೊಂದಿಗೆ ಹಾಡಿದರು. ಆ ಮೇಲೆ ರೆಕ್ಟರರ ಪಿಡುಪಾವಳಿಯನ್ನೂ, ಸುಗುಣಾಗಳನ್ನೂ ಪ್ರಕಾಶಗೊಳಿಸುವ ಸಂಸ್ಕೃತ ಮತ್ತು ಮಲಯಾಳ ಶ್ಲೋಕಗಳನ್ನು ಕೆಲವರು ಹಾಡಿ ಸಬಿಕರಿಗೆ ಕರ್ಣಾನಂದವನ್ನುಂಟುಮಾಡಿದರು ಉಪಾಧ್ಯಾಯರ ವೈಕಿ ಟ್ರಾದ ಮರಾರಾ ಯಲ್ ರೊಡ್ರಿಗ್ಸ್ ಎಂಬವರು ರಚಿಸಿದ ಪಾರ್ ಪಿರೆಸಿಳ ಸ್ತೋತ್ರವೆಂಬ ಸುರಸವಾದ ಕಾವ್ಯವನ್ನು ಕೊಲೇಜಿನಲ್ಲಿ I ಫೋರ್ಮಿನಲ್ ಕಲಿಯುವಗಿರುವಂಥ ವ್ಯಾಯದ ಫ್ರೆಡರಿಕ್ ಕೊಯಿಲೊ ಎಂಬ ಬಾಲಕನು ಅಭಿನಯಿಸಿ ತೋರಿಸಿ ತನ್ನ ಇಂಪಾದ ವಾಕ್ಚಾತುರ್ಯವನ್ನು ನೆರೆದ ಸಬಿಕರಿಗೆ ಪ್ರಚುರಪಡಿಸಿದನು ಇದಾದ ಮೇಲೆ ವಿದ್ಯಾರ್ಥಿಗಳಿಗೆ ಬಿರಾಮ ಮಂಜೂರಿ ನಂತರ ರೆವರೆಂಡ್ ವಾರ್ಡ್ ರೆಕ್ಟರರು ತನ್ನ ವ್ಯವಹಾರವನ್ನು ಸೂಚಿಸಿ ಒಟ್ಟೋ ಭಾಷಣ ಮಾಡಿದರು

ಮರಳಿವಾರ ದಿವಸ ವಾರ್ದ್ ರೆಕ್ಟರರ ಹೆಸರಿಗೆ ಒಂದು ಪೂಜೆಯು ಕೊಲೇಜು ಇಗರ್ಜಾಯಲ್ಲಿ ನಡೆಯಿತು ಮರುದಿವಸ ಸಾಯಂಕಾಲ ೫ ಗಂಟೆಗೆ ವಿದ್ಯಾರ್ಥಿಗಳ ಆಟವು ಪ್ರಾರಂಭವಾಯಿ, ಗದ್ದೆ ಬಾಲಕರಿಗೆ ಇನಾಮು ಹಂಚಿಕೊಡೋಣವಾಯಿತು ೧೧ ಗಂಟೆಗೆ ರುಸಾರಿಯೊ ವಸ್ತು ಮೀಲಗ್ರಿ ಇವರಿಗೆ ಕಾಲೇಜು ವಾಲಕರು ಕೊಲೇಜು ಹೋಲಿನಲ್ಲಿ ಕೂಡಿ ಎಂದಿನ ವಾರ್ದ್ ರೆಕ್ಟರರನ್ನು ವಂದಿಸಿ ತಮ್ಮ ಪ್ರೀತಿಯನ್ನು ಪ್ರದರ್ಶಿಸಿದರು. ಆದೇ ದಿನ ೧೧ ಗಂಟೆಗೆ ಕೊಲೆ ವಿನ ಕ್ರೈಮರಿ ಇಸ್ಕೂಲಿನ ಬಾಲಕರು ಕೊಲೇಜಿನ ಕೆಳಗಿರುವ ತಮ್ಮ ಶಾಲೆಯ ಕಪ್ಪೌಂಡಿದಲ್ಲಿಯೇ ನಡಕೂಡಿ ರೆಕ್ಟರರಿಗೆ ಹೂವಿನ ಮಾಲೆಗಳನ್ನು ಹಾಕಿ ಯೋಗ್ಯವಾದ ರೀತಿಯಲ್ಲಿ ಅವರನ್ನು ಸತ್ಕರಿಸಿದರು ಆಮೇಲೆ ನೆರೆದು ೦೦ ಬಾಲಕರಿಗೆ ವಾರ್ದ್ ರೆಕ್ಟರರು ಕಪ್ಪಿನ ಕೋಲನ್ನು ಹಂಚಿಕೊಟ್ಟರು ನಂತರ ರೆಕ್ಟರರು ಜಿಲ್ಲೆಯ ರೋಮನ್ ಕೆಥೋಲಿಕ್ ವಾದುರಿಗಳಿಗೆ ಒಂದು ಚಾರಿ ಔತಣವನ್ನು ಕೊಡಿಸಿದರು ಮಧ್ಯಾನ್ಹದಲ್ಲಿ ಕೊಲೇಜಿನ ವಿದ್ಯಾರ್ಥಿಗಳೂ ಕ್ರಿಕೆಟ್ ಆಟ ಪಂದ್ಯವು ನಡೆಗಿತು ಅದೇ ದಿನದ ಸಾಯಂಕಾಲ ೫ ಗಂಟೆಗೆ ಶಾಲೆಯಲ್ಲಿ ಕಲಿತ ಕೊಂಕಣಿ ಹಳೆ ವಿದ್ಯಾರ್ಥಿಗಳ ಒಂದು ದೊಡ್ಡ ಸಮೆಯು ಫಾದರ್ ರೆಕ್ಟರರಿಗೆ ಒಂದು ಮಾನಪತ್ರವನ್ನು ಸಮರ್ಪಿಸಿತು, ಪನ್ಲಿಕ್ ಪ್ರಾಸಿಕ್ಯೂಟರ್‌ಗಳೂ ಮರಾರಾ ಜೆ ಲೂರ್ದೋರವರು ರೋಮನ್ ಕಥೋಲಿಕರವರ ಪ್ರತಿನಿಧಿಯಾಗಿ ಅರ್ಪಿತವಾದ ಬಾಷಣದಲ್ಲಿ ತಮ್ಮ ಜಾತಿಯ ಅಭಿವೃದ್ಧಿಕಾರ್ಯಗಳನ್ನು ಮಾಡಿ ಮಾನಪತ್ರವನ್ನು ಸಮರ್ಪಿಸಿದರು ವಾರ್ದ್ ರೆಕ್ಟರರವರು ಅದಕ್ಕೆ ನೆರೆದ ಒಂದು ರೋಮನ ಕಥೋಲಿಕ್ ಗೃಹಸ್ಥರಿಗೆ ಧನ್ಯವಾದವನ್ನು ಸಲ್ಲಿಸಿ ಕೊಲೇಜಿನ ಸಂಯೋಜಕ ಉಪಾಧ್ಯಾಯರ ಮತ್ತು ರೋಮನ್ ಕೆಥೋಲಿಕ್ ಪಾದರಿಗಳ ನಿರಪಯುಕ್ತಂದಲೂ, ದೀರ್ಘಸಾಹಸದಿಂದಲೂ, ನೆರೆದುಂದ ರೋಮನ್ ಕಥೋಲಿಕ್ ಗೃಹಸ್ಥರ ವಿಶೇಷ ವ್ಯಯಸಹಾಯದಿಂದಲೂ ಉದಾರತೆಯಿಂದಲೂ ಕ್ಲೊಲೆಂಬಿಯಸ್ಸನ್ನಲಂಕರಿಸಲಿಕ್ಕೆ ಕಾರಣವೆಂತಲೂ ತಾನು ಮಂಗಳೂರಿನ ಬಿಶೋಪ್ ಪದವಿಯನ್ನಲಂಕರಿಸಲಿಕ್ಕೆ ದೇವರಿಚ್ಛೆ ಇದ್ದಲ್ಲಿ ಅದನ್ನು ತಾನು ಸ್ವೀಕರಿಸದೆ ನಿರ್ವಾಹವಿಲ್ಲವೆಂತಲೂ, ತಾನು ಒಂದು ವೇಳೆ ಬಿಶೋಪನಾಗಿ ಚುನಾಯಿಸಲ್ಪಟ್ಟರೂ ತನಗೆ ಕೊಲೇಜಿನ ಮೇಲಿದ್ದ ಪ್ರೀತಿಯು ಎಳ್ಳಷ್ಟಾದರೂ ಕುಂದದೆ, ಅದರ ಅಬಿವೃದ್ಧಿಗೋಸ್ಕರ ತನ್ನ ತನುಮನ್ ಧನವನ್ನು ಸಮರ್ಪಿಸಿ ಕೈಲಾದಷ್ಟು ಮಟ್ಟಿಗೆ ಸಹಾಯವನ್ನು ಮಾಡಲಿಕ್ಕೆ ಸಿದ್ಧನಾಗಿದ್ದೇನೆಂತಲೂ, ಸದಯನ್ನು ಮುಕ್ತಾಯಗೊಳಿಸುವ ಮೊದಲು ನಾನು ಇನ್ನೊಂದಾವತಿ ಧನ್ಯವಾದವನ್ನು ಸಮರ್ಪಿಸುತ್ತೇನೆಂತಲೂ ಹೇಳಿ ಧನ್ಯವಾದವನ್ನು ಸಮಾಪ್ತಿಪಡಿಸಿದರು ನಂತರ ಸಾಯಂಕಾಲ ೬ ಗಂಟೆಗೆ 'ವೈ ಪ್ರೈಸ್ ಕ್ಯಾಬ್ಬೇಜ್ ಹೈರ್' ಎಂಬ ಚಲೋ ನಾಟಕವನ್ನು ಕೊಲೇಜು ಹುಡುಗರೂ ಉಪಾಧ್ಯಾಯರೂ ಅಭಿನಯಿಸಿ ತೋರಿಸಿದರು ನಾಟಕದ ವೇಷಧಾರಿಗಳೆಲ್ಲರೂ ತಮ್ಮ ಪಾರ್ಟುಗಳನ್ನು ಯೋಗ್ಯರೀತಿಯಲ್ಲಿ ಆಡಿ ತೋರಿಸಿದರು ಈ ನಾಟಕವನ್ನು ನೋಡಲಿಕ್ಕೆ ಜಿಲ್ಲಾ ಕಲೆಕ್ಟರ ದೊರೆಗಳಾದ ಖಾನ್‌ಬಹದೂರ್ ಅಜೀಜುದ್ದಿನ್ ಸಾಹೇಬ ಬಹದೂರವರೂ, ಜಿಲ್ಲಾ ಜಡ್ಜಿ ಮೆ| ಬೂಟ್ ದೊರೆಗಳವರೂ, ಶಾಲಾ ಇನ್ಸ್‌ಪೆಕ್ಟರ್ ಮೆ| ಜ್ಯೂಸ್ಟ್‌ನೇಟ್ ದೊರೆಗಳವರೂ ಇನ್ನೂ ಅನೇಕ ದೊಡ್ಡ ದೊಡ್ಡ ಯುರೋಪಿಯನ್ ಆಫೀಸರರೂ, ಸಂಭಾವಿತ ಹಿಂದೂ ಕ್ರೈಸ್ತ ಗೃಹಸ್ಥರೂ ಉದ್ಯೋಗಸ್ಥರೂ ಕೊಲೇಜು ಹೋಲಿನಲ್ಲಿ ನೆರದು ಬಂದಿದ್ದರು

ಮಾರ್ಸೆಲ್ ಡಿ'ಸೋಜ ಕದ್ರಿ

ವಿದೇಶ ವೃತ್ತಾಂತ.

ಇಂಗ್ಲಾನ್ಡಿನೊಂದಿಗಿರುವ ಮೆಂಚೆಸ್ಟರ್ ಸ್ಟೋಕ್ ಮೊದಲಾದ ವಸ್ತ್ರದ ರಫ್ತು ವ್ಯಾಪಾರವು ಕಡಿಮೆಯಾಗಿದ್ದರಿಂದ ಅಲ್ಲಿಯ ಅರಳೆ ಕಾರ್ಖಾನೆಗಳೆಲ್ಲವೂ ಮುಚ್ಚಲ್ಪಟ್ಟಿವೆ. ಆದ್ದರಿಂದ ಆ ಕೂಲಿಯಾಳುಗಳು ಸಂಕಟಪಡುತ್ತಿರುವರು.

ವಿಲ್ಸ್ ಮತ್ತು ಮೆಕ್ಸಿಮ್ ಎಂಬವರು ಒಂದು ಡುರಾಲು ಮೋರ್ ಎಂಬ ಹೊಸ ಲೋಹವನ್ನು ಕಂಡುಕೊಂಡಿರುವ ರಂತೆ. ಎಲುಮಿನಿಯಮ್‌ಗಿಂತ ಭಾರದಲ್ಲಿ ಸ್ವಲ್ಪ ಹೆಚ್ಚಾಗಿದ್ದು ಉಕ್ಕಿನಷ್ಟೇ ಈ ಲೋಹವು ಘಟ್ಟಿಯಾಗಿರುವುದು

ಜರ್ಮನಿಯ ಯುವರಾಜರೊಂದಿಗೆ ಅವರ ಪತ್ನಿಯರು ಸಿಲೋನ್ ತನಕ ಬರುವರೆಂತಲೂ ಸಿಲೋನಿನಿಂದ ಯುವರಾಜರ ಪತ್ನಿಯರು ಜರ್ಮನಿಗೆ ತೆರಳಿದ ನಂತರ ಯುವರಾಜರು ಹಿಂದೂಸ್ಥಾನ, ಸಿಯಮ್, ಪೇಕಿಂಗ್, ಜಪಾನ್ ಮೊದಲಾದವುಗಳನ್ನು ಸಂದರ್ಶಿಸಿ ಸಿಬೆರಿಯಾ ಮಾರ್ಗವಾಗಿ ಸ್ವದೇಶಕ್ಕೆ ತೆರಳುವರಾಗಿಯೂ ತಿಳಿಯುತ್ತೇವೆ

ಅಮೇರಿಕದಲ್ಲಿ ಸಹಾ ಅರಳೆ ಕೈಗಾರಿಕೆ ಸ್ಥಿತಿಯು ಕೆಟ್ಟುಹೋಗಿರುವುದು ಈ ತಿಂಗಳ ತಾ ೧೫ರ ವರೆಗೆ ೬೬ ಅರಳೆ ಕಾರ್ಖಾನೆಗಳಲ್ಲಿ ಫೊಲ್‌ಲಿಂವ್ ಎಂಬ್ದಿ ಕೆಲಸ ನಿಲ್ಲಿಸಿಬಿಟ್ಟಿರುವರು.

ಸಂಪನ್ನರು ತಮ್ಮ ಸ್ವದೇಶ ಅಭಿವೃದ್ಧಿ ಬಗ್ಗೆ ಕಲಾಶಾಲೆಗಳನ್ನು ಸ್ಥಾಪಿಸಿ ಅತಿ ಬಡವರಿಗೆ ಸಹಾ ಇಂಥಾ ಶಾಲೆಗಳಲ್ಲಿ ಶಿಕ್ಷಣವು ದೊರೆಯಲು ಸಾಧ್ಯವಾಗುವಂತೆ ಹ್ಯಾಗೆ ಪ್ರಯತ್ನಪಡುವರೆಂಬುದು ಅಮೇರಿಕದ ಸಂಯುಕ್ತ ಸಂಸ್ಥಾನದ ಮಿಸ್ಸೂರಿಯ ಸೆಂಟ್ ಲುಯಿಸ್ ಎಂಬಲ್ಲಿ ಡೇವಿಡ್. ಜೆ. ರೆಕೆನ್ಸ್ ಎಂಬವರಿಂದ ಸ್ಥಾಪಿಸಲ್ಪಟ್ಟ ಕಲಾ ಕಾಲೇಜಿನಿಂದ ನೃಕ್ತವಾಗುವುದು ಈ ಮಹಾತ್ಮರು ತಾವು ಘಳಿಸಿರುವ ೯೦ ಲಕ್ಷ ರೂಪಾಯಿಗಳನ್ನು ಪೂರ್ಣವಾಗಿ ಈ ಕಲಾಶಾಲೆಯನ್ನು ಸ್ಥಾಪಿಸುವುದರಲ್ಲಿ ತಮಗೆ ೫೫ ವರುಷಗಳ ಪ್ರಾಯ ತುಂಬಿದಾಗ ವಿನಿಯೋಗಿಸಿ ಬಿಟ್ಟು ಅತಿ ಬಡಪತ್ತಿನ ಜೀವನಮಾರ್ಗವನ್ನನುಸರಿಸಿರುವರು ಇಂಥಾ ಕಾಲೇಜು ಒಂದನ್ನು ತನಗೆ ಮುದಿ ಪ್ರಾಯದಲ್ಲಿ ಆದಾರವಾಗಿರಬೇಕಾದ ಪೂರ್ಣ ಸಂಪತ್ತಿನಿಂದ ಸ್ಥಾಪಿಸಿದ್ದಲ್ಲದೆ, ಪ್ರತಿನಿತ್ಯವೂ ಈ ಕಾಲೇಜಿನ ಮೇಲ್ವಿಚಾರಣೆಯನ್ನು ತಾನು ಸ್ವತಹಾ ನಿರ್ವಹಿಸುತ್ತಿರುವರು ಕಲಾ ಶಾಸ್ತ್ರ ಪಾಂಡಿತ್ಯವನ್ನು ಪಡೆದವರ ಸಂಖ್ಯೆಯು ದೇಶದಲ್ಲಿ ಅಧಿಕವಾದಷ್ಟು ದೇಶದ ಸಂಪತ್ತು ಸಹಾ ಅಭಿವೃದ್ಧಿ ಹೊಂದುವುದೆಂಬ ನಮ್ರ್ಮವನ್ನು ಈ ಮಾನಶೀಲರು ತಿಳಿದಂತೆ ಭಾರತಭೂಮಿಯ ಉದ್ಧರಣೆಗಾಗಿ ನಮ್ಮ ದೇಶಸ್ಥರೂ ಸಹಾ ತಿಳಿಯುವುದು ಅಗತ್ಯವಲ್ಲವೇ?

ಅಂಗ್ಲಾಳರಲ್ಲಿ ಪೋರ್ಟ್ಸ್‌ಮೌತ್ ರೇವಿನ ಕೋಟೆ ಮೊದಲಾದವುಗಳ ನಕ್ಷೆಗಳನ್ನು ತೆಗೆಯುತ್ತಲಿದ್ದ ಒಬ್ಬ ಜರ್ಮನನನ್ನು ಹಿಡಿದು ಕೈದು ಮಾಡಿರುವರಂತೆ

ಉತ್ತರ ಹಿಂದುಸ್ಥಾನ.

—o—

ಒಟ್ಟೊ ಪ್ರಭುಗಳ ಹಿಂದೂಸ್ಥಾನದ ಆಡಳಿತೆಯ ಸ್ಮರಣಾರ್ಥವಾಗಿ ಮದನಮೋಹನ ಮಲವಿಯಾ ಮೊದಲಾದವರು ಏರ್ಪಡಿಸಬೇಕೆಂಬುವ ಉದ್ಯಾನವನ ಮೊದಲಾದ ಸ್ಮಾರಕಕ್ಕೆ ತಕ್ಕ ಪ್ರೋತ್ಸಾಹವು ದೊರಕ್ಕುತ್ತಿರುವುದೆಂಬುದಾಗಿ ತಿಳಿಯುತ್ತೇವೆ. ಗ್ವಾಲಿಯರ್, ಬಿಕಾನೀರ್, ಬನಾರಿಸ್, ಮತ್ತು ಪಟಿಯಾಲದ ಮಹಾರಾಜರುಗಳು ಈ ಏರ್ಪಾಡನ್ನು ನೆರವೇರಿಸುವರೆ ನೇಮಿಸಲ್ಪಟ್ಟ ಕಮಿಟಿಯ ಪ್ರೇಷಕರಾಗಲು ಒಪ್ಪಿರುವರು. ದರ್ಭಂಗದ ಮಹಾರಾಜರವರು ಈ ಕಮಿಟಿಯ ಉಪಾಧ್ಯಕ್ಷರಾಗಿರುವರು.

ಬಿಕಾನೀರ್ ಮಹಾರಾಜರವರು ಮಿಂಟೋ ಪ್ರಭುಗಳ ವ್ಯಾಸರಾಯ ಪ್ರಭುತ್ವದ ಸ್ಮಾರಕಕ್ಕೆ ರೂ ೧೫೦೦೦ನ್ನು ಕೊಟ್ಟಿರುವರು

ಬಂಗಾಳದ ಪ್ರೊವಿನ್ಸಿಯಲ್ ಕನ್ಫರೆನ್ಸ್ ಸಭೆಯು ಕಲ್ಕತ್ತೆಯಲ್ಲಿ ಕೂಡುವುದು ಬಾಬು ಅಂಬಿಕಾಚರಣ ಮುಜುಮ್‌ದಾರರವರು ಈ ಸಭೆಯ ಅಧ್ಯಕ್ಷ ಪದವಿಯನ್ನು ವಹಿಸಿಕೊಳ್ಳುವರು

ಅಮೀತ್ ಸಿಂಗರ ಸಹೋದರರಾದ ಕಿಷನ್ ಸಿಂಗರವರು ಈಜಿಪ್ಟ್‌ಗೆ ಮೊಕದಮೆಯಲ್ಲಿ ಶಿಕ್ಷೆ ಹೊಂದಿ ತಿಹಾರ್‌ನದಿಯು ತೀರಿದ್ದರಿಂದ ಇತ್ತಲಾಗೆ ಬಿಡುಗಡೆ ಮಾಡಲ್ಪಟ್ಟಿರುವರು

ಈ ತಿಂಗಳ ತಾ ೨೭ರ ಅಂತ್ಯವಾಗುವ ವಾರದಲ್ಲಿ ೨೭೧೫ಕ್ಕೆಗೆ ಮರಣಗಳು ಇಡೀ ಹಿಂದುಸ್ಥಾನದಲ್ಲಿದ್ದವು

ಈ ತಿಂಗಳ ತಾ ೨ನೇ ರಾತ್ರೆ ಕಲ್ಕಾದಲ್ಲಿ ಇಬ್ಬರು ಹುಡುಗರು ಸುಪ್ರ ಪ್ರೋಲೀಸು ಇನ್ಸ್‌ಪೆಕ್ಟರಾದ ಸರತ್ ಚಂದ್ರಘೋಷ್ ಎಂಬವರಿಗೆ ಎಲ್ವೆರ್ಸಿನಿಂದ ಗುಂಡು ಹೊಡೆಸಲ್ಪಡಿಸಿರುವರಂತೆ ಸರತ್ ಚಂದ್ರಘೋಷರವರು ಕಲ್ಕಾ ಕ್ಲೈಬ್ ದೇವಾಲಯದ ಹತ್ತಿರದಿಂದ ಹೋಗುತ್ತಿದ್ದಾಗ ಇಬ್ಬರು ಹುಡುಗರು ಇಂದು ಪ್ರಥಮ ಪತಿ ಸಂದರ್ಶನೆಮಾಡಲು ಅಪರಾಧಿಗಳನ್ನು ಬಿಟ್ಟಿನಲ್ಲಿ ಹಿಡಿದು ನಿಲ್ಲಿಸಿದ್ದರು ಇವನ್ನು ನೋಡಿ ಇನ್ಸ್‌ಪೆಕ್ಟರು ಎರಡಾವರ್ತಿ ಗುಂಡನ್ನು ಕೊಡಲನು ಬಂದು ಗುಂಡು ಇನ್ಸ್‌ಪೆಕ್ಟರವರ ಎಡಕೈಯನ್ನೂ ಇನ್ನೊಂದು ಎದರ ಸಣ್ಣ ಹೊಟ್ಟೆಯನ್ನು ತಿವಿದ್ದ ಎಂದೆ ಇನ್ಸ್‌ಪೆಕ್ಟರವರು ತಿಳಿಸಿದ್ದು ಇಬ್ಬರೂ ಪಲಾಯನ ಮಾಡಿದರು ಈ ಇಬ್ಬರ ಪರಿಚಯವು ಇನ್ಸ್‌ಪೆಕ್ಟರವರಿಗೆ ಇರುವುದಂತೆ

ಲಾಹೋರಿನವರ ವೈರಿ ಸೊಕಮೆಯಲ್ಲಿ ಆಫ್ಘಯ ಎಂದೆಂಬ ವರ್ತಮಿತ ಪೆಂಟಿಸ್ಟೋಟಿಸವರು ಅಪರಾಧದ ನಾಲ್ಕು ಪಿಕೆಯ ಮೊಳೆಕೆಗಳನ್ನು ಹಾಯಿರುವರಂತೆ ಪ್ರೋಲೀಸ್ ಲಾಕಾಗಳಲ್ಲಿ ಒಬ್ಬಾಯ ಮೊಳೆಕೆಗಳನ್ನು ಹೊರಪಡಿಸಲು ಪಿಕಾಸಿ ಸಾಕ್ಷ್ಯಗಳನ್ನು ಕೂಡಿಸುತ್ತಿರುವರು ಬಾಲಗಂಗಾಧರ ತಿಲಕರನ್ನು ಪಡುತ್ತಿರುವ ಸಂಕಷ್ಟಗಳ ಪ್ರತಿಕ್ರಿಯೆಯಾಗಿ ಮುಲೋಪಿಯನ್ ಲೀಗರವರ ಮೇಲಿನ ದ್ವೇಷಾಗ್ನಿಯ ಬಗ್ಗೆ ಒಂದು ಬಳಸಂಚಿನ ಕುರುಹುಗಳನ್ನು ಪೋಲೀಸಿನವರು ಕಂಡುಕೊಂಡಿರುವರೆಂಬ ವರ್ತಮಾನವಿರುವದು

ಮುಂಬಯಿ ಸಂಸ್ಥಾನದ ಕೂಂಪರೇಟಿವ್ ಕನ್ಫರೆನ್ಸ್ ಎಂಬ ಪರಸ್ಪರ ಸಹಾಯಕ ಸಂಘದವರ ಸಭೆಯು ಮುಂಬಯಿ ಗವರ್ನರರವರ ಅಧ್ಯಕ್ಷತೆಯಲ್ಲಿ ಪುನೆಯಲ್ಲಿ ಜರಗಿತು

—o—

ಡಕ್ಕಾದಲ್ಲಿ ಗುಂಡುಗಳಿಂದ ಹೊಡಿಯಲ್ಪಟ್ಟ ಗುಪ್ತ ಪೋಲೀಸು ಇನ್ಸ್‌ಪೆಕ್ಟರವರು ಚಿಕಿತ್ಸೆಯನ್ನು ಹೊಂದುತ್ತಲಿದ್ದು ಸೌಖ್ಯಪಡುತ್ತಲಿರುವರು. ಕೈದು ಮಾಡಲ್ಪಟ್ಟ ಇಬ್ಬರು ಹುಡುಗರೊಂದಿಗೆ ಇನ್ಸ್‌ಪೆಕ್ಟರರನ್ನು ಹೊಡಿಯುವಾಗ ಮತ್ತಿಬ್ಬರು ಇದ್ದರೆಂತಿ ಆದರೆ ಗುರುತಿಸಲಿಕ್ಕಾಗಲಿಲ್ಲ. ಈ ಇಬ್ಬರು ಕಲ್ಕಾರ್ ಹರಕುಮಾರ ಗುಪ್ತಾ, ಮತ್ತು ಕಲ್ಕಾಜಿಲ್ಲಾ ವರ್ತಿ ಇವರ ಮಗಂದಿಯರಾಗಿರುವರು. ಇವರಿಬ್ಬರು ನೆಗಳೂ ಪೋಲೀಸಿನವರಿಂದ ಜಪ್ತಿಮಾಡಲ್ಪಟ್ಟವು. ಯುಗಾಂತರ, ವಂದೇ ಮಾತರಂ, ಸ್ವರಾಜ, ಕರ್ಮಯೋಗಿನ ಮೊದಲಾದ ಪತ್ರಗಳು ಶಶಿಭೂಷಣ ಚಕ್ರವರ್ತಿಗಳವರ ಹುಸಿಯಲ್ಲಿ ದೊರಕಿವೆ ಎಂತಲೂ ಡಾಕ್ಟರ್ ಹರಕುಮಾರ ಮಿತ್ರರ ಮನೆಯಲ್ಲಿ ಇನ್ನು ಕೆಲವು ಪತ್ರಗಳನ್ನು ಜಪ್ತಿ ಮಾಡಿ ತಕ್ಕೊಂಡು ಹೋಗಿರುವರಾಗಿಯೂ, ತಿಳಿಯುತ್ತೇವೆ. ಈ ಇಬ್ಬರು ಹುಡುಗರು ಸಹಾ ಅನುಶೀಲನ ಸಮಿತಿಯ ಮೆಂಬರರಾಗಿದ್ದು ಡಕ್ಕಾದ ಪಿತೂರಿಗಾರರ ಮೊಕದಮೆಯ ಕೈದಿಗಳ ಸಂಗಾತಿಗಳಾಗಿರುವರಂತೆ.

ದಕ್ಷಿಣ ಹಿಂದುಸ್ಥಾನ.

ಮದ್ರಾಸು ಮಹಾಜನ ಸಬೆಯವರು ದಾದಾಭಾಯ ನವರೋಜಿಯವರ ೮೫ನೇ ಜನ್ಮ ದಿನವನ್ನು ಕಳದ ವಾರದಲ್ಲಿ ಆಚರಿಸಿದರು

ಈ ತಿಂಗಳ ತಾ ೬ಕ್ಕೆ ಪ್ರಕಟಿಸಲ್ಪಟ್ಟಂತೆ ಮದ್ರಾಸು ಎಗ್ಮೋರ್ ಮೆಮೋರಿಯಲ್ ಫಂಡಿಗೆ ರೂ 10989-2-3 ಜಮೆಯಾಗಿರುವದು.

ಬ್ರಹ್ಮಸ್ವರೂಪಿಣಿ ಮಿಶನಿನ ಸುಕುಮಾರಯ್ಯರ್ ಎಂಬವರನ್ನು ಕ್ವಿಲೋನಿನಲ್ಲಿಯ ಸೆಶನ್ಸ್ ಜಡ್ಜರವರು ಅಪೀಲಿನಲ್ಲಿ ಬಿಟ್ಟಿರುವರು.

ಬ್ರಹ್ಮಜ್ಞಾನ ಸಂಘದವರ ಈ ವರುಷದ ಕನ್ವೆಷನ್ ಸಭೆಯು ದಶಂಬರ ತಿಂಗಳ ಕ್ರಿಸ್ತಮಸ್ ರಜಾ ದಿನಗಳಲ್ಲಿ ಮದ್ರಾಸಿನ ಅಡ್ಯಾರಿನಲ್ಲಿ ಕೂಡುವುದು.

—o—

ತಿರುವಾಂಕೋಡು ಸಂಸ್ಥಾನದಲ್ಲಿ ಮುದ್ರಣಾಲಯಗಳ ಕಾನೂನನ್ನು ಜ್ಯಾರಿಗೆ ತರುವ ಸಂಭವವಿರುವುದೆಂಬುದನ್ನು ಅಲ್ಲಿಯ ಪತ್ರಿಕಾಕರ್ತರು ತಿಳಿಕೊಂಡು ಆ ಬಗ್ಗೆ ಆ ಸಂಸ್ಥಾನದ ಪತ್ರಿಕಾಕರ್ತರೆಲ್ಲರೂ ಸಭೆ ಸೇರಲಿಕ್ಕೆ ನಿಶ್ಚಯಿಸಿರುವರು

ದಕ್ಷಿಣ ಕನ್ನಡ.

—o—

ಅಮ್ಮೆಂಬಳ ಸಂಬ್ರಾಯ ವೈಗಳವರ ಮೆಮೊರಿಯಲ್ ಫಂಡು ಈ ಫಂಡಿಗೆ ವಾಗ್ದತ್ತ ಮಾಡಿದ ವಂತಿಗೆಯ ವಸೂಲಾದ ಪಟ್ಟಿಯನ್ನೂ ಈಚಿಗೀಚೀಗೆ ಈ ಫಂಡಿಗೆ ದ್ರವ್ಯ ಸಹಾಯ ಮಾಡಲೂ ವಾಗ್ದತ್ತ ಮಾಡಿರುವವರ ಹೆಸರುಗಳನ್ನೂ ಇನ್ನೊಂದು ಕಡೆಯಲ್ಲಿ ಪ್ರಕಟಿಸಿರುತ್ತೇವೆ. ವಾಗ್ದತ್ತ ಮಾಡಿದ ಐವಜಿನಲ್ಲಿ ಈ ತಿಂಗಳ ತಾರೀಕು ೨೮ರ ವರೆಗೆ ರೂ 3114—8—0 ವಸೂಲಾಗಿರುವದಾದರೂ ಪತ್ರದಲ್ಲಿ ಸ್ಥಳದಚಣಿಯಿಂದ ರೂ 2925-0-0 ವರೆಗೆ ವಸೂಲು ಕೊಟ್ಟವರ ಹೆಸರನ್ನು ಮಾತ್ರ ಪ್ರಕಟಿಸಿರುತ್ತೇವೆ. ಬಾಕಿ ವಸೂಲು ಕೊಟ್ಟಿರುವ ಗೃಹಸ್ಥರ ಹೆಸರುಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು

ಈ ಫಂಡಿನ ಬಗ್ಗೆ ಏರ್ಪಡಿಸಲ್ಪಟ್ಟ ಮಂಗಳೂರು ಕಮಿಟಿಯವರ ಸಭೆಯು ಇತ್ತಲಾಗೆ ಕೂಡಿತ್ತು. ಫಂಡಿಗೆ ದ್ರವ್ಯ ಸಹಾಯವನ್ನು ಮಾಡಲು ವಾಗ್ದತ್ತ ಮಾಡಿರುವವರಿಂದ ವಂತಿಗೆಯನ್ನು ವಸೂಲುಮಾಡಲೂ ಫಂಡಿಗೆ ದ್ರವ್ಯ ಸಹಾಯ ಮಾಡುವರೆ ಬಾಕಿ ಇದ್ದವರನ್ನು ಫಂಡಿನ ಪಾಲಿದಾರರಾಗಿ ಮಾಡುವರೆಯೂ ನಮ್ಮ ಪಲ್ಲೆಯ ಅಯ್ಯಾ

[illegible] ಈಗಿನ ನಮೂದಿಸೋಣಾದ ಕಮಿಟಿಗಳನ್ನು [illegible] ಮಾಡಿರುವರು. ಬರುವ ಕಾರ್ತಿಕ ತಿಂಗಳೊಳ ಗಾಯೇಂಡನ್ನು ಪೂರ್ಣವಾಗಿ ವ್ಯವಸ್ತೆ ಪಡಿಸಬೇ ಕೆಂಬುವ ಮನೋಗತವಿರುವದರಿಂದ ಫಂಡಿಗೆ ಹಣ ಸಹಾ ಯ ನಿಧಿಗತ್ತ ಮಾಡಿದವರು ತ್ವರ್ಯದಿಂದ ದಯಮಾಡಿ ತಮ್ಮ ಚಂದಾ ಮೊಬಲಗುಗಳನ್ನು ವಸೂಲು ಕೊಡುವು ದಲ್ಲದೆ ದ್ರವ್ಯಸಹಾಯ ಮಾಡಲು ಬಾಕಿ ಇರುವ ಸದ್ಗೃಹ ಸ್ಥರು ಫಂಡಿಗೆ ಚಂದಾದಾರರಾಗಿ ಸೇರಿಕೊಂಡು ತಮ್ಮ ಚಂದಾ ಮೊಬಲಗುಗಳನ್ನು ವಸೂಲು ಕೊಡಬೇಕಾಗಿ ಅಪೇಕ್ಷಿಸೋಣಾಗುತ್ತದೆ

ಆಯಾ ಊರುಗಳಲ್ಲಿ ಆರಿಸಲ್ಪಟ್ಟ ಸಬ್ ಕಮಿ ಟಿಗಳ ಮೆಂಬರರ ಹೆಸರುಗಳು (ಆಯಾ ಊರಿನ ಸಬ್ ಕಮಿಟಿಯ ಗೃಹಸ್ತರವರು ತಮ್ಮ ಕಮಿಟಿಗೆ ಮೆಂ ಬರರನ್ನಾಗಿ ಅಗತ್ಯವುಳ್ಳವರನ್ನು ಹೆಚ್ಚಿಗೆ ಸೇರಿಸಿಕೊಳ್ಳ ಬಹುದು)

ಉಡುಪಿ ರಾ ಉದಿಯಾವರ ಶೇಷಗಿರಿ ಪೈಗಳು ರಾ। ಅನಂತ ಪಡಿಯಾರರು, ರಾ। ಮಂಜುನಾಥ ಬಾಳಿ ಗರು, ರಾ। ಹಾರಾಡಿ ವಾಸುದೇವ ಪೈಗಳು, ರಾ ಕೊಚ್ಚಿ ಕಾರ ರಾಮನಾಥ ಪೈಗಳು, ರಾ ಯಂ ವೆಂಕಟೇಶ ಪ್ರಭು ಗಳು, ರಾ। ಟಿ ಮುಕುಂದ ರಾಯರು ರಾ ಯು ವಾಸು ದೇವಾಚಾರ್ಯರು, ರಾ। ಕೇಶವ ಉಪೇಂದ್ರ ಕುಡುವರು

ಕಲ್ಯಾಣಪುರ ರಾ। ಕೃಷ್ಣರಾಯ ಬಾಳಿಗರು, ರಾ। ಸಾಂತಪ್ಪ ಪಡಿಯಾರು ರಾ। ನಾಗಪ್ಪ ಮಲ್ಯರು

ಬ್ರಹ್ಮಾವರ ರಾ ಕೊಚ್ಚಿಕಾರ ರಾಮಚಂದ್ರ ಪೈ ಗಳು, ರಾ। ತೊನ್ಸೆ ವಾಂಮೆರಂಗ ಕಿಣಿಗಳು, ರಾ ಕೊಕ್ಕ ರಣೆ ವಾಮನ ನ್ಯಾಕರು

ಕುಂದಾಪುರ ತಾಲೂಕು ರಾ ಯಂ ರಾಮ ಚಂದ್ರ ಕಾಮತರು, ರಾ। ಯು ಸುಬ್ಬಯ ನ್ಯಾಕರು ರಾ ಕೆ ಕೃಷ್ಣ ಬಂಡಾರಿಗಳು, ರಾ। ಗಂಗೊಳ್ಳಿ ನಾಗಪ್ಪ ನ್ಯಾ ಕರು, ರಾ। ಬೈಲೂರು ಮಂಜುನಾಥ ಶ್ಯಾನಬಾಗರು, ರಾ। ಗುಜ್ಜಾಡಿ ಸಾಂತಪ್ಪ ನ್ಯಾಕರು, ರಾ। ಬಾಂಡ ನಾರಾಯಣ ಪೈಗಳು ರಾ। ಹಟ್ಟಂಗಡಿ ಲಕ್ಷ್ಮೀನಾರಾಯಣ ಕಾಮತರು

ಕಟ್ಟಪಾಡಿ ರಾ ವಾಂಗಳ ವೈಕುಂಟನಾಯ್ಕರು ರಾ। ಬಾಬು ಯಾನೆ ಮಂಜುನಾಥ ಕಾಮತರು ರಾ ವಾ ಮನ ಕಿಣಿಯರು

ಪಡುಬಿದ್ರಿ ರಾ। ಪ ಶ್ರೀನಿವಾಸ ಶ್ಯಾ ನಭರು ರಾ। ಅಣ್ಣಪ್ಪ ನ್ಯಾಕರು, ರಾ ಮುಕುಂದ ನ್ಯಾಕರು

ಮುಲ್ಕಿ ರಾ। ಎಂಗ್ಲ ನಾರಾಯಿಣ ಕಾಮತರು ರಾ। ನಾವಕಾರ ಶ್ರೀನಿವಾಸ ಪ್ರಭುಗಳು ರಾ ಗೂಳಿಂಜ ಕುಡ್ವರು, ರಾ ಜನಾರ್ಧನ ಶ್ಯಾನಬಾಗರು, ರಾ ಮೋಹ ನರಸಿಂಹ ಶ್ಯಾನಬಾಗರು, ರಾ ಲಿಂಗ್ಯಾವರ ಶ್ರೀನಿವಾಸ ಶ್ಯಾನಭೋಗರು, ರಾ। ಈ ವಿಟ್ಟಲ ಶ್ಯಾನಭೋಗರು, ರಾ ಯಂ ರಾಮಕಾವ ತರು, ರಾ ಮುಕುಂದ ಎಂಜರು ರಾ ಉದ್ಯಾವರ ವಿಟ್ಟಪ್ಪ ಶ್ಯಾನಬಾಗರು

ಕಾರ್ಕಳ ರಾ। ಕೆ ಸುಬ್ರಾಯ ಕಾಮತರು, ರಾ। ರಾಮದಾಸ ಕಾಮತರು ರಾ। ವೆಂಕಟ್ರಾಯ ಪ್ರಭುಗಳು ರಾ। ವಿಟ್ಟಪ್ಪ ನ್ಯಾಕರು, ರಾ। ರಾಮಹೆಗ್ಡೆಯರು, ರಾ। ಪದ್ಮಣ್ಣಯ್ಯನವರು, ರಾ। ಲಕ್ಷ್ಮಣ ಪೈಗಳು, ರಾ। ಪ ಮುಕುಂದ ಕಾಮತರು, ರಾ ಪಿ ಶೇವಗಿಲ ಪ್ರಭುಗಳು

ಬಂಟ್ವಾಳ, ಪುಂಜಾಲಕಟ್ಟೆ ರಾ। ವಿ ಗಣಪತಿ ಪ್ರಭು ಗಳು, ರಾ। ಸರ್ವೋತ್ತಮ ಬಾಳಿಗರು, ರಾ। ರಾಮಕೃಷ್ಣ ಬಾಳಿಗರು, ರಾ। ಎಚ್ ವಿಟ್ಟಪ್ಪ ಪೈಗಳು, ರಾ। ಪದ್ಮನಾಭ ವಿಟ್ಟಲ ಬಾಳಿಗರು, ರಾ ವೆಂಕಟ್ರಾಯ ಪೈಗಳು, ರಾ। ಪುರುಷೋತ್ತಮ ಬಾಳಿಗರು, ಪಿಲಾತಬೆಟ್ಟು ಮಂಜುನಾಥ ನ್ಯಾಕರು, ರಾ। ಪಿ. ಅನಂತ ಪೈಗಳು, ರಾ। ಕರಿಂಗಾನ ಶ್ರೀನಿವಾಸ ಕಾಮತರು, ರಾ। ಕೊಳ್ಕೆರೆ ವಿಟ್ಟಪ್ಪ ಶ್ಯಾನ ಭೋಗರು, ರಾ। ಕರಿಂಗಾನ ಮುಕುಂದ ಪೈಗಳು.

ಪುತ್ತೂರು, ಉಪ್ಪಿನಂಗಡಿ ರಾ। ಸಾವಕಾರ ಮಾ ಧವ ಬಟ್ಟರು, ರಾ। ಪುರುಷೋತ್ತಮ ಭಟ್ಟರು, ರಾ। ಸರಾಫ ನರಸಿಂಹ ನ್ಯಾಕರು, ರಾ। ಕೆ ರಾಮ ನ್ಯಾ ಕರು, ರಾ। ಎಚ್ ಗಣಪತಿ ರಾಯರು, ರಾ। ತಿಮ್ಮರ್ಸ ಪೈಗಳು, ರಾ। ನರಸಯ್ಯ ಮಲ್ಯರು, ರಾ। ಮ್ಹಾಳಪ್ಪ ಪೈಗಳು, ರಾ। ನಾರಾಯಣ ಶ್ಯಾನಭಾಗರು

ಬೆಳ್ತಂಗಡಿ ರಾ। ಕೆ ರಾಮಚಂದ್ರ ಶ್ಯಾನಭಾ ಗರು, ರಾ। ಕೆ ಚರ್ತಪ್ಪ ಶ್ಯಾನಬಾಗರು

ಕಾಸರಗೋಡು ತಾಲೂಕು ರಾ। ಯಂ ನರ ಸಯ್ಯ ಶ್ಯಾನಭೋಗರು, ರಾ। ಯಂ ವೈಕುಂಟ ಭಕ್ತರು, ರಾ। ಸ ಬ್ಬಾಯ ಕಿಣಿಯರು, ರಾ। ನಾರಾಯಣ ಕಾಮ ತರು, ರಾ। ಪದ್ಮನಾಭ ಬಟ್ಟರು, ರಾ। ಕೆ ಕೊಗ್ಗ ಯಾನೆ ಶ್ರೀಧರ ನ್ಯಾಕರು, ರಾ। ಅನಂತ ಚೆಕ್ತರು, ರಾ। ಕೆ ಪಿ ಅಚ್ಚುತ್ತಯ್ಯನವರು, ರಾ। ಕ ನರಸಿಂಗ ನ್ಯಾಕರು, ರಾ ಎಸ್ ಶ್ರೀನಿವಾಸ ಕಾಮತರು, ರಾ ನರಸಿಂಹ ಕಾಮ ತರು ರಾ ಕೆ ನಾರಾಯಣ ಪೈಗಳು, ರಾ। ಬೇಕಲ್ ಜಂಗ್ಲ ನ್ಯಾಕರು

ಬೆಂಗಳೂರು ರೆವಿನ್ಯೂ ಬೋರ್ಡಿನ ಮೆಂಬರ ರಾದ ಮಹಮಾನಪಟ್ಟ ಮೆ ಜ ಇ ಸಿ ಸ್ಟುವರ್ಟರವರು ಈ ದಿನ ಸಾಯಂಕಾಲದ ಪ್ರೈಸಿನಲ್ಲಿ ಇಲ್ಲಿಗೆ ಬಂದು ತಲ್ಪ ವರಾಗಿ ತಿಳಿಯುತ್ತೇವೆ

ಮೆ। ಎಮ್ ಹೆಚ್ಸಿಸ್ ಎಂಬವರನ್ನು ಮಂಗಳೂರಿನ ಪೋಲ್ಟ್ ಆಪೀಸರನ್ನಾಗಿ ನೇಮಿಸಿರುವರು

ಕಲ್ಲಿಕೋಟೆ ಸರ್ಕಾರ್‌ಮೆಂಟ್ ಪ್ರೈಸಿಂಗ್ ಶಾಲೆಯಲ್ಲಿ ಈ ಮೊದಲು ತೇರ್ಗಡವಟ್ಟು ಈಗ ಕೆಲಸದಲ್ಲಿರುವ ಉಪಾಧ್ಯಾಯರೆಲ್ಲರ ಒಂದು ಸಭೆಯು ಈ ತಿಂಗಳ ತಾ ೫, ಎಳರಲ್ಲಿ ಕಲ್ಲಿಕೋಟೆಯಲ್ಲಿ ನಿರ್ಧರಿಸುವಂತೆ ನಿಶ್ಚಯಿ ಸಿರುವದ್ದಾಗಿ ತಿಳಿಯುತ್ತೇವೆ ಈ ಒಗ್ಗೆ ಎರಡು ದಿವಸ ಗಳ ರಜೆಯು ಆ ಎಲ್ಲಾ ಉಪಾಧ್ಯಾಯರಿಗೂ ಕೊಡಲ್ಪ ಟ್ಟಿರುವುದು ಈ ಸಂದರ್ಭದಲ್ಲಿ ವಿದ್ಯಾ ವಿಷಯಗಳಲ್ಲಿ ಶಾಲಾ ಇನ್ಸಪೆಕ್ಟರಂಗಿರುವ ಬ್ರೈತ್‌ವೇಟ್ ಥೋಬೆಗಳ ವರೂ ಸ್ಪೆಷಲ್ ವಿದ್ಯೆಯಿ ಕಲೆಕ್ಟರರಾಗಿರುವ ರಾ। ಮಂಗ ಳೂರು ಎಂಬರಂಗ ಕಿಣಿ ಮೊದಲಾದವರೂ ಕನ್ನಡ ಜಂಗ್ಲಿ ವಾಲ್ಯಾಳ್ಳಿ ಬಾಷಣ ಮಾಡುವರಂತೆ

ನಮ್ಮ ದೇಶದಲ್ಲಿ ಆರೋಗ್ಯಕ್ಕೆ ಬೇಕಾದ ಅನೇಕ ಸಂಗತಿಗಳನ್ನು ಮೂಢಜನರು ಅಲಕ್ಷಿಸುತ್ತಾರಿದ್ದರಿಂದ ಅವರಿಗೆ ನಿಜಕಾರಣವನ್ನು ಗ್ರಹಿಸಲಶಕ್ತರಾಗಿರುವುದರಿಂದ ಪ್ರಾಜ್ಞೇನ ಹಿಂದೂ ಶಾಸ್ತ್ರಜ್ಞರೂ ವೈದ್ಯ ಪಂಡಿತರು ಮೊದಲಾದವರೂ ಮೂಢ ಜನ ರಾದರೂ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂಬ ಬಯಕೆಯಿಂದ ಅಂಧಾ ನೇಕ ಕ್ರಮಗಳನ್ನು ಮತಾಚಾರಗಳೆಂತ ವಿಧಿಸಿದರು ಆದ್ದರಿಂದ ಎಲೆ ತಿನ್ನುವಾಗ್ಗೆ ಅಡಿಕೆಯನ್ನು ಮೊದಲು ತಿನ್ನದೆ ಕಡೆಗೆ ತಿನ್ನಬೇಕೆಂತಾಗಲೀ ನರಗಳೆಲ್ಲವನ್ನು ಕಿತ್ತು ತೆಗೆಯದೆ ಎಲೆ ತಿನ್ನಬಾರದೆಂತಾಗಲೀ ಸರ್ವ ಸಾಧಾರಣವಾದ ಮಾತಿನಿಂದ ಹೇಳದೆ ಆ ಕ್ರಮವನ್ನು ಭಕ್ತಿ ಸಮ್ಮಂಧವಾದ ಕ್ರಮವೆಂಬಂತೆ ಗಂಭೀರ ಮಾತುಗಳಿಂದ ಹೇಳಿದರು ಹ್ಯಾಗೆಂದರೆ:—

ತಾಂಬೂಲ ಚರ್ವಣಾರ್ಥಂ ಪೂರ್ವಂ—ಪೂಗಂ ಖಾದತಿಯತ್ನ
ಸ ಸಪ್ತಜನ್ಮನಿಸ್ತೇಜಾ—ಪುನೇ ಶ್ವಾತ್ರಧಿವಿಷ್ಯತಿ ॥

ಎಂದು ಹೇಳಿದರು. ಅಂದರೆ ಎಲೆ ತಿನ್ನುವಲ್ಲಿ ಪ್ರಥಮತಃ ಯಾವಾತನು ಅಡಿಕೆ ತಿನ್ನುತ್ತಾನೋ ಅಂಥವನು ಏಳು ಜನ್ಮದಲ್ಲಿಯೂ ಮಹಿಮಾ ಹೀನನಾಗಿ ದಾರಿದ್ರ್ಯ ದಲ್ಲಿರುವನು. ಆ ಮೇಲೆ ನಾಯಿಯಾಗಿ ಹುಟ್ಟುವನು.

ಇದು ಮಾತ್ರವಲ್ಲದೆ ಆದರಲ್ಲಿರುವ ಎಲ್ಲಾ ನರಗಳನ್ನು ತೆಗೆದು ತಿನ್ನಬೇಕು ವಿಷಯಕ್ಕೆ ಈ ರೀತಿ ವಿವರಣೆ ಕೊಡುವರು.—ಎಲೆಯ ಅಗ್ರದಲ್ಲಿ ಲಕ್ಷ್ಮೀ ದೇವಿಯು, ತೊಟ್ಟಿನಲ್ಲಿ ಕಲಹ ಪ್ರಿಯನೆಂದೆಣಿಸುವ ಕಲಿಯೂ, ಮಧ್ಯಭಾಗದಲ್ಲಿ ಬ್ರಹ್ಮದೇವನೂ ಇರುವರೆಂದು ಆ ನರಗಳಲ್ಲಿ ವರುಣಾದಿ ಅಷ್ಟದಿಕ್ಪಾಲಕರೂ ಇದ್ದಾರೆ ಎಂಬದೇ. ಹೀಗಾದರೆ ಅಂಧಾ ದೇವ ದೇವತೆಗಳನ್ನು ಬಾಯಲ್ಲಿ ಹಾಕಿಕೊಂಡು ತಿಂದರೆ ಅವರನ್ನು ಕೊಂದ ಪಾಪವು ಪ್ರಾಪ್ತವಾಗುತ್ತದೆಂಬ ಭಕ್ತಿ ಪೂರ್ವಕವಾದ ಭಯ ಭೀತಿಯು ಜನರಲ್ಲಿ ಹುಟ್ಟಿ ಅದರ ನರಗಳನ್ನೆಲ್ಲಾ ಮೊದಲೇ ತೆಗೆದು ಬಿಡಬೇಕೆಂಬದು ಇದರ ಗುಟ್ಟಾಗಿರುತ್ತದೆ. ತೊಟ್ಟು ಬಹು ಅಪಾಯಕರವಾಗಿರುವುದರಿಂದ ಅವರಲ್ಲಿ ಕಲಿಯು ಇದ್ದಾನೆಂತೆ ಳೆವರು ಅಗ್ರಸ್ಥಾನದಲ್ಲಿ ಲಕ್ಷ್ಮೀದೇವಿ ಇರುತ್ತಾಳೆಂಬುವುದರಿಂದ ಅಗ್ರವನ್ನು ಬೇಡಿಸಿ ಕೆಲವರು ಹಣಕ್ಕೆ ಹಚ್ಚಿಕೊಳ್ಳುವರು, ಯಾ ಹೆಚ್ಚಿನವರು ಕಿವಿಯಲ್ಲಿಟ್ಟು ಕೊಳ್ಳುವರು ಎಲೆಯನ್ನು ತೊಡೆಯು ಮೇಲಿಟ್ಟುಕೊಳ್ಳುವದೂ ಆಕ್ಷೇಪಕರವಾಗಿದೆ ಎಂಬ ಮಾತಿಗೂ ಈ ವರ್ಣನೆಯೇ ಕಾರಣವೆಂದು ತೋರುತ್ತದೆ.

ಬ್ರಹ್ಮಾದಿ ದೇವ ದೇವತೆಗಳು ವೀಳ್ಯದೆಲೆಯಲ್ಲಿ ಇದ್ದಾರೆಂತ ಈಗಿನ ನವಸುಧಾ ರಣೆಯ ಕಾಲದಲ್ಲಿ ಯಾರೂ ನಂಬರು. ಹಾಗಾದರೆ ಇದರ ಗುಟ್ಟು ಏನೆಂತ ವಿಚಾರಿಸೋಣ—

ವೈದ್ಯ ಶಾಸ್ತ್ರಕ್ಕನುಸಾರವಾಗಿ ಎಲೆಯಲ್ಲಿ 13 ಗುಣಗಳಿವೆ. ಹಲ್ಲುಗಳನ್ನು ಗಟ್ಟಿ ಮಾಡುವ ಗುಣವು ಇವುಗಳಲ್ಲೊಂದು ಹಲ್ಲುಗಳನ್ನು ಗಟ್ಟಿಮಾಡುವ ಗುಣವು ಅಡಿಕೆಗೆ ಇಲ್ಲ ಹೀಗಾಗಿ ಅಡಿಕೆಯನ್ನು ಮೊದಲು ಬಾಯಲ್ಲಿ ಹಾಕಿ ಅನಂತರ

ಶೇಕ್ಸಪಿಯರ್ ಮಹಾಕವಿಯವರ "ಸಿಂಬೆಲೈನ್" ಎಂಬ ನಾಟಕವನ್ನು ಹೋಲುವ, "ಇಂದಿರಾಬಾಯಿ" ಗ್ರಂಥಕರ್ತನಿಂದ ಬರೆಯಲ್ಪಟ್ಟ,

ಸೀಮಂತಿನಿ,

ಎಂಬ ಬಹು ಮನೋರಂಜನೀಯವಾದ ಹೊಸಗನ್ನಡ ನಾವೆಲ್,

ಸ್ತ್ರೀ ವೈದುಷ್ಯ, ದರ್ಮಾದರ್ಮವಿವೇಚನೆ, ವಿದ್ಯಾವಿಹೀನರ ದುರ್ಗತಿ, ಇವೇ ಮುಂತಾದ ಮಹದ್ವಿಷಯಗಳನ್ನು ಹೃದಯಂಗಮವಾಗಿಯೂ ರಮ್ಯವಾಗಿಯೂ ವರ್ಣಿಸುವದು ಓದುವುದಕ್ಕೆ ತೊಡಗಿದರೆ ಕೊನೆ ಮುಟ್ಟುವ ವರೆಗೂ ಬಿಡಲು ಮನಸ್ಸಾಗದು ವೈನೂರು ಗವರ್ನಮೆಂಟಿನವರಿಂದ ಪೋಷಿಸಲ್ಪಟ್ಟಿದೆ ಮದ್ರಾಸು ಗವರ್ನಮೆಂಟಿನವರಿಂದ ಯುರೋಪಿಯನ್ ಮತ್ತು ಯುರೇಸ್ಸಿಯನ್ ಸಿವಿಲ್ ಆಫೀಸರುಗಳ ಪಂಕ್ತಿಗೆ ಇದನ್ನು ಪಠ್ಯಪುಸ್ತಕವಾಗಿ ನೇಮಿಸಲ್ಪಟ್ಟಿದೆ ಅನೇಕ ಇಂಗ್ಲಿಷ ಕನ್ನಡ ವರ್ತಮಾನ ಪತ್ರಿಕೆಗಳ ಪೀಠಿಕೆಯನ್ನು ಹೊಂದಿದೆ.

ಕ್ರಯ 12 ಆಣೆ ಸ್ತ್ರೀಯರಿಗೆ ಮಾತ್ರ 10 ಆಣೆ. ಟಪ್ಪಾಲ್ ಖರ್ಚು ಬೇರೆ

ಜಿ. ವೆಂಕಟರಾವ್, ಮಹಾದೇವ ಪೇಟ್ ಮಡಿಕೇರಿ.

ಇವರಲ್ಲಿ ಸಿಕ್ಕುವುದು.

ದಯವಿಟ್ಟು ಓದಿರಿ ! ಸೌಖ್ಯವನ್ನು ಹೊಂದಿರಿ !!

ಕಾಮ ಶಾಸ್ತ್ರ

ಉಚಿತವಾಗಿ ಕಳುಹಿಸಲ್ಪಡುವುದು ! ಕನ್ನಡದಲ್ಲಿ ಈ ಪುಸ್ತಕವು ಅಚ್ಚಾಗುತ್ತಾ ಇರುವುದು ಇದನ್ನೋದುವದರಿಂದ ದೇಹ ಮನಸ್ಸಂಬಂಧಗಳಾದ ಸಕಲ ಬಾಧೆಗಳೂ ಪರಿಹಾರವಾಗುವವು ! ಅಖಂಡಾನೋನ್ಯ ಸಂಪದಗಳುಂಟಾಗುವವು ! !

ಆತಂಕ ನಿಗ್ರಹ ಮಾತ್ರೆ

ಊಟವಾದ ಒಳಿಕ ಹಗಲಿರುಳೂ ಸೇವಿಸಬೇಕಾದದ್ದು ! ಆರೋಗ್ಯಶಾಲಿಗಳಿಗೂ ರೋಗ ಪೀಡಿತರಿಗೂ ಉಪಯುಕ್ತವಾದದ್ದು.

ಈ ಮಾತ್ರೆಗಳು —

(೧) ಜೀರ್ಣಕೋಶ ಸಂಬಂಧವಾದ ವ್ಯಾಧಿಗಳನ್ನೆಲ್ಲಾ ಪರಿಹರಿಸುವದು. (೨) ನರಗಳನ್ನು ದೃಢಪಡಿಸುವದು. (೩) ಜ್ಞಾಪಕ ಶಕ್ತಿಯನ್ನು ವೃದ್ಧಿಗೊಳಿಸುವದು. (೪) ಮೆದುಳನ್ನು ಸರಿಪಡಿಸುವದು. (೫) ಶಕ್ತಿಯನ್ನುಂಟುಮಾಡುವದು. (೬) ಪ್ರಾಣಾಧಾರಗಳಿಂದ ಅಂಗಗಳನ್ನು ಬಲಪಡಿಸುವರು. (೭) ನಷ್ಟವಾದ ಶಕ್ತಿಯನ್ನು ಮತ್ತೆ ವೃದ್ಧಿಗೊಳಿಸುವದು ೩೦ ಮಾತ್ರೆಗಳಿರುವ ಡಬ್ಬಿ ೧ಕ್ಕೆ ರೂ. ೧—೦—೦

ಆತಂಕನಿಗ್ರಹ ಔಷಧಾಲಯ
೩೨ ಬ್ರಾಡ್ವೇ ಮದರಾಸು. } ವೈದ್ಯ ಶಾ
ಮಣಿಶಂಕರ ಗೋವಿಂದ

ಒಂದು ವೀಳೆ ಹೆಲ್ಲುಗಳಿಗೆ ಕೇಡಾದೀತು. ಎಲೆಗೆ ಹಚ್ಚಿರುವ ಸುಣ್ಣ ಬಾಯೊಳಗೆ ಪ್ರವೇಶವಾದ ನಾಲಿಗೆ ಮತ್ತು ಬಾಯಿಯ ಅಂಗಳವು ಸುಡುವುದುಂಟು. ಪರಂತು ಅಡಿಕೆಯನ್ನು ಕಡಿಗೆ ಬಾಯಲ್ಲಿ ಹಾಕಿಕೊಂಡು ವೀಳ್ಯ ತಿಂದರೆ ಸುಣ್ಣವು ಬಾಯನ್ನು ಸುಡುವುದೇ ಇಲ್ಲ ಎಂತ ವಾಚಕರು ಪರೀಕ್ಷಿಸಿದಲ್ಲಿ ಅನುಭವವಾದೀತು. ಅಂದರೆ ಸುಣ್ಣಕ್ಕೆ ಎಲೆಯ ರಸದೊಂದಿಗೆ ಮಿಶ್ರವಾಗಿ ಅವುಗಳಲ್ಲಿ ಒಂದರ ಬಲವನ್ನು ಮತ್ತೊಂದು ಕಡಿಮೆ ಮಾಡುವುದು, ಅಥವಾ ಅವೆರಡು ಒಟ್ಟು ಕೂಡಿ ಪೂರ್ಣ ಬೇರೆ ಸತ್ವವನ್ನು ಉಂಟುಮಾಡುವವು. ಪರಂತು ಅಡಿಕೆಯ ರಸವು ಮೊದಲಾಗಿ ಸುಣ್ಣಕ್ಕೆ ಅಥವಾ ಎಲೆಯ ರಸಕ್ಕೆ ತಾಗಿದರೆ ಸುಣ್ಣವೂ ಎಲೆಯ ರಸವೂ ತಕ್ಕ ರೀತಿಯಲ್ಲಿ ಮಿಶ್ರವಾಗುವದಿಲ್ಲವೆಂತ ತಿಳಿಯಬೇಕು. ಸುಣ್ಣ ಹಚ್ಚಿರುವ ಎಲೆಯನ್ನು ಮೊದಲು ಚರ್ವಣ ಮಾಡಬೇಕೆಂಬ ಈ ಗಂಭೀರ ಕ್ರಮವು ವಿಧಿಸಲ್ಪಟ್ಟಿರುವುದರಿಂದ ಸುಣ್ಣದ ಸತ್ವವೂ ಎಲೆಯ ರಸವೂ ಅವುಗಳಿಗೆ ಆಡಿಕೆಯ ಸತ್ವ ಮಿಶ್ರವಾಗುವ ಮೊದಲೇ ಒಂದಕ್ಕೊಂದು ಮಿಶ್ರವಾಗದಿದ್ದರೆ ಏನಾದೊಂದುತರದ ಕಲ್ಪಿತ ಕೇಡಾಗಬಹುದೆಂಬದನ್ನು ಪ್ರಾಚೀನ ಪಂಡಿತರು ನೂರಾರು ವರುಷಗಳ ಮೊದಲು ತಿಳುಕೊಂಡಿರಬೇಕೆಂತ ಹೇಳಿದರೆ ತಪ್ಪಾಗದು.

ಎಲೆಯ ಪ್ರತಿ ಧಾಗಕ್ಕೆ ಸುಣ್ಣ ಹಚ್ಚಬೇಕೆಂಬ ನಿಯಮ ಇರುವದರಿಂದಲೂ ಎಲೆಯ ನರಗಳನ್ನೆಲ್ಲಾ ತೆಗೆದು ಬಿಸಾಡಬೇಕೆಂಬ ವಿಧಿ ಇರುವದರಿಂದಲೂ ಎಲೆಯಲ್ಲಿ ಅಥವಾ ಅದರ ನರದಲ್ಲಿ ಏನಾದರೊಂದು ತರದ ಸಂಜು ಇರಬೇಕೆಂಬುದಾಗಿಯೂ ಆ ಸಂಜು ಪದಾರ್ಥವನ್ನು ಸುಣ್ಣದಿಂದ ಪೂರಾ ಸುಟ್ಟು ಬಿಡುವಂತೆ ಜಾಗ್ರತೆ ತಕ್ಕೊಳ್ಳುವದು ಅವಶ್ಯವೆಂಬದಾಗಿಯೂ ಸುಣ್ಣದ ಖಾರವು ಎಲೆಯ ರಸದಿಂದ ಮಾಯವಾಗುತ್ತದೆಂಬದಾಗಿಯೂ ನಾವು ಭಾವಿಸಬೇಕಾಗುತ್ತದೆ. ಎಲೆಯ ನರದೊಳಗೆ ಒಂದು ಅಪರೂಪವಾಗಿ ಹೆಚ್ಚು ವಿಷಕರವಾದ ಕೂದಲಿನಷ್ಟು ಸೂಕ್ಷ್ಮವಾದ ಹುಳವು ಇರುವುದುಂಟೆಂತ ಈಗಿನ ಪಂಡಿತರಿಗೂ ಗೊತ್ತಾಗಿದೆ

ಪ್ರಾಜ್ಞರಾದವರು ಈ ನನ್ನ ಅಭಿಪ್ರಾಯದಲ್ಲಿರುವ ಗುಣದೋಷಗಳನ್ನು ತೋರಿಸಿಕೊಟ್ಟು, ವಾಚಕೆಮಂಡಲಿಯವರ ತಪ್ಪಾಭಿಪ್ರಾಯಗಳನ್ನು ಪರಿಹಾರಮಾಡಿಸಬೇಕಾಗಿ ಪ್ರಾರ್ಥಿಸುವ.

ದೇಶಾಭಿಮಾನಿ

ಪತ್ರವ್ಯವಹಾರ

(ಪತ್ರಿಕಾರರು ಕೊಡುವ ಅಭಿಪ್ರಾಯಕ್ಕೆ ಇವರು ಜವಾಬ್ದಾರರಲ್ಲ)

೧

ಪ್ರಿಯ ಪತ್ರಿಕಾಕರ್ತರೇ,

ಪ್ರಸಿದ್ಧವಾದ ತಮ್ಮ "ಸ್ವದೇಶಾಭಿಮಾನಿ"ಯ ಕಳೆದ ಸಂಚಿಕೆಯಲ್ಲಿ (16—9—10) "ದಕ್ಷಿಣ ಕನ್ನಡ ಮತ್ತು ಸನ್ನಿಪಾತ ಜ್ವರ" ಎಂಬ ಹೆಸರಿನಿಂದ ಒಂದು ಉಪನ್ಯಾಸವು ಮಾ ರಾ ಎಮ್ ಪಿ ಶಾಸ್ತ್ರಿಗಳಿಂದ ಆರಂಭಿಸಲ್ಪಟ್ಟಿದೆಯಷ್ಟೆ. ಇಂತಹ ಉಪನ್ಯಾಸಗಳು ಜನ ಸಾಮಾನ್ಯ ಜ್ಞಾನವೃದ್ಧಿಗೂ ಆರೋಗ್ಯಲಾಭಕ್ಕೂ ಕಾರಣಗಳಾಗಿರುತ್ತವೆಂಬುದು ಎಲ್ಲರೂ ಒಪ್ಪಬೇಕಾದ ವಿಷಯವೇ ಸರಿ. ಅದುದರಿಂದ ಪ್ರತಿ ವರುಷದಲ್ಲಿಯೂ ನಮ್ಮ ಈ ದಕ್ಷಿಣಕನ್ನಡ ಜಿಲ್ಲೆಯ ಜನ ಸಮುದಾಯದಲ್ಲಿ ಹೆಚ್ಚು ಹಾವಳಿಯನ್ನು ಮಾಡುತ್ತಿರುವ ಸನ್ನಿಪಾತ ಜ್ವರವನ್ನು ಕುರಿತು ಶಾಸ್ತ್ರೀಯ ವಿಚಾರಗಳನ್ನು ಜನಸಾಮಾನ್ಯಕ್ಕೆ ತಿಳಿಸಿ ಆ ರೋಗ ಬಾಧೆಯು ಜನಂಗೆ ತಟ್ಟದಂತೆ ಮಾಡಬೇಕೆಂಬ ಉದ್ದೇಶದಿಂದ ಮಾ ರಾ ಶಾಸ್ತ್ರಿಗಳು ಮಾಡುವ ಪ್ರಯತ್ನವು ಶ್ಲಾಘನೀಯವಾಗಿದೆ. ಆದರೆ ಅವರು ತಮ್ಮ ಉಪನ್ಯಾಸದಲ್ಲಿ ಬೇಕಿರುವ ಕೆಲವು ಯುಕ್ತಿಗಳು (arguments) ಯೋಗ್ಯವಾಗಿ ತೋರಲಿಲ್ಲವಾದುದರಿಂದ ಅವುಗಳ ವಿಷಯದಲ್ಲಿ ಸ್ವಲ್ಪ ವಿಮರ್ಷೆಯನ್ನು ಮಾಡಲಿಕ್ಕೆ ತನ್ನ ಅಮೂಲ್ಯವಾದ ಪತ್ರಿಕೆಯಲ್ಲಿ ಕೊಂಚ ಎಡೆಯನ್ನು ಕೊಡುವಿರಿ ಎಂದು ನಂಬುವೆನು.

ಸನ್ನಿಪಾತ ಜ್ವರದ ವಿಷಯದಲ್ಲಿ ಮಾ ರಾ ಶಾಸ್ತ್ರಿಗಳು ಆರಂಭದಲ್ಲಿ ಹೇಳುವುದೇನೆಂದರೆ:—"ಸನ್ನಿಪಾತ ಜ್ವರವು ಸಾಂಕ್ರಾಮಿಕ ರೋಗವೆಂದು ಪೌರಸ್ತ್ಯರು ಮತ್ತು ಪಾಶ್ಚಾತ್ಯರು ನಿರ್ವಿವಾದ ಸಿದ್ಧಾಂತ ಮಾಡಿದ್ದಾರೆ. ಇನ್ನೂ ಪಾಶ್ಚಾತ್ಯ ವೈದ್ಯರು ಇದು ಒಂದು ವಿಧ ಕ್ರಿಮಿಯಿಂದ ಉಂಟಾಗುವ ಜ್ವರ ಎಂದು ನಿಶ್ಚಯವನ್ನು ಸ್ವೀಕಾರ ಮಾಡಿದ್ದಾರೆ. ಹೀಗಿರುತ್ತಾ ಈ ಸನ್ನಿಪಾತ ಜ್ವರವು ಸ್ವತಃ ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿಯೇ ಉದ್ಭವಿಸಿತು ಎಂದು ಹೇಳುವದು ಅನುಚಿತವಾಗಿದೆ. ಇದು ಅಂಟು ರೋಗವಾದ್ದರಿಂದ ಯಾವುದೋ ಬೇರೆ ದೇಶದಿಂದ ಒಂದಿರಬೇಕು." ಇಲ್ಲಿ ಸಾಂಕ್ರಾಮಿಕತ್ವ, ಕ್ರಿಮಿಜನ್ಯತ್ವವೆಂಬ ಗುಣಗಳಿಂದ ಸನ್ನಿಪಾತ ಜ್ವರವು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಉದ್ಭವಿಸಲಾರದೆಂದೂ, ಅಂಟುವಿಕೆಯೆಂಬ ಗುಣದಿಂದ ಅದು ಬೇರೆ ದೇಶದಿಂದ ಬಂದಿರಬೇಕೆಂದೂ ಹೇಳುವ ಯುಕ್ತಿಯನ್ನು ಸುಜ್ಞರಾದವರು ಒಪ್ಪಲಾರರು. ಇಂತಹ ರೋಗಗಳು ಹುಟ್ಟಿದ ಭೂಲೋಕದಲ್ಲಿಯೇ ಹುಟ್ಟಿದವುಗಳಲ್ಲದೆ ಅನ್ಯ ಲೋಕಗಳಿಂದ ಬಂದು ಮಾದು ಯಾರೂ ಹೇಳಲಾರರು. ಭೂಲೋಕದಲ್ಲಿಯೂ ಕೂಡಾ ಒಂದು ಧಾಗ ಕಲ್ಲಿಯೇ ಹುಟ್ಟಬೇಕು, ಬೇರೆ ಧಾಗಗಳಲ್ಲಿ ಹುಟ್ಟಬಾರದು ಎಂಬ ನಿಯಮವೇನೂ ತೋರುವುದಿಲ್ಲ. ಆಯಾ ರೋಗಗಳನ್ನು ಉತ್ಪಾದಿಸುವ ಸೂಕ್ಷ್ಮಾಣುಗಳಿಗೆ ಸಮರ್ಥಗಳಾದ ಕಾಲದೇಶ ಸ್ಥಿತಿಗಳೂ ದೇಹ ಸ್ಥಿತಿಗಳೂ ಎಲ್ಲಿ ಇರುತ್ತವೋ ಅಲ್ಲಿ ತತ್ತದ್ರೋಗಗಳು ಜನಿಸಿ ಬೆಳೆದು ತಮ್ಮ ಪ್ರತಾಪವನ್ನು ತೋರಿಸುವುವು. ಅದುದರಿಂದ ಸನ್ನಿಪಾತ ಜ್ವರವನ್ನು ಹುಟ್ಟಿಸಿ ಬೆಳೆಯಿಸಲಿಕ್ಕೆ ಸಮರ್ಥಗಳಾದ ಸ್ಥಿತಿಗತಿಗಳು ನಮ್ಮ ಈ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವುದಿಲ್ಲವೆಂದು ಖಂಡಿತವಾಗಿ ನಿರ್ಣಯಿಸಿದ ವಿನಾ ಈ ರೋಗವು ಅನ್ಯದೇಶದಿಂದ ಬಂದುದು ಎಂದು ಹೇಳುವುದು ಯುಕ್ತಿಯುಕ್ತವೆಂಬ ಯಾರೂ ಒಪ್ಪಲಾರರು. ನಮ್ಮ ಆಹಾರ ವಿಹಾರಗಳಲ್ಲಿ ನಾವು ಸರಿಯಾದ ಆಚರಣೆ ಇಲ್ಲದವರಾಗಿರುವುದೇ ಸರ್ವ ಜ್ವರಗಳಿಗೆ ಕಾರಣವೆಂದು ನಮ್ಮ ಆಯುರ್ವೇದ ಗ್ರಂಥಗಳು ಹೇಳಿದ್ದವೆಂಬುದನ್ನು ಕೇಳಿದ್ದೇನೆ. ಈ ಕಾರಣವು ಹೆಚ್ಚು ಪ್ರಬಲವಾಗಲಿಕ್ಕೆ ಬಿಟ್ಟಲ್ಲಿ ತ್ರಿದೋಷಗಳನ್ನು ಪ್ರಕೋಪಿಸಿ ಸನ್ನಿಪಾತ ಜ್ವರವನ್ನುಂಟುಮಾಡಬಹುದು. ಹೀಗಾಗದಂತೆ ನಮ್ಮ ಜಿಲ್ಲೆಯ ಜನರು ತಮ್ಮ ಆಹಾರ ವಿಹಾರಗಳ ಕುರಿತು ಹೆಚ್ಚು ಜಾಗರೂಕರಾಗಿದ್ದ ಹಾಗೆ ಕಾಣುವುದಿಲ್ಲ. ಅದುದರಿಂದ ಈ ರೋಗವು ಬೇರೆ ದೇಶದಿಂದಲೇ ಒಂದಿರಬೇಕೆಂದು ಖಂಡಿತವಾಗಿ ಹೇಳುವುದು ಯೋಗ್ಯವೆಂದು ತೋರುವುದಿಲ್ಲ.

ಇದಲ್ಲದೆ ಈ ಸನ್ನಿಪಾತ ಜ್ವರವು ಕೇರಳ ದೇಶದಿಂದಲೇ ಇಲ್ಲಿ ಬಂದಿರುವುದೆಂದು ನಿರ್ಣಯಿಸುವ ಮಾ ರಾ ಶಾಸ್ತ್ರಿಗಳ ಯುಕ್ತಿಯೂ ಇನ್ನೂ ವಿಲಕ್ಷಣವಾಗಿರುವುದು

ಈ ವಿಷಯದಲ್ಲಿ ಅವರು ಹೇಳಿರುವುದೇನೆಂದರೆ —

"ನಮ್ಮ ಜಿಲ್ಲೆಯಲ್ಲಿ ಬೇರೆ (ಚಿಕಿತ್ಸೆಯ) ಕ್ರಮಗಳನ್ನು ಬಿಟ್ಟು ಹೆಚ್ಚಾಗಿ ಕೇರಳ ಚಿಕಿತ್ಸೆಯನ್ನು ಅವಲಂಬಿಸಿ ಮಾಡಿರುವದಕ್ಕೆ ಕಾರಣವೇ ಕೇರಳ ದೇಶದಿಂದ ಈ ರೋಗ ನಮ್ಮ ಜಿಲ್ಲೆಗೆ ಬಂದಿದ್ದಾಗಿರಬೇಕು. ಅನ್ಯಥಾ ಯಾತಕ್ಕೆ ತಾನೆ ಬೇರೆ ವಿಧ ಚಿಕಿತ್ಸೆಗಳಿಗೆ ಇಲ್ಲಿ ಅವಕಾಶವು ಕಡಿಮೆಯಾಗಿರುವದಾಗಿದೆ."

ಇದರ ಮುಖ್ಯ ತಾತ್ಪರ್ಯವೇನೆಂದರೆ — ಯಾವ ಚಿಕಿತ್ಸೆಯು ಒಂದು ದೇಶದಲ್ಲಿ ಪ್ರಬಲವಾಗಿರುತ್ತದೋ ಆ ಚಿಕಿತ್ಸೆಯು ಬೇರೆಯಿಂದ ರೋಗಗಳು ಒಂದಿರಬೇಕು. ಮಾ ರಾ ಶಾಸ್ತ್ರಿಗಳ ಈ ಯುಕ್ತಿಗೆ ಅನುಸಾರವಾಗಿ ವಿಚಾರಿಸಿದರೆ ಈ ಜಿಲ್ಲೆಯ ಕೆಲವು ರೋಗಗಳು ಇಂಗ್ಲಂಡಿನಿಂದ ಒಂದವುಗಳೆಂದೂ ಕೆಲವು ಜರ್ಮನಿಯಿಂದ ಒಂದವುಗಳೆಂದೂ ಕೆಲವು ಅಮೇರಿಕದಿಂದ ಒಂದವುಗಳೆಂದೂ ಹೇಳಬೇಕಾಗುವುದು. ಎಲ್ಲೋಪೇತಿ, ಹೊಮಿಯೋಪೇತಿ, ಹಾಯ್ಡ್ರೋಪೇತಿ ಮೊದಲಾದ ಚಿಕಿತ್ಸಾ ಕ್ರಮಗಳು ಈ ಜಿಲ್ಲೆಯಲ್ಲಿ ಇತ್ತಲಾಗೆ ಹೆಚ್ಚು ಪ್ರಚಾರಕ್ಕೆ ಒಂದಿರುವುದರಿಂದ ಆಯಾ ಕ್ರಮಗಳಿಗನುಸಾರವಾಗಿ ಚಿಕಿತ್ಸಿಸಲ್ಪಡುವ ರೋಗಗಳು ಆ ಬೇರೆಬೇರೆ ದೇಶಗಳಿಂದ ಒಂದವುಗಳೆಂದು ಹೇಳಿದರೆ ಎಂತಹ ಅನ್ಯಾಯವಾಗುವದು

(ಉಳಿದ ವಿಚಾರಗಳನ್ನು ಮುಂದಿನ ಸಂಚಿಕೆಗೆ ಕಳುಹಿಸಲ್ಪಡುವುವು)

ಹಿತೈಷ್ಣು.

ಒಸವನಗುಡಿಯಿಂದ ಉರುವದ ಗೇಟಿನ ವರೆಗೆ (ಅಂದೆ ಶುಮಾರು 1½ ಮೈಲು) ದೂರದ ವರೆಗೆ ಅನ್ಯ ಮಾರ್ಗವಿಲ್ಲದೆ ಇರುವದರಿಂದ ಕೆನರಾ ಹೈಸ್ಕೂಲಿಗೆ ಹೋಗುವ ಶಾಲೆ ಹುಡುಗರಿಗೆ ಆಗಲಿ, ಜೀಪಿಗುಡ್ಡೆ ಅಥವಾ ಹಂಪನಕಟ್ಟೆಗೆ ಹೋಗುವ ಜನರಿಗೆ ಆಗಲಿ, ಒಳಿತ ಅಡಚಣೆ ಆಗುತ್ತದೆ. ಉರುವದಿಂದ ಒಸವನಗುಡಿ ರಸ್ತೆ ವರೆಗೆ ಒಂದೇ ಮಾರ್ಗದಿಂದ ಬರುವದು ಬಹಳ ದೂರವಾದದರಿಂದ ಮಹಾರಾಜೇಶ್ರಿ ಭೋಜರಾಯರ ಮನೆಯ ಹತ್ತರವಿರುವ ಮಾರ್ಗಕ್ಕೆ ಕಂಬಳದ ಸುಬ್ರಾಯರ ಗದ್ದೆಯಿಂದ ಇಳಿಮು, ಒಂದು ಸಣ್ಣ ತೋಡನ್ನು ಅನೇಕ ಜನರು ದಾಟಿ ಬರುತ್ತಾರೆ ಇದರಿಂದ ಮಳೆ ಸಮಯಕ್ಕೆ ಒಳಿತ ತೊಂದರೆ ಆಗುತ್ತದೆಂತ ಹೇಳುವದು ಪ್ರಕೃತ ಅವಶ್ಯವಿಲ್ಲ. ಮುನ್ಸಿಪಲ್ ಚೆಯರ್ಮೆನರವರೂ, ಮತ್ತು ವೈಸ್ ಚೆಯರ್ಮೆನರವರೂ, ಕೌನ್ಸಿಲರರೂ ಕೂಡಾ ಈ ವಿಷಯಕ್ಕೆ ತಕ್ಕ ಗಮನಕೊಟ್ಟು ಈ ಮಾರ್ಗ, ಅಂದರೆ ಮಾ ರಾ ಭೋಜರಾಯರ ಮನೆಯ ಹತ್ತರ ಇರುವ ಮಾರ್ಗದಿಂದ ಕಂಬಳ ಸುಬ್ರಾಯರ ಗದ್ದೆಯಿಂದ ಇಳಿದು ಜೋಡು ಅಲಾಪಿ ಹತ್ತರವಿರುವ ಮಾರ್ಗಕ್ಕೆ ಸೇರಿಸಬೇಕೆಂಬದನ್ನು ಕುರಿತು ಮುನಿಸಿಪಲ್ ಕೌನ್ಸಿಲರವರು ನಿರ್ಧರಿಸಿರುವರೆಂತ ವರ್ತಮಾನ ಕೇಳಿ ತುಂಬಾ ಸಂತೋಷಪಡುತ್ತೇನೆ. ಈ ಮಾರ್ಗದಿಂದ ಬೊಕ್ಕಪಟ್ಣ, ಬೋಳೂರಿನಲ್ಲಿರುವವರಿಗೆ ಸಹ ಬಹಳ ಪ್ರಯೋಜನ ವಿರುವದು. ಮುನ್ಸಿಪಾಲಿಟಿಯವರು ಜನರ ಪ್ರಯೋಜನಕ್ಕಾಗಿ ಈಗ ಶಹರಿನಲ್ಲಿ ಅನೇಕ ಹೊಸ ಮಾರ್ಗಗಳ ಕೆಲಸವನ್ನು ಶುರುಮಾಡಿದ್ದಾರೆ. ಆದರಿಂದ ಈ ರಸ್ತೆಯ ಕೆಲಸವನ್ನು ಸಹ ಬೇಗನೇ ಶುರುಮಾಡಿಸಿದ್ದಾದರೆ ಜನರಿಗೆ ಬಹಳ ಉಪಕಾರವಾದೀತು.

ಈ ಮಾರ್ಗದಲ್ಲಿ ದಿನಕ್ಕೆ ಶುಮಾರು ೨೦೦೦ ಜನರ ಆಮದುರಫ್ತು ಆಗುತ್ತದೆ. ಈ ಮಾರ್ಗದ ಬುಡವು ಮಾ ರಾ ಭೋಜರಾಯರ ಮನೆಯ ಹತ್ತರವಿರುವುದರಿಂದ ಇದನ್ನು ಮುಂದರಿಸುವುದು ಶುಲಭ.

C. D.

ವಿದೇಶ ವೃತ್ತಾಂತ.

ಧೂಲೋಕದ ಅತೀ ವೃದ್ಧ ಸ್ತ್ರೀ:—

ಪೋನನ ಎಂಬಲ್ಲಿ "ಫರೋಡ ಜಕ್ಟ್ರೀಜ" ಎಂಬ ಹೆಸರುಳ್ಳ ಒಬ್ಬ ಸ್ತ್ರೀಯು ಇಲ್ಲಿಂದೀಚೆ ಇಸವಿ ಫೆಬ್ರವರಿ ತಾ ೧೫ಕ್ಕೆ ಜನಿಸಿ ಈಗಲೂ ಜೀವಿಸಿ ಇರುವಳು. ಅವಳು ತಾನು ಬಹಳ ವೃದ್ಧಳೆಂಬದನ್ನು ತಿಳಿದು ಗರ್ವಿಸುತ್ತಾ ಇರುವಾಗ ಅವಳಿಗೆ ಎದುರುವಾದಿಯಾಗಿ ತಾನಿರುವೆನೆಂಬ ಮತ್ತೊಬ್ಬ ಸ್ತ್ರೀಯ ವೃತ್ತಾಂತವು ಪ್ರಕಟಿಸಲ್ಪಟ್ಟಿರುವುದು ಇವಳು ೧೭೬೪ನೇ ಇಸವಿ ಮೇ ತಿಂಗಳಲ್ಲಿ ಜನಿಸಿದ ಬಾಬಾ ವಸೀಲಕಾ ಎಂಬವಳು ಬಲಗೇರಿಯದ ಬಾಲಸೊಫಿಯ ಎಂಬ ಹಳ್ಳಿಯಲ್ಲಿ ವಾಸಮಾಡಿಕೊಂಡಿರುವಳು ಮಿಸ್ಸಿಸ್ ಬಾಬಾ, ಇವಳು ತನ್ನ ೧೦೦ ವರುಷದ ಪ್ರಾಯದಲ್ಲಿ ಬೇಸಾಯದ ಕೆಲಸ ಮಾಡುತ್ತಿದ್ದಳು ಈಗಿಂದೀಚೆ ೨ ವರುಷ ಪ್ರಾಯದ ಅತೀ ವೃದ್ಧ ಸ್ತ್ರೀಯನ್ನು ನೋಡುವರೆ ದೂರ ದೇಶದ ಅನೇಕರು ಹೋಗುತ್ತಲಿದ್ದಾರೆ *G S P*

ಜರ್ಮನ್ ಯುವರಾಜರವರು ಸೌರ್ವಾತ್ಯ ದೇಶ ಸಂದರ್ಶನಾರ್ಥವಾಗಿ ಬರುವ ನವೆಂಬರ ತಿಂಗಳ ಆದಿ ಭಾಗದಲ್ಲಿ ಜಿನೊವಾ ಎಂಬಲ್ಲಿ ಸ್ಟೀಮರು ಹತ್ತುವರು

ಅಲೆಕ್ಸಂಡ್ರಾ ಮಹಾರಾಣಿಯವರು ಡೆನ್ಮಾರ್ಕ ದೇಶಕ್ಕೆ ತೆರಳಿರುವರು

ದಕ್ಷಿಣ ಆಫ್ರಿಕದ ಬ್ರಿಟಿಷ್ ಸ್ವಾಸ್ಥ್ಯಗಳ ಆಡಳಿತೆ ಬಗ್ಗೆ ಯುನಿಯನ್ ಪಾರ್ಲಮೆಂಟಿನ ಮೆಂಬರರ ಚರ್ಚಾಸಭೆಯು ದಕ್ಷಿಣ ಆಫ್ರಿಕದಲ್ಲಿ ನಡಿಯುತ್ತಿರುವುದು ಜನಾಂಗ ವೈಷಮ್ಯವನ್ನು ವಿರೋಧಿಸುವ ಪಕ್ಷದನರಲ್ಲಿ ಕೆಲವರು ಚುನಾಯಿಸಲ್ಪಟ್ಟಿರುವರು

ಇಟೋ ಜೋಕರ್ಡ್ ಎಂಬ ಪಟ್ಟಣವಾದ ಅಮೇರಿಕದ ಜಿಕಾಗೋ ಪಟ್ಟಣದ ಜನಸಂಖ್ಯಾ ಪ್ರಕಾರ ಅದು ೨೧ನೇ ಸ್ಥಾನಿಕವಾಗಿರುವುದೆಂಬ ತಿಳಿಯುತ್ತೇವೆ

ಚೀನ ಸರಕಾರದವರ ಅಫೀಮು ಸುಡ್ಡನ್ನು ತಯ್ಯಾರಿಸುವ ಕೆಲಸವನ್ನು ಅಮೇರಿಕದ ಮಿ ಸ್ಕೋಟ್ ಎಂಬವರು ಕೈಕೊಂಡಿರುವಂತೆ

ಐಗುಪ್ತ ದೇಶದವರ ರಾಷ್ಟ್ರೀಯ ಸಭೆಯು ಕೈರೋ ನಗರದಲ್ಲಿ ನೆರೆಯಜಾರದೆಂದಾಗಿ ಪ್ರಾಂತ ಸರಕಾರವರು ತಿಳಿಸಿರುವರು

ಗತಿಸಿದ ಎಡ್ವರ್ಡ್ ಚಕ್ರವರ್ತಿಗಳವರ ಸ್ಮರಣಾರ್ಥವಾಗಿ ವೇಲ್ಸಿನಲ್ಲಿ ಕ್ಷಯರೋಗ ಚಿಕಿತ್ಸಾಲಯವೊಂದನ್ನು ಸ್ಥಾಪಿಸುವರೆ ನಿರ್ಣಯಿಸಿರುವರು. ಈ ಬಗ್ಗೆ ೫೦,೦೦೦ ಪವನುಗಳ ಖರ್ಚು ತಗಲೀತೆಂಬದಾಗಿ ಅಂದಾಜುಮಾಡಿರುತ್ತದೆ. ಅರ್ಧಾಂಶ ದ್ರವ್ಯಸಹಾಯವು ವಾಗ್ದತ್ತಮಾಡಲ್ಪಟ್ಟಿರುವುದು.

ಭಾರತೀಯ ಪೈಲ್‌ವಾನ್ ಗಾಮನೊಂದಿಗೆ ಬಾಹು ಯುದ್ಧವನ್ನು ಮುಂದರಿಸಲು ಬಿಬಸ್ಕೊ ಪೈಲ್‌ವಾನನು ನಿರಾಕರಿಸಿದ್ದರಿಂದ ಗಾಮನೇ ಕಳೆದ ನರ್ತಿಯ ಹೋರಾಟದಲ್ಲಿ ಗೆದ್ದವನೆಂಬದಾಗಿ ನಿರ್ಣಯಿಸಿರುವರು.

ಪಂಡಿತ ಡಬ್ಲ್ಯೂ. ಜಿ. ಸಿಮ್ಸನ್‌ರವರು ಎಡ್ವರ್ಡ್ ಚಕ್ರವರ್ತಿಗಳವರ ಸ್ಮರಣಾರ್ಥವಾಗಿ ಲಂಡನಿನಲ್ಲಿ ಈ ಕೆಳಗಿನ ಏರ್ಪಾಡನ್ನು ಮಾಡಬಹುದೆಂಬದಾಗಿ ಸೂಚಿಸಿ ಬರುವರು. ಉಷ್ಣವಲಯದಲ್ಲಿ ಬ್ರಿಟಿಷ್ ಸ್ವಾಸ್ಥ್ಯಗಳು ಅನೇಕವಿರುವುದರಿಂದ ಇವುಗಳಲ್ಲಿ ಜನಪದವು ಹೆಚ್ಚಲು ಪ್ರಯತ್ನಿಸುವಂತೆ ಉಷ್ಣವಲಯದ ಆರೋಗ್ಯ ಮತ್ತು ವಿಷದ ಶೋಧನಾಲಯವನ್ನು ಏರ್ಪಡಿಸಬೇಕೆನ್ನುವರು

ಕೂಲಿಯಾಳುಗಳ ಹಸಿವಿನ ಯಾತನೆಯನ್ನು ಸಾಧ್ಯವಿದ್ದಷ್ಟು ಮಟ್ಟಿಗೆ ನಿವಾರಿಸಿ ಸುಲಭವಾದ ರೀತಿಯಲ್ಲಿ ಇವರಿಗೆ ಅನ್ನವು ದೊರಕುವಂತೆ ಮೆ| ಲೊಯಿಡ್ ಜೋರ್ಜ್ ರವರು ಒಂದು ವಿಮೋ ಏರ್ಪಾಡನ್ನು ಬರುವ ವರುಷದಲ್ಲಿ ಸೂಚಿಸುವರಂತೆ. ಪ್ರಕೃತ ಜರ್ಮನಿಯಲ್ಲಿ ಈ ಏರ್ಪಾಡು ಇರುವುದು

ಬಂಗಾಳದಿಂದ ಫ್ರಾನ್ಸ್, ಜರ್ಮನಿ, ಅಮೇರಿಕಾ ದೇಶಗಳಿಗೆ ರಫ್ತಾಗಿ ಹೋಗುವ ಸೊಣಬು ನಾರಿನ ಮೇಲೆ ಸುಂಕವನ್ನು ವಿಧಿಸಿದರೆ ಇಂಡಿಯಾ ಸರಕಾರದವರಿಗೆ ಉತ್ಪತ್ತಿಯ ಮೂಲ ಒಂದು ದೊರಕುವುದೆಂತ ಸೂಚಿಸಿ ಒಂದು ಪತ್ರವನ್ನು ಟೈಮ್ಸ್ ಪತ್ರಿಕೆಗೆ ಸರ್ ಆರ್. ಲೆತರ್‌ಬ್ರಿಜ್ ಎಂಬವರು ಬರೆದಿರುವರು

ಉತ್ತರ ಹಿಂದುಸ್ಥಾನ

ಮಧ್ಯ ಆಸ್ಯಾಖಂಡದಿಂದ ಪತ್ತೆಗತನಾದ ಪ್ರಾಚೀನ ಲೇಖಗಳು —ಬಂಗಾಳದ ಪೊಲೀಸ್ ಎಸಿಯಾಟಿಕ್ ಸೊಸೈಟಿಯಲ್ಲಿ ಇತ್ತಲಾಗೆ ಆಶ್ಚರ್ಯಂದ ನುದ್ಘಾಗರಿಂದ ಶಿಕ್ಷಿದ ಕೆಲವು ಪತ್ತೆಪಟಿತ ಲೇಖಗಳು ವಿಷಯದಲ್ಲಿ "ಸ್ಟೇಟ್ಸ್‌ಮೆನ್" ಪತ್ರಿಕಾಕರ್ತರು ಈ ರೀತಿ ಬರೆದಿರುವರು ಈ ಐದು ಲೇಖಗಳ ತವುಗು ಮಿತ್ರಿತ ಹಳದಿ ವರ್ಣದ ಕಾಗದಗಳ ಮೇಲೆ ಬರೆಯಲ್ಪಟ್ಟಿರುವವು ಕಾಗದಗಳ ಅಳತೆಯು ೪ × ೫ ಇಂಚು ಉದ್ದ ಆಗಲ ವಾಗಿರುತ್ತದೆ ಒಂದೆ ತಾಯಿಯವು ಅಕ್ಷರಗಳನ್ನೂ ನೋಡಿದರೆ ಸಿನ್ನೆಯೇ ಎರೆದದ್ದು ಎಂಬದನ್ನು ದೃಷ್ಟಪಡಿಸುವಂತೆ ಏಂಜಿನವು ಪ್ರವನುದ ಪುರ ಶಿವಾ ಬಾಕಿ ಎಲ್ಲಾ ಕಾಗದಗಳು ಒಳ್ಳೆ ಸ್ಥಿತಿಯಲ್ಲಿರುತ್ತವೆ ಕಾಗದಗಳಲ್ಲಿ ಮತ್ತು ಪ್ರತಿ ಕಾಗದಗಳ ಹಿಂದಕಡೆಯಲ್ಲಿ ಸಂಖ್ಯಾಕ್ಷರಗಳು ಇರುತ್ತವೆ ಇಂಥಾ ಸಂಖ್ಯೆಗಳು ಯಾವುದೋ ಒಂದು ದೊಡ್ಡ ಗ್ರಂಥದ ಪುರಗಳು ಎಂಬಂತೆ ಕಾಣಿಸುತ್ತವೆ ಇದರ ಲಿಪಿಯು ಟಿಬೇಟಿನ ಶತಮಾನದ ಸುಮಾರು ಎಂಬ ಹೇಳಿನದ್ದಾಗಿರಬೇಕಾಗಿ ತಿಳಿಯುತ್ತಾರೆ ಭಾಷೆಯು ಸಂಸ್ಕೃತದಿಂದ ಉದ್ಭವವಾಗಿರಲ್ಪಟ್ಟಾಗಿ ಕಾಣುವದು ಅದರೆ ಟೀಬೇತ್ ಭಾಷೆಗೆ ಸಂಬಂಧಪಟ್ಟಿರುವುದು ಆದ್ದರಿಂದ ಬಹುಶ್ರಮ ಬೇಕಾದ ವಿಷಯವೇ ಆಗಿರಬೇಕಾಗಿ ಊಹಿಸುತ್ತಾರೆ "ಜ" ಸ್ವರವು ಅಲ್ಲಿ ಬರದಿರುವದರಿಂದಲೇ ಇದು ಸಂಸ್ಕೃತ ಭಾಷೆಯಲ್ಲವೆಂಬದು ತಿಳಿಯುತ್ತದೆ *G S P.*

ಈ ತಿಂಗಳ ತಾ ೧೫ಕ್ಕೆ ಸಿಮ್ಲ ಲೈಬ್ರೆರಿ ಕಂಪೆನಿಗಳ ವಾರ್ಷಿಕ ಸಭೆ ಜರಗಿತು ಬಹುಮಾನಪಟ್ಟ ಮೇ ಎಚ್. ಬರ್ಟರವರು ಅಧ್ಯಕ್ಷರಾಗಿದ್ದರು

ಕುಬಪರೇಟೀವ್ ಕ್ರೆಡಿಟ್ ಸೊಸೈಟಿ ವ ಪರಸ್ಪರ ಸಹಾಯಕ ಸಂಘಗಳ ರಿಜಿಸ್ಟ್ರಾರರೆಲ್ಲರವರ ಒಂದು ಸಭೆಯು ಬರುವ ಜನವರಿ ತಿಂಗಳ ತಾ. ೭ರಿಂದ ೧೦ರ ವರೆಗೆ ಆಲ್ಲಾ ಹಾಬಾದಿನಲ್ಲಿ ನೆರೆಯಬೇಕಾಗಿ ನಿರ್ಣಯಿಸಲ್ಪಟ್ಟಿರುತ್ತದೆ.

ತನ್ನ ಗೆಳೆಯನೊಬ್ಬನನ್ನು ನೀರಿನಲ್ಲಿ ಮುಳುಗುವ ಅಪಾಯದಿಂದ ಬಹಳ ಬೇಗ ಪಾರುಮಾಡಿದ ೪ ವರುಷದ ಹುಡುಗನೊಬ್ಬನಿಗೆ ಬ್ಯಾರಿಸ್ಟರ್ ನಾಥ ಅಶ್ವನಿ ಕುಮಾರದತ್ತರವರು ಒಂದು ಚಿನ್ನದ ಪದಕವನ್ನು ಇನಾಮಾಗಿ ಕೊಟ್ಟರು.

ಬರುವ ಹಿಂದೂ ಕನ್ವರೆನ್ಸಿಗೆ ಅಧ್ಯಕ್ಷರನ್ನಾಗಿ ಬಾಬು ಗುರುಬಕ್ಷಸಿಂಗ ಬೇಡಿ ಎಂಬವರನ್ನು ಚುನಾಯಿಸಿರುವರು

ತಾಂಬೂಲ ಚರ್ವಣದಿಂದ ಉಂಟಾದ ಮರಣಗಳ ಕಾರಣಗಳನ್ನು ಶೋಧಿಸುವರೆ ಬಂಗಾಳ ಗವರ್ನಮೆಂಟಿನವರು ವೈದ್ಯರ ಒಂದು ಕಮಿಟಿಯನ್ನು ಏರ್ಪಡಿಸಿದ್ದರು; ಈ ಕಮಿಟಿಯವರ ಅಭಿಪ್ರಾಯವು ಪ್ರಕಟಿಸಲ್ಪಟ್ಟಿರುವುದು ತಾಂಬೂಲ ಚರ್ವಣದಿಂದ ಮರಣಗಳು ಉಂಟಾಗಲಿಕ್ಕಿಲ್ಲವೆಂಬದಾಗಿ ಇವರ ಅಭಿಪ್ರಾಯದ ಸಾರಾಂಶವಾಗಿರುವುದು ಅಡಿಕೆಯು ಪೂರ್ಣ ಬೇಯುವ ಮೊದಲು ಇದನ್ನು ವೀಳ್ಯದೆಲೆ ಸಮೇತ ಉಪಯೋಗಿಸಿದರೆ ಅಲ್ಪ ಸ್ವಲ್ಪ ಅಮಲುಂಟಾಗುವುದು ಆದರೆ ಇಂಥಾ ಅಡಿಕೆಗಳನ್ನು ಬೇಯಿಸಿದರೆ ಈ ದೋಷವು ಅದರಿಂದ ಹೋಗುವುದು.

ಈ ತಿಂಗಳ ತಾ. ೧೬ರಲ್ಲಿ ಕಲ್ಕತ್ತೆಯಲ್ಲಿ ಬಂಗಾಳ ಡಿಸ್ಟ್ರಿಕ್ಟ್ ಕನ್ವರೆನ್ಸ್ ಸಭೆಯು ಜರಗಿತು. ಈ ಮೊದಲು ಸೂಚಿಸಿದಂತೆ ಬಾಬು ಆಂಬಿಕಾಚರಣ ಮುಜುಮದಾರರವರು ಸಭೆಯ ಅಧ್ಯಕ್ಷರಾಗಿದ್ದರು ಅಧ್ಯಕ್ಷರವರು ತಮ್ಮ ಭಾಷಣದಲ್ಲಿ ಅನಾಯಕತ್ವವನ್ನು ಕುರಿತು ಜರಿದು ಮಾತಾಡಿ ಸರಕಾರದವರ ಕರಣ ಶಾಸನಗಳೆ ಅಯುಕ್ತತೆಯನ್ನು ಸೂಚಿಸಿ ಮಿಂಟೊ ಪ್ರಭುಗಳಿಂದ ಹಿಂದುಸ್ಥಾನದಲ್ಲಿ ಏರ್ಪಡಿಸಲ್ಪಟ್ಟ ಕೌನ್ಸಿಲುಮಾರ್ಪಾಟು ನಿರ್ಪಾಡುಗಳನ್ನು ಕೊಂಡಾಡಿ, ಅವುಗಳಲ್ಲಿ ಕೆಲವು ತಿದ್ದುಪಡಿಗಳು ಅವಶ್ಯಕವೆಂತ ಸೂಚಿಸಿದರು ವಿದೇಶಿ ವಸ್ತುಬಹಿಷ್ಕಾರ ಕಳಕಳದ ಯುಕ್ತಾಯುಕ್ತತೆಯು ಹ್ಯಾಗಿದ್ದರೂ ಸಾಧ್ಯವಾಗುವ ಮಟ್ಟಿಗೆ ದೇಶೀಯ ವಸ್ತುಗಳನ್ನೇ ಉಪಯೋಗಿಸಲು ಬದ್ಧರಾಗಿರುವೆವೆಂತಲೂ, ವಂಗಭಂಗವು ನಿಶ್ಚಲವಾಗಿರುವುದೆಂಬದನ್ನು ತಾವು ಒಪ್ಪಲಾರೆವೆಂದೂ ಅಧ್ಯಕ್ಷರವರು ಅಪ್ಪಣೆಕೊಟ್ಟರು ಸಭೆಯಲ್ಲಿ ಹಲವು ನಿರ್ಣಯಗಳು ಮಂಜೂರು ಮಾಡಲ್ಪಟ್ಟವು. ಸಭಾಂತ್ಯದಲ್ಲಿ ಬಾಬು ಸುರೇಂದ್ರನಾಥ ಬೆನರ್ಜಿಯವರು ತಮ್ಮ ಗಂಭೀರವಾದ ಭಾಷಣದಲ್ಲಿ ವಂಗಭಂಗವನ್ನು ವಜಾಪಡಿಸಬೇಕು ಅಥವಾ ಮಾರ್ಪಡಿಸಬೇಕೆಂಬುವ ವಾದವು ಸರಕಾರದವರಿಂದ ಯುಕ್ತವಾದ ನಿವೃತ್ತಿ ಹೊಂದುವ ತನಕ ಎಂದೂ ಕಲೆಗುಂದದಿರುವುದೆಂಬ ಕಾಯಿದೆಶೀರ ರೀತಿಗಳಲ್ಲಿಯೇ ಮೇಲೆ ತಪ್ಪದಂತೆ ನಿವೃತ್ತಿ ಹೊಂದಲು ಬೇಕಾದ ಕಳಕಳವನ್ನೆ ವ್ಯಪ್ತಿಪಡಿಸುತ್ತಿರಬೇಕೆಂತಲೂ ಸಭೆಯಲ್ಲಿ ಹೇಳಿ ಕೊಂಗ್ರೆಸ್ಸು ಸಭೆಯನ್ನು ಸರ್ವರೂ ಆದರಿಸಬೇಕೆಂಬದಾಗಿ ವಿಜ್ಞಾಪಿಸಿಕೊಂಡರು

ದಕ್ಷಿಣ ಹಿಂದುಸ್ಥಾನ.

ಮದ್ರಾಸು ಹೈಕೋರ್ಟು

(ಜಸ್ಟಿಸ್ ಅಬ್ದುಲ್ ರಹೀಮ್ ಮತ್ತು ಜಸ್ಟಿಸ್ ಕೃಷ್ಣಸ್ವಾಮಿ ಅಯ್ಯರರವರು ಮದುವೆ ಖರ್ಚನ್ನು ಕುರಿತು ಮಾಡಿದ ತೀರ್ಮಾನ.)

ಯು ತನ್ನ ಮಗನ್ ಮದಿವೆಗೋಸ್ಕರ ... ಕುಟುಂಬದ ಬಗ್ಗೆ ಮಾಡಿದ ಖರ್ಚಿಂತ ... ಮೇಲೆ ಇದ್ದು ಇದನ್ನು ತೀರ್ಪಲಿಕ್ಕೆ ಬೇರೆ ಮಗಂದಿಯರು ... ಇದ್ದಾರಾಗಿರುವರೂ ಎಂಬ ವಿಷಯವು ಈ ತಿಂಗಳ ಅಗಸ್ಟ್ ... ಮದ್ರಾಸು ಹೈಕೋರ್ಟಿನಲ್ಲಿ ತೀರ್ಮಾನ ... ಶೂದ್ರರು ಮದಿವೆಯಾಗದಿದ್ದರೆ ಜಾತಿ ಭ್ರಷ್ಟ ... ವಾಗುವುದಿಲ್ಲವಾದ್ದರಿಂದ ಅವರ ಸಂಗತಿಯಲ್ಲಿ ಮದಿವೆಯು ... ಕುಟುಂಬಕ್ಕೆ ಅವಶ್ಯಕ ಖರ್ಚಲ್ಲವೆಂದು ಈ ಮೊದಲು ಇದೇ ಹೈಕೋರ್ಟಿನವರು ತಿರ್ಮಾನಿಸಿದ್ದರು ಆದರೆ ಬೂಂಬ್ಳಾ ಹೈಕೋರ್ಟಿನವರು ಇದಕ್ಕೆ ವಿರೋಧವಾಗಿ ಅಂಥ ಖರ್ಚು ಅವಶ್ಯಕವೆಂದು ನಿಶ್ಚಯಿಸಿದ್ದರು ಈ ಪ್ರಶ್ನೆಯು ಕಾಕ ... ವಾಡದ ಸಬ್‌ಜಡ್ಜರ ಒಂದು ತೀರ್ಪಿನ ಮೇಲೆ ಆದ ಅಪೀಲಿನಲ್ಲಿ ಪುನಹಾ ಈ ಸಾರಿ ಚರ್ಚಿಸಲ್ಪಟ್ಟು ಬೊಂಬೈ ತೀರ್ಪನ್ನು ಆಧರಿಸಿ ಮದಿವೆಗೋಸ್ಕರ ಮಾಡಿದ ಸಾಲವು ಕುಟುಂಬದ ಸಾಲವೆಂದು ತೀರ್ಮಾನಿಸಲ್ಪಟ್ಟಿತು

ಎಡ್ವರ್ಡ್ ಚಕ್ರವರ್ತಿಗಳವರ ಮದ್ರಾಸು ಮೆಮೋರಿಯಲ್ ಫಂಡಿಗೆ ಈ ತಿಂಗಳ ತಾ ೫೦ ರ ತನಕ ದೊರೆತ ಚಂದಾಹಣಗಳ ಜುಮ್ಲಾ ಮೊಬಲಗು ರೂಪಾಯಿ 1,17389—1—1 ಆಗಿರುತ್ತದೆ

ರಂಗೂನಿನಲ್ಲಿ ಬರ್ಮಾ ಆಯಿಲ್ ಕಂಪೆನಿಯ ನೌಕರರಾಗಿರುವ ಮೆ। ಡಬ್ಲ್ಯು ವಿ. ಸಿ, ಸ್ಕೋಟ್ ಎಂಬವರು ಆಫೀಸಿನಿಂದ ಮನೆಗೆ ಒರುತ್ತಲೇ ಹೆಂಡತಿಯೊಂದಿಗ ಜಗಳಾಡಿ ೨೦ ವರುಷ ಪ್ರಾಯದ ತನ್ನ ಹೆಣ್ಣು ಮಗುವನ್ನು ಕಿಟಿಕಿಯಿಂದ ಹೊರಗೆ ಬಿಸಾಡಿಬಿಟ್ಟರು ಕಿಟ್ಟಿಸಿಯು ನೆಲದಿಂದ ೫೦ ಅಡಿ ಎತ್ತರವಿರುವುದರಿಂದ ಬಿದ್ದೊಡನೆ ಕಾಲು ಮುರಿದು ಹೋಗಿ ಮಗುವಿಗ ಸ್ಮೃತಿ ತಪ್ಪಿ ಹೋಯಿತು ಈ ವಿಷಯದಲ್ಲಿ ಪೋಲೀಸಿನವರು ತನಖಿ ನಡಿಸುತ್ತಿರುವರು

Dr. K. Vittal Rao

has begun practising Special Indian New treatment for all Urinary and Dental diseases, Typhoid fever, Carbuncle Diabetes, Scrofula, Paralysis, Asthma, Consumption, Leprosy, Elephantiasis legs, Dropsy, & nervous disorders Etc., Etc,

He can be consulted at his new house "Field View" near the Railway lines between 8 to 12 A M in the morning and in the evening between 4 to 6 P M at Hampankatta at Messrs K Vittal Rao & Co, chemists

N. B. A Small hospital at Jeppoo for the special treatment of leprosy and Elephantiasis is under contemplation

ಡಾಕ್ಟರ್ ಕೆ. ವಿಟ್ಠಲ ರಾವ್

ಇವರು ಉರಿ ಮೂತ್ರ ಬಹು ಮೂತ್ರ ಮುಂತಾದ ಮೂತ್ರ ಸಮ್ಮಂಧವಾದ ರೋಗಗಳಿಗೂ ಸವ್ವಿ ... ಪುರ, ಆರಸು ಹುಣ್ಣು, ಗಂಡಮಾಲೆ, ಪಕ್ಷವಾತ, ಉಬ್ಬಸ, ಕ್ಷಯ, ರೋಗ, ಕುಷ್ಠರೋಗ, ಆನೆಕಾಲು, ಜಲೋದರ ಮುಂತಾದ ಕಠಿಣ ರೋಗಗಳಿಗೂ, ಹಲ್ಲು ನೋವು, ನರ ಸಮ್ಮಂಧವಾದ ಬಲಹೀನತೆ ಮುಂತಾದವುಗಳಿಗೂ ನವೀನ ಹಿಂದೂ ಚಿಕಿತ್ಸೆಯನ್ನು ಶುರುಮಾಡಿರುವರು

ಬೆಳಿಗ್ಯೆ 8ರಿಂದ 12ರ ವರೇಗೆ ರೈಲ್ವೆ ಲೈನುಗಳ ಸಮೀಪದಲ್ಲಿರುವ "ಫೀಲ್ಡವ್ಯೂ" ಹೊಸ ಮನೆಯಲ್ಲಿಯೂ, ಮಧ್ಯಾನ್ಹ ಘಂಟೆ 4ರಿಂದ 6ರ ವರೇಗೆ ಹಂಪನಕಟ್ಟೆಯಲ್ಲಿರುವ "ಮೆಸರ್ಸ್ ಕೆ ವಿಟ್ಠಲ ರಾವ್ ಎಂಡ್ ಕೊ ಇವರ ಔಷಧಾಲಯದಲ್ಲಿಯೂ ಇವರಿಂದ ಚಿಕಿತ್ಸೆಯನ್ನು ಹೊಂದಬಹುದು

ಕುಷ್ಠ ರೋಗ, ಆನೆಕಾಲು ಮುಂತಾದ ರೋಗಿಗಳ ಚಿಕಿತ್ಸೆಯ ಬಗ್ಗೆ ಜಪ್ಪಿನಲ್ಲಿ ಒಂದು ಸಣ್ಣ ಆಸ್ಪತ್ರೆಯನ್ನು ಏರ್ಪಡಿಸಲಿಕ್ಕಿರುವರು

ದಕ್ಷಿಣ ಕನ್ನಡ

ಸ್ವೀಕಾರ ದಕ್ಷಿಣ ಕನ್ನಡ ಜಿಲ್ಲಾ ವ್ಯವಸಾಯ ಸಂಸ್ಥದವರು ಕಳ ಹಿಸಿಕೊಟ್ಟಿರುವ ೧೯೧೦ ೧೯೧೧ನೇ ಇಸವಿಯ ಸಾಧಾರಣ ಸಂವತ್ಸರದ "ವ್ಯವಸಾಯಿಕ ಪಂಚಾಂಗವನ್ನು ಕೃತಜ್ಞತಾಪೂರ್ವಕ ಸ್ವೀಕರಿಸಿರುವಿವು ಮುಂದಿನ ಸಂಚಿಕೆಗಳಲಿ ಇದನ್ನು ಪರಿಶೀಲಿಸುವೆವು

ಮಂಗಳೂರು ಕಲೆಕ್ಟರ ಆಫೀಸಿನಲ್ಲಿ ಕ್ಲಾರ್ಕರಾಗಿರುವ ಮೆ ರಘುನಾಥ ಬಂಟಾರಿಗಳವರಿಗೆ ಪುತ್ತೂರು ಡಿವಿಜನ್ ಆಫೀಸಿನ ಹೆಚ್ ಕ್ಲಾರ್ಕ ಕೆಲಸದ ಆಕ್ಟಿಂಗ್ ಪೊಕ್ಯಾರಿಯು ಆಗಿರುವುದು

ಪುತ್ತೂರು ಡಿವಿಜನಲ್ ಆಫೀಸಿನ ಹೆಚ್ ಕ್ಲಾರ್ಕರಾಗಿದ್ದ ಮೆ ಎಮ್ ನ್ಯಾಸರವರನ್ನು ರೂ ೫೦ ರ ತಲಪಿನ ಮೇಲೆ ಇಕ್ವಿಯ ಹಜೂರು ಆಫೀಸಿಗ ವರ್ಗ ವಾಗಿರುವರು

ಲೆಂಡ್ ರಿಕೊರ್ಡ ಇನ್ಸ್‌ಪೆಕ್ಟರ್ ರಾ। ವಾಂಗಾಳ ರಾಮಚಂದ್ರರಾಯರಿಗೆ ಮೂತಬಿದ್ರಿ ತಾಲೂಕು ಆಫೀಸಿನ ಹೆಡ್ ಎಕೌಂಟಾಂಟ್ ಆಕ್ಟಿಂಗ್ ಕೆಲಸಕ್ಕೆ ನೇಮಕವಾಗಿರುವುದು ಆದರೆ ರಾಮಚಂದ್ರರಾಯರು ಖಜಾನಾ ತರ ವೇತಿಯನ್ನು ಪಡಿಯದಿದ್ದರಿಂದ ಇವರು ಈ ತರಬೇತಿಯನ್ನು ಪಡಿಯುವ ತನಕ ರಾ ಡಿ ಪೆಂಕಟರಾಯರವರು ಈ ಕೆಲಸದ ಚಾರ್ಜನ್ನು ವಹಿಸಿಕೊಳ್ಳುವರು

ಮ ರಾ ರಾ ಪಿ ನಾರಾಯಣ ಮೆನನರವರು ತಿರಿಗಿ ಈ ಬೆಲ್ಲಿಗೆ ಹೆಡ್ ಕ್ವಾರ್ಟರ್ಸ್ ಡಿಪ್ಯೂಟಿ ಕಲೆಕ್ಟರರಾಗಿ ವರ್ಗಾಯಿಸಲ್ಪಟ್ಟು ಕಳದ ತಾ ೫ರಲ್ಲಿ ಈ ಕೆಲಸದ ಚಾರ್ಜನ್ನು ಮ ರಾ ರಾ ಕುಞ್ಞಿರಾಮನ್‌ರವರಿಂದ ವಹಿಸಿಕೊಂಡಿರುವರು ರಾ ಕುಞ್ಞಿರಾಮನ್‌ರವರು ಪುತ್ತೂರು ಡಿವಿಜನಲ್ ಆಫೀಸಿನ ಆಕ್ಟಿಂಗ್ ಡಿಪ್ಯುಟಿ ಕಲೆಕ್ಟರರಾಗಿ ನೇಮಿಸಲ್ಪಟ್ಟಿದ್ದಾರೆ ರಾ। ಕುಞ್ಞಿರಾಮನ್‌ರವರು ಪಡಿಯುತ್ತಿರುವ ಖಜಾನಾ ತರಬೇತಿಯ ಕಡೆ ಎರಡು ವಾರಗಳಲ್ಲಿ ರಾ। ಪಿ ನಾರಾಯಣ ಮೇನನ್‌ರು ಪುತ್ತೂರು ಡಿವಿಜನಲ್ ಆಫೀಸಿನ ಕೆಲಸವನ್ನು ಸಹ ನಿರ್ವಹಿಸುವರು.

ಮಂಗಳೂರು ಬಂದರದ ಧಕ್ಕೆಫೀಸು ಕಮ್ಮಿಟಿಯವರ ಸಭೆಯು ಕಳದ ವಾರದಲ್ಲಿ ನೆರದಿತ್ತು ಬಂಟವಾಳ ಗುರುಪುರ ಮೊದಲಾದ ಪರಸ್ಥಳಗಳಿಂದ ದೋಣಿಯ ಮೇಲೆ ಮಂಗಳೂರು ಧಕ್ಕೆಗೆ ಸರಕು ತುಂಬಿ ... ಮೇಲೆ ೮ ಆಣೆಯಂತೆ ಫೀಸನ್ನು ವಸೂಲುಮಾಡುವ ವಿಷಯವು ಸಭೆಯಲ್ಲಿ ಪರ್ಯಾಲೋಚಿಸಲ್ಪಟ್ಟಿತು. ೮ ಆಣೆಯು ದರವು ಬಹಳ ವಿಪರೀತವಾಗುವುದೆಂದೂ ೧ ಆ. ೮ ಪೈಸೆ ಯಂತೆ ಫೀಸನ್ನು ವಸೂಲುಮಾಡಿದರೆ ಸಾಕೆಂಬುದಾಗಿಯೂ ಕಮಿಟಿಯವರು ಅಭಿಪ್ರಾಯಪಟ್ಟಿರುವರೆಂತೆ.

ಮೆ। ಸಿ ನ್ಯಾಸರವರು ಮೂಡಬಿದ್ರೆ ತಾಲೂಕಿಗೆ ವರ್ಗಾಯಿಸಲ್ಪಟ್ಟದ್ದರಿಂದ ಮಂಗಳೂರು ಡಿವಿಜನಲ್ ಆಫೀಸಿನ ೪ನೇ ಕ್ಲಾರ್ಕರಾಗಿದ್ದ ರಾ। ಎಮ್ ಗಣಪತಿ ಭಂಡಾರಕಾರರನ್ನು ತಾಲೂಕು ಆಫೀಸಿನ ೩ನೇ ಕ್ಲಾರ್ಕರನ್ನಾಗಿ ರೂ ೫೫ ತಲಬಿನ ಮೇಲೆ ನೇಮಕಮಾಡಿರುವರು ಸದರಿ ಮಂಗಳೂರು ಡಿವಿಜನಲ್ ಆಫೀಸಿನ ೪ನೇ ಕ್ಲಾರ್ಕ ಕೆಲಸಕ್ಕೆ ರಾ ಯು ನಾರಾಯಣ ರಾವ್ ಬಿ ಎ, ಯವರನ್ನು ರೂ ೫೦ ತಲಬಿನ ಮೇಲೆ ನೇಮಿಸಿರುವರು

ಕಳದ ವಾರ ಮುನಿಸಿಪಾಲಿಟಿಯಲ್ಲಿ ಪ್ಲೇಗು ಮರಣಗಳು ಇದ್ದಿಲ್ಲ ೧ ಶಿಶುಬು ರೋಗದ ಮರಣವು ಮಾತ್ರ ಇತ್ತು

ಇದೇ ಕಳದ ತಾ ೧೬ಕ್ಕೆ ಸಮುದ್ರಕ್ಕೆ ವಿೀನು ಹಿಡಿಯುವರೆ ಹೋಗಿದ್ದ ಪಲವು ಮೊಗೇರರ ದೋಣಿಗಳಲ್ಲಿ ಒಂದು ದೋಣಿಯು ಮಗಚಿ ಬಿದ್ದು ಆದರಲ್ಲಿರುವ ೫ ಜನರ ಪೈಕಿ ಒಬ್ಬನು ಮಾತ್ರ ಪ್ರಾಣವನ್ನು ಕಳಕೊಂಡನು. ಬಾಕಿ ೪ ಜನರು ಹ್ಯಾಗೂ ದಡಕ್ಕೆ ಒಂದು ಶೇರಿದರು.

ಮಂಗಳೂರು ಡಿವಿಜನಲ್ ಆಫೀಸಿನ ಕ್ಲಾರ್ಕರಾಗಿರುವ ಮೆ ಪಿ ಎಸ್ ಪರ್ನಾಂಡಿಸರವರನ್ನು ಕಲೆಕ್ಟರ ಆಫೀಸಿನ ರೂ ೪೫ ತಲಬಿನ ಆಕ್ಟಿಂಗ್ ಕ್ಲಾರ್ಕ ಕೆಲಸಕ್ಕೆ ನೇಮಿಸಿರುತ್ತಾರ

ಮುಲ್ಕಿ ರೆವಿನ್ಯು ಇನ್ಸಪೆಕ್ಟರರಾಗಿರುವ ರಾ। ಗಣೇಶ ರಾಯರು ಮಂಗಳೂರು ಡಿವಿಜನಲ್ ಆಫೀಸಿನ ಹೆಡ್ ಕ್ಲಾರ್ಕ ಕೆಲಸವನ್ನು ವಹಿಸಿಕೊಂಡ ನಂತರ ಮಂಗಳೂರು ಡಿವಿಜನಲ್ ಆಫೀಸಿನ ಫಸ್ಟ್ ಕ್ಲಾರ್ಕರಾಗಿರುವ ರಾ। ವರ್ಕಾಡಿ ವೆಂಕಟೇಶಯ್ಯರವರು ಹಜೂರು ಆಫೀಸಿನ ಆಕ್ಟಿಂಗ್ ರೂ ೬೦ ತಲಬಿನ ಕ್ಲಾರ್ಕರ ಕೆಲಸವನ್ನು ನಿರ್ವಹಿಸುವರು

ಮ ರಾ ರಾ ಜು ವಿ ವೆ ಕಟ್ಟರಮಣಯ್ಯನವರು ಮೂಡಬಿದ್ರೆಯ ಸಬ್ ಮೆಜಿಸ್ಟ್ರೇಟರಾಗಿಯೂ, ಮ। ರಾ ರಾ ಕೆ ರಾಮವರ್ಮರಾಜರವರು ಕಾಸರಗೋಡಿನ ಸಬ್ ಮೆಜಿಸ್ಟ್ರೇಟರಾಗಿಯೂ ಮ। ರಾ। ರಾ। ಎಮ್. ಅಚ್ಚುತಯ್ಯನವರು ಕಾರ್ಕಳ ಸಬ್ ಮೆಜಿಸ್ಟ್ರೇಟರರಾಗಿಯೂ ವರ್ಗಾಯಿಸಲ್ಪಡುವರೆಂಬುದಾಗಿ ತಿಳಿಯುತ್ತೇವೆ.

ಕಳದ ಸಂಚಿಕೆಯಲ್ಲಿ ಪ್ರಸ್ತಾಪಿಸಿದ ಕಾರ್ಕಳ ರಂಜಾಳ ವಿಟ್ಟಪ್ಪ ಶ್ಯಾನುಬಾಗರ ಮನೆಯಲ್ಲಾದ ಕನ್ನಕಳವಿನಲ್ಲಿ ಎತ್ತಿಹಾಕಿದ ಬಿಂದಿಗೆಯ ವೈಕಿ ತನ್ನ ವಾಲಿಗೆ ಶಿಕ್ಕಿರುವ ರೂಪಾಯಿ ೫೦೦ರ ಚಿನ್ನಾಭರಣವನ್ನು ಒಂದು ಕಾಗದ ತುಂಡಿನ ಸಮೇತ ಆ ಕಳ್ಳರಲ್ಲೊಬ್ಬನು ರಾತ್ರಿಕಾಲದಲ್ಲಿ ಮುದ್ಯೆ ಮನೆಗೆ ತಂದು ಬಿಸಾಡಿ ಹೋಗಿರುವನಂತೆ.

ಇಲ್ಲಿಯ ಉಳ್ಳಾಲ ಸುಬ್ರಾಯಮಲ್ಯರ ಮಗ ವಾಮನ ಮಲ್ಯರ ಮನೆಯಲ್ಲಿರುವ ಹೆಣ್ಣು ನಾಯಿಯೊಂದನ್ನು ಅಲ್ಲಿಯೇ ಸಮೀಪ ವಸ್ತಿಮಾಡಿಕೊಂಡಿರುವ ಫೋರೆಸ್ಟ್ ರೇಂಜರ್ ಬಾಳಿಗಾರ್‌ಡೇಸರವರು ತನ್ನಲ್ಲಿದ್ದ ಬಂದೂಕಿನಿಂದ ಮೊನ್ನೆ ಬೆಳಿಗ್ಯೆ ಸುಮಾರು ೭ ಘಂಟೆ ಸಮಯ ಹೊಡದು ಕೊಂದುಬಿಟ್ಟು, ಸದ್ರಿಯವರ ಹಿಡಿನಲ್ಲಿ ತಾನಿರುವರೆಂತ ಸದರಿ ವಾಮನಮಲ್ಯರ ಪಿರ್ಯಾದು ಇಲ್ಲಿನ ಟೌನ್ ಮೆಜಿಸ್ಟ್ರೇಟರಲ್ಲಿ ಮೊನ್ನೆ ದಿನ ದಾಖಲಾಗಿರುವದಾಗಿ ಕೇಳುತ್ತೇವೆ

ಮಂಗಳೂರಿನ ರುಜೇರಿಯೋ ಕಾಥೀ[illegible] ಇಗರ್ಜಿಯ ಅಸಿಸ್ಟಾಂಟರಾದ ಫಾದರ್ ಸಿ. ವಿಕ್ಟರವರು ೬ ತಿಂಗಳ ರಜೆ ಮೇಲೆ ಹೋದ್ದರಿಂದ, ಇವರ ಪಟ್ಟಿಗೆ ಪನಂಗಿಲ ಇಗರ್ಜಿಯ ಅಸಿಸ್ಟಾಂಟರಾದ ಫಾದರ್ ಎಫ್. ಎಕ್ಸ್. ಅರಜ್ಞಿರವರು ಇಲ್ಲಿಗೆ ಬಂದಿದ್ದಾರೆ

ಪನಂಗಿಲಕ್ಕೆ ಈ ವರ್ಷ ಪಟ್ಟವಾದ ಫಾದರ್ ವಿಕ್ಟರ್ ಫೆರ್ನಾಂದಿಸರು ಹೋಗಿದ್ದಾರೆ J P

ಹೊಸದುರ್ಗ ಹೊಸದುರ್ಗ ಕಸಬೆಯನ್ನು ಪೀಡಿಸುತ್ತಿದ್ದ ಒಂದು ಕತ್ತೆಕಿರುಬನನ್ನು ಗುಂಡು ಹೊಡದು ಕೊಂದಿರುತ್ತಾರೆ ಇನ್ನೂ ಸಿತಿಗಾ ಗೈಯ್ಯುತ್ತಿರುವ ಒಂದು ಹುಲಿಯನ್ನು ಕೊಂದುಬಿಟ್ಟರೆ ಊರಿಗೆ ಸ್ವಲ್ಪ ಸುಖ ಉಂಟಾಗುವುದು

ಕಯ್ಯೂರು ಹಳ್ಳಿಯಲ್ಲಿ ವಾಂತಿಬೇಧಿ ರೋಗವು ತಲೆದೋರಿ ಒಬ್ಬನನ್ನು ಹಿಡಿಯುತ್ತಲೂ ದಿವ್ಯೌಷಧ ಕಸಿಸಲ್ಪಾರ್ ಮಾ ರಾ ರಾ ಮಂಜಿನಾಗ ಬಳಿಗಾರು ಆಳಿಗ ಹೋಗಿ ಅದನ್ನು ಅಣುಗಿಸಿವಿಟ್ಟರು

ಶಾಲಾ ಇನಸ್ಪೆಕ್ಟರ್ ದೊರೆಗಳು ಅಕೋಬರ್ ಮೊದಲಿನ ವಾರದಲ್ಲಿ ಹೊಸದುರ್ಗ ಸೆಕಂಡು ಶಾಲೆಯನ್ನು ಪರೀಕ್ಷಿಸುವರಂತೆ

ಬಾಸೆಲ್ ಮಿಶನ್ ಶಾಲಾಗಳಿಗಾಗಿ ಇನ್ಸ್‌ಪೆಕ್ಟರಾಗಿರುವ ಫ್ರೌಗಮೌಂಡ ದೊರೆಯು ಹಿರಿಯಸ್ಥಾನದ ಬಾಸೆಲ್ ಮಿಶನ್ ಶಾಲೆಗಳನ್ನು ಪರೀಕ್ಷಿಸುವರೆ ಬರುವ ಆಕ್ಟೋಬರ ತಿಂಗಳ ಅಂತ್ಯದೊಳಗೆ ವಿಲಾಯತಿಯಿಂದ ಮಂಗಳೂರಿಗೆ ಬರಲಿರುವರು

ಕುಂದಾಪುರ ಕೌವಲ ಪೈಲಟ್ಟಿನಲ್ಲಿ ಅಡಕೂಪಿಮೊಕದಮೆಗಳು ಇಲ್ಲಿಯ ಸಬ್ ಜಿಸ್ಟ್ರೇಟರ ಮುಂದೆಯಲ್ಲಿ ತನಪಿಯಲ್ಲಿವೆ

ಇಲ್ಲಿಯ ಕೊಂಕಣಿ ಕಣ್ಣಿನ ವೈದ್ಯರಾದ ಡಾಕ್ಟರ್ ಎಂ. ಕಿಕ್ಕಾನ ಕೇಳುನ್ನಾರರು ಬಡ ಕೂಟ್ಟ ನಿರ್ಗತಿಕ ರುಗಳವರು ಮಧ್ಯಸ್ಥ ಸ ರ ನ್ಯಾಯವಿದ್ಯುಕ್ತ ಸಭೆಯ ಮೆಂಬರಾಗಿ ನಾಮಿನೇಟ್ ಆಗಿ ಕೆಲಸಕ್ಕೆ ಬಹು ಸಂತೋಷಪಡುತ್ತಾರೆ

ಕಾಸರಗೋಡು ಜಿಲ್ಲೆ ಕಲೆಕ್ಟರರಾದ 16ನೇಗೆ ಇಲ್ಲಿಯ ಮುನ್ಸಿಪಲ್ ಕೌನ್ಸಿಲ್ ಸಂವರ್ಧಣೆಗಾಗಿ ಜಿಲ್ಲಾ ಬೋರ್ಡ ಸದಸ್ಯರ ಗತಿ ಫಂಚಿಯ ಟೌನ್ ಹಾಲಿನಲ್ಲಿ ಇಷ್ಟಾ ದಯಮಾಡಿಸಿದರು ಬಂದೆರಿಯ ರಾಷ್ಟ್ರೀಯ ಬಾ ಕೊಂಟ್ಟ ರಿಕಾರ್ಡ ಮುಂತಾದವನ್ನೆಲ್ಲಾ ತನಕ ಮಾಡಿ ತೃಪ್ತಿಪಟ್ಟು ಅದೇ ದಿನದ ಸಾಯಂಕಾಲ ಮೈಲ್ ಟ್ರೈನ ಬಂಡಿಗೆ ಮಂಗಳೂರಿಗೆ ಹಿಂತಿರಗಿದರು ಈ ಕೋರ್ಟ್ ಸಂದರ್ಶನಕ್ಕೆ ಬಗ್ಗೆಯಾಗಿ ಯಾ ವೀರೆ ಯಾವ ಉದ್ದಿಶ್ಯದಿಂದಾಗಲಿ ಈ ಮೊದಲು ಇಲ್ಲಿಗೆ ಬಂದಿರುವ ಬ್ರಿಟಿಷ್ ದೊರೆಗಳಿಗೆ ವಖಿಲರುಗಳು ಬಹಳ ಸಂಭ್ರಮದಿಂದಲೂ ಆದರೋಪಚಾರಗಳಿಂದಲೂ ಮನ್ನಿಸಿ ತಂದು ಉಪಚರಿಸುವ ವಾಡಿಕೆ ಪ್ರಕಾರ ಈ ಸರ್ತಿ ಹೊಸತಾಗಿ ಬಂದ ದೊರೆಗಳ ವರ್ತಮಾನ ಸುದ್ದಿ ಯಾವದೂ ಇಲ್ಲದೆ ಹೋದದ್ದಕ್ಕೆ ಜನವರೂ ಆಶ್ಚರ್ಯ ಪಡುತ್ತಾರೆ

ನಾದುರುಸ್ತಿಯಲ್ಲಿರುವ ಇಲ್ಲಿಯ ಬೋರ್ಡ್ ಪ್ರೈಮರಿ ಶಾಲೆಯು ಮೇಲಧಿಕಾರಸ್ಥರ ಗಮನಕ್ಕೆ ಬಂದು ಶಾಲಾ ಕಟ್ಟೋಣವನ್ನು ಸುಮಾರು 75೦ ರೂಪಾಯಿಗೆಳು ಖರ್ಚು ಮಾಡಿಸಿ ದುರುಸ್ತಿ ಮಾಡಿಸಿದರಿಂದ ಪುನಹ ಎಲಿಮೆಂಟರಿ ಶಾಲೆಯು ೨ ಕ್ಲಾಸುಗಳು ಈ ಶಾಲೆಯಲ್ಲಿ ಈ ಹೊತ್ತು ಪ್ರವೇಶ ಮಾಡಿಸುತ್ತಾರಾಗಿ ಕೇಳುತ್ತೇನೆ. ಸೆಕಂಡರಿ ಶಾಲೆ ಇಲ್ಲಿಡುವ ಆಲೋಚನೆಯಳ್ಳ ಶ್ರೀಮನ್ ಎಡ್ವರ್ಡ್ ಚಕ್ರವರ್ತಿ ಸ್ಮಾರಕ ಫಂಡಿನ ಸೆಧೆಯ (ನಿಶ್ಶಬ್ದವಾಗಿ) ಪುನಹ ಯಾವದೊಂದು ವಾರ್ತೆ ಕೇಳಿಸದೆ ಇದ್ದದ್ದು ತುಂಬಾ ಚಿಂತಾಸ್ಪದವಾಗಿದೆ

ಪುತ್ತೂರು ವಿಟ್ಲ ಕಸಬೆಯಲ್ಲಿರುವ ಅಣ್ಣಪ್ಪ ಯಾನೆ ಶ್ರೀಧರ ನ್ಯಾಯಕ ಎಂಬವರ ಮೇಲ ಆಫಿಮು ಸ್ಮಾಪೀನ ಇಟ್ಟುಕೊಂಡದ್ದೆಂಬದಾಗಿ ಜಪ್ತಿಯಿಂದ ವಿಟ್ಲರೇಂಜ್ ಆಬ್ಕಾರಿ ಇನ್ಸ್‌ಪೆಕ್ಟರರು ಚಾರ್ಜು ಏರ್ಪಡಿಸಿದ ಮೊಕದ ಮೆಯು ಇಲ್ಲಿಯ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ದೀರ್ಘ ಕಾಲದಿಂದ ತನಕೆ ನಡೆಯುತ್ತಾ ಇದ್ದು ಮುದ್ದೆಯಾಲೆಯನ್ನು ಬುಲಾಸಪಡಿಸಿರುವರು

ಕಳೆದ 17ನೇ ಸಂಪಿಕೆಯಲ್ಲಿ (ನಷ್ಟಂಬರ ತಿಂಗಳ) 10ನೇ ಪುಟದಲ್ಲಿ ಪುತ್ತೂರು ಬಾತ್ಮಿಯಲ್ಲಿ ಕೂಡಿಂದ ಬಾನುವಾರು ನಂತೆ ಮುದ್ರಿಸಿ ಪ್ರಕಾರ ನಡಿಯುವದು ಎಂದು ಪದಲಿಗೆ ಯಥಾ ಪ್ರಕಾರ ವರುಷಂಪ್ರತಿ ನಡಿಯುತ್ತದೆ ಎಂತಲೂ, "ಪೂಮುರ ಪ್ರಕಾರ ವರುಷಂಪ್ರತಿ ನವೆಂಬ್ರ ತಾ 7ಕ್ಕೆ ಸುರು ಆಗಿ" ಎಂದರ ಪದಲಿಗೆ "ಪೂಮುರಿ ಪ್ರಕಾರ ವರುಷ ನವೆಂಬ್ರ ತಾ 17ಕ್ಕೆ ಸುರು ಆಗಿ" ಎಂತ ದುರುಸ್ತಿಯಿಂದ ಪೋರಬೆಂಕು

ಸುರಕ್ಷಿತಪಡಿಸಿದ ಕಾಡುಗಳಿಂದ ಬಾನುವಾರು ಪಾಸ್ ಮತ್ತು ಫೀವನೆ ಮುಳಿಹುಲ್ಲು ಜವಾಯಿಸುವ ಸ್ವತಂತ್ರವನ್ನು ಫೊರೆಸ್ಟ್ ಇಲಾಖೆ ವಿವರು ಎಲಂ ಮಾಲಾಕರಾದ್ದರಿಂದ ಅಂದಾ ಉದ್ದಿಶ್ಯಗಳ್ಗೆ ಬಗ್ಯ ಬೇಕಾದ ಜನರಿಗೆ ಇವ್ವುಗಳ ಮಾಫಿಯಿಂದ ವಿಡೂಷಾರುವದೆಂಯ ಹುಕುಂ ಮಾತಿರುವದು

ಮುಲ್ಕಿ ಇಲ್ಲಿ ಸುಬ್ರಾವ್ ಮೆಮೊರಿಯಲ್ ಫಂಡಿಗೆ ದ್ರವ್ಯ ಸಹಾಯ ಮಾಡುವದಕ್ಕಾಗಿ ಶ್ರೀಯುತ ಎಂ. ಸುಬ್ಬಾರಾಯ ಪ್ರಭೃತಿ ಮುಂದಾಳುಗಳು ಪೂರ ಜನಂಗಿ ವಂತಿಗೆ ವಸೂಲು ಮಾಡುವದಕ್ಕೆ ನ್ಯಾಯಂಪಿಸಿರುವರಾಗಿ ತಿಳಿಸಲು ಹರ್ಷಿಸುತ್ತೇವೆ ಈ ವರ್ಷ ಪ್ರವರುದ್ಧವಿಯಲ್ಲಿ ಸ್ಥಳೀಯ ಸಾರ್ವಜನಿಕ ನಾಟಕ ಮಿತ್ರ ಮಂಡಳಿಯವರು ಸದರಿ ಪಂಡಿನ ದ್ರವ್ಯ ಸಹಾಯಕ್ಕಾಗಿ ಎರಡೆರಡು ನಾಟಕಗಳನ್ನು ಆಡಿತೋರಿಸುವವರಾಗಿ ಸಹಾ ಕೇಳುತ್ತೇನೆ ಮಂಡಳಿಯವರು ಈ ಮಾದರಿಯು ಅನುಸರಣೀಯವಾದದ್ದು ಈ ನೂತನ ಮಂಡಳಿಯವರಾದರೂ ಇಂಥಾ ಸದುದ್ದಿಶ್ಯಗಳನ್ನು ಕೈಕೊಂಡು ಚಿರಕಾಲ ಬಾಳಲಿ

ಪಲಯಂಗಡಿ ಗ್ರಾಮ ಕೋರ್ಟಿನಲ್ಲಿ ವಾದಿ ಕಡೆ ನಾಡ್ಪಾಗಾರ ಪರುಪಣಂಬೂರು ತ್ಯಾಂಪ ಶೆರೆಗಾರ ಎಂಬವನೆ ಮೂರು ಸತಿ ಸಮ್ಮನ್ಸು ಆದರೂ ಹಾಜರಾಗದ್ದರಿಂದ ಸದರಿ ಕೋರ್ಟಿನವರ ರಿಪೋರ್ಟು ಪ್ರಕಾರ ತಾಲೂಕು ಸ್ವೀಕರಿಗೆ ಮೆಜಿಸ್ಟ್ರೇಟು ಕೋರ್ಟಿನಲ್ಲಿ ನಡದ ಕೆ ನಂಬ್ರ 172 1910 ನೇ ಮೊಕದಮೆಯಲ್ಲಿ ಸದರಿ ತ್ಯಾಂಪ ಶೆರೆಗಾರಗೆ ೫ ರೂಪ್ಯಾ ಜುರುಮಾನೆ ವಿಧಿಸೋಣಾಯಿತು

ಇಲ್ಲಿ ಗತವಾರದಲ್ಲಿ ನಡದ ವರುಷಾವಧಿ ಗಣಪತಿ ಜಲಸ್ಥಾಪನೆ ಸಮಾರಂಭದ ದಿವಸ ಹಳ್ಳಿಪಳ್ಳಿಗಳ ಜನರು ಕಿಕ್ಕಿರಿದು ತುಂಗನಕಾಯಿ ಕಟ್ಟುವ [illegible] ಒಂದು ತಮಾಶೆ ಅಲ್ಲದೆ ಯಾರಿಗೂ [illegible] ಹೆಚ್ಚಾಗಿ ಬಡವರೇ ಕೂಡುವದು. [illegible] ಕಾಲದಾರಭ್ಯೆ ಮೆಜಿಸ್ಟ್ರೇಟ ಮುಂತಾದ [illegible] ಗಳೂ ಯುರೋಪಿಯನರೂ ಇಲ್ಲಿ ಬಂದಾಗ್ಗೆ [illegible] ವಾಗಿ ತಮಾಶೆಯಾಗಿ ನೋಡಿ ಸಂತೋಷಪಡುತ್ತಿರುವರು ಈ ವರುಷ ಇಲ್ಲಿಯ ಪೋಲಿಸಿನವರು ಯಾವ ಕಾರಣದಿಂದಲೋ ಯಾ ಯಾವ ಸಾಧನೆಗೋಸ್ಕರವೋ [illegible] ನರನ್ನು ದಿಗಿಲು ಪಡಿಸಲಿಕ್ಕೋ ಅಥವಾ ಅದಿನ ಎಳ್ಳಷ್ಟು ಇಲ್ಲಿ ನಿಲ್ಲುವ ಉದ್ದಿಶ್ಯವೋ ಇದನ್ನು ಮನ್ನಾಪಡಿಸಿದೆವು; ತಮ್ಮ ಇತಹ ಅಧಿಕಾರವನ್ನು ತಮ್ಮ ಫಿರ್ಕಿಯಲ್ಲಿ ನಡಿಯುವ ಕನ್ನಗಳವು ಮುಂತಾದ್ದರ ತಲಾಶಿಯಲ್ಲಿ ತೋರಿಸಿದರೆ ಒಳಿತು ಅತ್ಯುತ್ತಮವಿತ್ತು

ಒಬ್ಬ ನೋಟಕ

FOR SALE.

Karnick Devappa's House with garden attached to it

Apply to.-

Y SUBBA RAU,
KADRI MANGALORE

ಲಾಭ! ಹೊಸ ಪುಸ್ತಕ!!

ಸಚಿತ್ರಕಲಾತರಂಗ 1ನೇ ಭಾಗ

೪ ಅಧ್ಯಾಯಗಳನ್ನು ಈ ಪತ್ರಿಕೆಯ ಚಂದಾದಾರರಿಗೂ, ಸ್ಕೂಲ್ಮಾಸ್ಟರರಿಗೂ, ಮತ್ತು ವಿದ್ಯಾರ್ಥಿಗಳಿಗೆ ರೂ ೦-೮-೦ ದೊರೆಯುವುದು ಇತರರಿಗೆ ರೂ 0–10–0

ಎಂ ಪಿ ವಲ್ಲಭ ಐಯಂಗಾರ್, ಬೀರೂರು

ಜೀನಸುಗಳ ಧಾರಣೆ, ಮಂಗಳೂರು. (ರಾಜ)

ಕೊಳೂರು ಮಸ್ಕತಿ ಅಕ್ಕಿ	4–11–0
ಗುಮ್ಮು ಮಸ್ಕತಿ ,	4—6—0
ಮಸ್ಕತಿ ಮುಯಂ ,	4—8—0
ವಕ್ಲು ಸುಗ್ಗಿ ,,	4—8—0
ಸುಗ್ಗಿ ದುಯಂ ,,	4—3—0
ಮಸ್ಕತಿ ಬೆಳ್ತಿಗೆ ,,	5—11—0
ರಂಗೂನ್ ಬೆಳ್ತಿಗೆ ಗೋಣಿ	7–13–0
ಹುರುಳಿ ಗೋಣಿಗ ಮುಡಿ 2ರ	5—2—0
ಉಪ್ಪು ಗೋಣಿ ೧ರ	3–11–0
ಖೊಬ್ರಿ ಖಂಡಿ ೧ರ	110—0—0
ಖೊಬ್ರಿ ಎಣ್ಣೆ ಮಣ	7—8—0
ಕಾಫಿ ಖಂಡಿ ಗೆರೂ	185—0—0
ಕಾಳು ಮೆಣಸು ಖಂಡಿ	125—0—0
ಹೊಸ ಬಿಳಿ ಗೋಟು ಅಡಿಕೆ	75—0—0
ಕರಿ ಗೋಟು	60—0—0

1.	ಸುಧಾಮಣಿ (ಕನ್ನಡ ಟೀಕು)	0—2—0
2.	ಸುಧಾಮಣಿ	0—4—0
3.	ಜಿಕಿತ್ಸೆ (ಮಕ್ಕಳ ವೈದ್ಯ)	0—2—0
4.	ಶಂಕರಾಚಾರಣರ ಕಥೆ	1—8—0
5.	ಸುಬೋಧ	0-12—0
6.	ಶಂಕರ ವಿಲಾಸ	0—8—0
7.	ವೈಷ್ಣವ ಮತಸಾರ	0—6—0
8.	ಅಷ್ಟೇಶ್ವರ ವಜನಾ	0—6—0
9.	ಶಿವ್ಯ ಕಲ್ಪವಲ್ಲರಿ ..	0-10—0
10.	ಅನುಭವಸಾರ	0—8—0
11.	ಶೈವಸಾರ ಸಂಗ್ರಹ ಅಪೂರ್ವವಾದ ಅತ್ಯುಪಯೋಗವಾದ ಗ್ರಂಥ (ಕ ಟೀ)	3—0—0
12.	ಶ್ರೀವಿಷ್ಣು ಸಹಸ್ರನಾಮ ಸ್ತೋತ್ರ (ತಿಮತ ಟೀಕಾ ತಾತ್ಪರ್ಯ)	3—0—0
13.	ಶಿವಾನಂದಲಹರಿ (ಕನ್ನಡ ಟೀಕು ತಾತ್ಪರ್ಯ ಸಹಿತ)	0—6—0
14.	ಉದಕಶಾಂತಿ ಮಂತ್ರ	0—2—0
15.	ಶಾಲಾಮೃತ (ಕ ಟೀ) ಉತ್ತಮ	0 12—0
	,, ,, ಸಾದಾ	0—8—0

ಇವುಗಳಲ್ಲದೆ ಇನ್ನೂ ನೂರಾರು ಇತರ ಪುಸ್ತಕಗಳು ದೊರೆಯುವವು

ವಿಳಾಸ — ಎಚ್ ಎನ್ ರಾವ್ ಬ್ರದರ್ಸ್
ಮ್ಯಾನೇಜರ್,
ಕರ್ನಾಟಕ ಪ್ರಕಾಶಿಕಾ ಪುಸ್ತಕಶಾಲೆ
ಬೆಂಗಳೂರು ಸಿಟಿ

ಅಜಮಾಯಿಷಿ ಮಾಡಿ ನೋಡಿರಿ, ಧಾರಣೆ ಸುಲಭ

ನಾವು ಉತ್ತಮವಾದ ಕೆಂಪು ರಬ್ಬರಿನಲ್ಲಿ ತಯ್ಯಾರಿಸಿದ, ಫೂಟ್‌ಬೋಲ್ ಬ್ಲ್ಯಾಡರ್‌ಗಳನ್ನು ಮತ್ತು ನಯವಾಗಿಯೂ ಮಜಬೂತಾಗಿಯೂ ಮಾಡಿರುವ ಕವರುಗಳನ್ನು ನೇರವಾಗಿ ವಿಲಾಯತಿಯಿಂದ ತರಿಸುತ್ತೇವೆ

1ನೇ	ನಂ. ಫೂಟ್‌ಬೋಲ್ 1ಕ್ಕೆ	2—8—0,	ಖಾಲಿ ಬ್ಲ್ಯಾಡರ್ 1ಕ್ಕೆ		1—0—0
2	,, ,, ,, 1ಕ್ಕೆ	3—0—0	,, ,,	1ಕ್ಕೆ	1—4—0
3	,, ,, ,, 1ಕ್ಕೆ	4—0—0	,, ,,	1ಕ್ಕೆ	1—8—0
4	,, ,, ,, 1ಕ್ಕೆ	4 12—0	,, ,,	1ಕ್ಕೆ	1 12—0
5	,, ,, ,, 1ಕ್ಕೆ	5 12—0	,, ,,	1ಕ್ಕೆ	2—0—0

ಫೂಟ್‌ಬೋಲ್ ಇನ್‌ಫ್ಲಾಟರುಗಳು 1ಕ್ಕೆ 1-4 0, 1 8 0, 1 12 0 2—4—0, 2—8—0, 3 0—0, 3—8—0, 4—0—0

ಭಳಿಕಾಲಕ್ಕೆ ಶಾಕವಾಗಿಯೂ, ಬಹಳ ನಯವಾಗಿಯೂ ಬಹುಕಾಲ ಬಾಳಿಕೆ ಬರುವ ವಿಲಾಯತಿ ಉಲನ್ ರಗ್ಸ್

	ಸೈಜು	60×100	62×110
K	ನಂಬ್ರ	6—8—0,	7—0—0
R	ನಂಬ್ರ	8-12—0,	9—8—0
S	ನಂಬ್ರ	12—8—0	13—8—0
J	ನಂಬ್ರ	13—8—0,	14—8—0
L	ನಂಬ್ರ	16—8—0	18—0—0

ಬಹಳ ನಯವಾಗಿ ನೇದಿರುವ ರಬಂವಾರಿ ಚಿತ್ರಗಳುಳ್ಳ (ವೇಲ್ವಾರಿ ಬಟ್ಟಾರ) ಒಂಟೇ ಕೂದಲು ರಗ್ಸ್

A	ನಂಬ್ರ 1ಕ್ಕೆ	19—14—0 60×90
E.	ನಂಬ್ರ 1ಕ್ಕೆ	16—10—0 60×90
	,, ,,	17—0—0 60×90 ಬಹಳ ನಯವಾದದ್ದು
F.	ನಂಬ್ರ 1ಕ್ಕೆ	22—0—0, 60"×90

ನಮ್ಮಲ್ಲಿ ಅಲ್ಯೂಮಿನಿಯಮ್ ಪಾತ್ರೆಗಳು ಬಹಳ ರಬಂವುಂಟು ಗಂಜಿವಾತ್ರೆಗಳು, ಡೆಕ್ಷಾಗಳು, ಲೋಟಾಗಳು, ಕೊಂಬು ಲೋಟಾಗಳು, ಸಾದ ಟಂಬ್ಲರುಗಳು, ತಟ್ಟೆಗಳು ಕೂಜಾಗಳು, ತಟ್ಟೆಗಳು ವಗೈರೆ ಸಾಮಾನುಗಳು ಬಹಳವಾಗಿವೆ

ಅವಲ್ ರಬಂ ಪೌಂಡು ತೂಕಕ್ಕೆ 1 10—0.
ಮಧ್ಯಂ ,, ,, ,, 1—7—0.
ಸಾಧಾರಣ ,, ,, ,, 1—4—0.

ಎಲ್. ಎ. ಪೋರುವಾಲ್ ಕಂಪೆನಿ.
ಬೆಂಗಳೂರು ಸಿಟಿ.

1ಕ್ಕೆ ರೂಪಾಯಿ 2—0—0, 2—8—0, 3—0—0,

ಅನಂತನ ದಾರಗಳು

ರೂಪಾಯಿ 1ಕ್ಕೆ 4, 6, 8, 10, 12, 16 ಜೊತೆಗಳು. ಹಾಸಲು ವೃತ್ತೀಯ

ಹೆಚ್ ಎನ್. ರಾವ್ ಬ್ರದರ್ಸ್,
ಚಿಕ್ಕಪೇಟೆ ಬೆಂಗಳೂರು ಸಿಟಿ.

"ವಿದ್ಯಾನಂದ" ಗ್ರಂಥಮಾಲಾ.

ಮಹಾ ಕವಿ ಕಾಳಿದಾಸಕೃತ

"ರಘುವಂಶ ಮಹಾಕಾವ್ಯ"

ಕಾನಾಗಿಯೇ (ಸ್ವತಃ) ಸಂಸ್ಕೃತವನ್ನು ಕಲಿತುಕೊಳ್ಳುವವರಿಗೂ ಸಂಸ್ಕೃತ ವಿದ್ಯಾರ್ಥಿಗಳಿಗೂ ಉಪಯುಕ್ತವಾಗಿರುವಂತೆ ಶ್ಲೋಕ, ಪದ, ಶಬ್ದ, ಅನ್ವಯ ಅರ್ಥ, ಆಕಾಂಕ್ಷೆ, ವಿಗ್ರಹ, ಧಾತು ರೂಪ, ದಾತ್ಪರ್ಯ, ವ್ಯಾಕರಣ ವಿಷಯ, ವಿಶೇಷ ನಿಯಮಗಳು ಇವುಗಳೊಂದಿಗೆ ಮೊದಲನೆ ಸರ್ತಿ ಪ್ರಿಂಟಾಗಿ ಸಿದ್ಧವಾಗಿದೆ ಬೆಲೆ 1—0—0

ಮುಕುಂದಮಾಲಾ ಸ್ತೋತ್ರ

ಜೆಲ್ಲೆ ಪೆಂರಗಳೊಂದಿಗೆ ಪ್ರತಿ ಪದ ಅರ್ಥ, ಅನ್ವಯವಾರ್ಥ, ತಾತ್ಪರ್ಯ ಸಹಿತ ರುತ್ತದೆ ಬೆಲೆ 0—4—0

ವಿಳಾಸ ಮ್ಯಾನೇಜರ್

ವಿದ್ಯಾನಂದ ಆಫೀಸು,
ಚಿಕ್ಕಪೇಟೆ ಬೆಂಗಳೂರು ಸಿಟಿ

ಕುಂತಳ ಕೌಮುದಿ ತೈಲ.

ಕುಚ್ಚಿಹಾರದ ಮಹಾರಾಣಿಯವರು—ಅವರು ಉಪಯೋಗಿಸಿದ ಕೇಶವರ್ಧನ ತೈಲಗಳೆಲ್ಲಾ ಇದೇ ಅತ್ಯುತ್ತಮವಾದುದು

ಪೈಮೆನ್‌ಶಿಂಗ್ ಮಹಾರಾಣಿಯವರು—ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ

ಹದ್ದಾ ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರ

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈದ್ಯಗುಣವುಳ್ಳ ತೈಲವೆಂದು ಶಿವಾರಸು ಮಾಡಿ ಒಲ್ಲೆನು

ಶ್ರೀ ಸುರೇಂದ್ರನಾಥ ಬಾನರ್ಜಿಯವರು—ನಾನು ಉಪಯೋಗಿಸಿದ್ದೇನೆ, ಸರ್ವರೂ ಇದನ್ನು ಉಪಯೋಗಿಸ ಬಹುದು

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ ತಲೆಬಾಚಿಕೊಳ್ಳುವದಕ್ಕೂ ಅತ್ಯಂತೋಪಯುಕ್ತವಾದದ್ದು ಇದರಲ್ಲಿ ಅತ್ಯಾಶ್ಚರ್ಯಕರವಾಗಿ ಕೂದಲನ್ನು ಬೆಳಸುವ ಗುಣಗಳಿರುವದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ ಇದು ಮನೋಹರವಾದ ಸುಗಂಧವುಳ್ಳ ದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು ಇದುವರೆಗೆ ಮಾರಾಟಕ್ಕೆ ಬಂದಿರುವ ತೈಲಗಳೆಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು ೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೫ ಆಣೆಗಳು.

ಕವಿರಾಜ ಆರ್. ಸಿ. ಸೆನ್, ಎಲ್ ಎಮ್. ಎಸ್.,
216 ಕಾರ್ನವಾಲಿಸ್ ಬೀದಿ. ಕಲ್ಕತ್ತಾ

ಟೆಲಿಗ್ರಾಫ್ ವಿಳಾಸ—"ಕೌಮುದಿ"

ಮೈಸೂರು ದೇಶಕ್ಕೆ ವಿಜಂಟರು —ಎಲ್. ಎ. ಪೋರುವಾಲ್ ಎಂಡ್ ಕೋ,
ಚಿಕ್ಕಪೇಟೆ, ಬೆಂಗಳೂರು.

ಮುಂಗಳೂರಿಗೆ ವಿಜಂಟರು;—ಮೆ! ರಾ! ರಾ! ಸಿ. ಆರ್. ಕಾಮತ್ಸ್,
ಅಂಚೆ ಪೋಸ್ಟ್, ಮಂಗಳೂರು.

ಅಸಾಧಾರಣ ಶುದ್ಧ ಪರಿಮಳ ಆಯುರ್ವೇದೌಷಧಿಗಳು

೧. **ಕುಂತಳಾನಂದ ತೈಲವು.** ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ರೂ ೧೦ ಆಣೆ,

೨. ಪ್ರಮೇಹರಿವು ಬಿಂದು. ಉರಿಯನ್ನೂ ಕೇವನ್ನೂ ಕೂಡಲೇ ನಿಲ್ಲಿಸಿ ಪಪ್ಪಸಿಲ್ಲದೆ ಖಂಡಿತವಾಗಿ ಗುಣ ಕೊಡುವದು ಬಾಟ್ಲಿಗೆ ೨ರೂ.

೩. **ಕಾಮೇಶ್ವರ ಮಾತ್ರೆ.** ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನವುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ರೂ

೪. **ಪಂಚಜೀರಕ ಪಾಕ.** ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಿಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು ರಾತ್ರಿಗೆ ೨ರೂ

೫. **ಸೂರಣಾವ ಲೇಹ.** ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು ಪೌಷ್ಟಿಕವಾಗಿದೆ ರಾತ್ರಿಗೆ ೨ರೂ

೬. **ಪ್ಲೀಹೋದರಾರಿ ಚೂರ್ಣ.** ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದೆ ಗತ್ತೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ರೂ ೮ ಆಣೆ

೭. **ಜಗನ್ಮೋಹನ ದಂತಮಂಜನ** ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಖಾಯತೀ ಮಂಜನವಷ್ಟೇ ಸೊಗಸಾದ ಕಲ್ಲು ಪುಡಿ ಅನೇಕ ವನೌಷಧಗಳಿಂದ ತಯಾರಿಸಿಯದೆ ೧ ತೊಲೆಗೆ ೧೦ ಆಣೆ

೮. **ಸರಳಭೇದಿ ಮಾತ್ರೆ** ಅಜೀರ್ಣವನ್ನುಂಟುಮಾಡದ ಸುಲಭ ವಿರೇಚಕವು ತೊಲೆಗೆ ೨ರೂ

೯. **ಮಹಾಜ್ವರಾಂಕುಶ ಮಾತ್ರೆ.** ಚಳಿಜ್ವರ, ವರಿಸೆಯ ಜ್ವರ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ರೂ.

೧೦. **ವಾಸಾವ ಲೇಹ.** ಕೆಮ್ಮು, ಗುಲ್ಮಾಬ್ಜಸ, ಕಫ, ಕ್ಷಯ ಮೊದಲಾದವುಗಳಿಗೆ ರಾಮಬಾಣವು. ರಾತ್ರಿಗೆ ೨ರೂ

೧೧. **ಶಾಲ್ಮಲೀ ಪಾಕ** ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪಡಿ ಮೈಥುನ ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತ್ರಿಗೆ ೨ರೂ

೧೨ **ವಾತಮುರಾರಿ ಬಾಮ್.** ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತಭಾಧೆಗಳನ್ನೂ ಕೂಡಲೆ ಗೆಲ್ಲುವದು ಶಾಶ್ವತ ಲಆಣೆ ೩ ಬಾಟ್ಲಿಗೆ ೧ ರೂ. ೬ ಆಣೆ

೧೩ **ಗಜಕರ್ಣ ಕೇಸರಿ ಮುಲಾಮು.** ಹುಳುಕಡ್ಡಿ, ತುರಿಗಜ್ಜಿ, ಮೊಡವೆ ತಾಪ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಕಲೆಯುಳಿಯವಿಲ್ಲ. ಸುವಾಸಿಕವಾಗಿದೆ ಕರಡಿಗೆಗೆ ೪ ಆಣೆ

೧೪ **ಸುವೀರಾಂಜನ (ಸುರುಮಾ).** ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು ತೊಲೆಗೆ ೧ರೂ

೧೫ **ಪ್ರಜ್ಞಾ ಸಾರಸ್ವತ ಚೂರ್ಣ** ಉನ್ಮಾದ, ಅಪಸ್ಮಾರ, ಅಂಗವಾತ, ಬುದ್ಧಿಮಾಂದ್ಯಗಳನ್ನು ಹಂಪಡಿಸುವದು. ಸ್ಮರಣಶಕ್ತಿಯನ್ನು ಬೆಳೆಯಿಸುವದು. ನಾರಿಗೆಗೆ ಪಟುತ್ವವನ್ನು ಕೊಡುವದು ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ರೂ. ೮ ಆಣೆ

ಮೀಲಿನ ಬೆಲೆಪಟ್ಟಿಯ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗ್ ನೋಡಿರಿ ರೋಗ ಲಕ್ಷಣಗಳನ್ನು ಒದೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B M. Nath & Co, *Ayurvedic Chemists,*
Vepery Post, MADRAS.

Royal Indian Balm Depot.

ರೊಯಲ್ ಇಂಡಿಯನ್ ಬಾಮ್.

ಪ್ರಪಂಚತಪಟ್ಟು ಯು ರೋಪಿಯನ್ ರಾಷ್ಟ್ರರಂದಲೂ, ಇಂಪೀರಿಯರಿಂದಲೂ. ಪರೀಕ್ಷಿಸಲ್ಪಟ್ಟಿದ್ದಾಗಿರುತ್ತದೆ

ಇದರಿಂದ:—ವಾತ. ಸಂದಿವಾತ, ತಲೆನೋವು, ತಲೆಶಿಡಿತ, ಉಳುಕು, ಜಂಳುಕಡತ, ಜಖಮು, ಎದೆನೋವು, ಸೊಂಟದ ನೋವು, ಗಂಟಲು ನೋವು, ಆನೆಗಾಲು, ಶೀತ, ಜಜ್ಜಿದ



ಸಾಯು, ಉತ್ತಿಸಾಯು ಮುಂತಾದ ಎಲ್ಲಾ ತರದ ನೋವುಗಳು ಛಾತ್ರಿಯಿಂದ ಸಿಲ್ಲುವವು ಬಾಟ್ಲಿ ಬೆಲೆ ಕೆಮ್ಮತ್ತು ೪ ಆಣೆ

ಒಂದೇ ಸಾರಿ ೧೦೦೦ ರೂಪಾಯಿ ಔಷಧ ತರಿಸಿಕೊಂಡರೆ ಒಂದು ಎಲ್ಲು ಮಿಸಿಯಮ್ ಗ್ಲಾಸನ್ನು ಇನಾಮಾಗಿ ಕಂಪೆನಿಯಿಂದ ಮಾತ್ರವೇ ರವಾನಿಸಲ್ಪಡುವದು

ರೊಯಲ್ ಇಂಡಿಯನ್ ಬಾಂ ಎಲ್ಲಾ ಔಷಧಾಲಯಗಳಲ್ಲಿ ಮಾರಾಟಕ್ಕೆ ದೊರಕುವದು

ಗಜಕರ್ಣಾದಿ ಮುಲಾಮು.

ಎಲ್ಲಾ ತರದ ಗಜಕರ್ಣ ತುರಿಕಜ್ಜಿಯ ಮೇಲೆ ದಿವ್ಯ ಔಷಧ. ಮೂರು ಸಾರಿ ತಾಗಿಸುವದರೊಳಗೆ ಗಜಕರ್ಣ ಹೋಗುವದು. ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕನ್ನಾಗುವದಿಲ್ಲ ಬಾಟ್ಲಿ ಒಂದರ ೦-೫-೦.

ಏಳಾಸ.— ಮನೋರಾ ಕೆಂಪನಿ, ಗಿರಗಾಂ ಮುಂಬಯಿ.

ಏಜಂಟರು:— ಪರ್ಲ ಎಂಡ್ ಸನ್ಸ್, ಮಂಗಳೂರು.
ಬೇಕಲ ವೆಂಕಟ ರಾವ್, ಉಡುಪಿ.
ಬಿ. ನರಸಿಂಹ ಮಲ್ಯ ಪುತ್ತೂರು.

ಬಿ. ಎನ್. ಮಲ್ಯಾ ರಾಮ ಪ್ರಸಾದ ಔಷಧಾಲಯ. ಬಾರಕೂರು.

ಶೆಳಗಾಂ, ಧಾರವಾಡ, ಹುಬ್ಬಳಿ, ಸಾಗರ (ಮೈಸೂರು) ಕಾರವಾರ ಇತ್ಯಾದಿ ಎಲ್ಲಾ ಕಡೆಗಳಲ್ಲಿ ಯೂ ಏಜೆಂಟರು ಬೇಕಾಗಿದೆ.

ಪಂಡಿತ್ ಟಿ. ಬಾಜುರಾಯರ

ಪರಿಮಳಾಂಜನ.

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಧಾರ, ಮೈಕೈನೋವು, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು. ಜಖಮ್, ಉಳುಕು, ಹಾಯಗಳು, ಪಕ್ಷವಾತ, ಬೆನ್ನುನೋವು, ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ಸಿಲ್ಲುವವು ಡಬ್ಬಿ ೧ರ ಕ್ರಯ 0—8—0.

ಆರು ಬಾಟ್ಲಿಗಳನ್ನು ಒಂದೇ ಸಾರಿ ತರಿಸಿಕೊಂಡರೆ ೪—8—0.

ಇನ್ನೂ ಅನೇಕ ಔಷಧಗಳು ಇರುವದರಿಂದ ಬೇಕಾದವರು ಕೆಟಲಾಗಿಗೆ ಬರೆಯಿರಿ.

ವಿ ಪಿ. ಖರ್ಚು ಪ್ರತ್ಯೇಕ

ಟಿ. ಬಾಬುರಾಯರ,
ಆಯುರ್ವೇದಿಕ್ ಔಷಧಾಲಯ, ಗಾಂಧಿಮಾರ್ಕೆಟ್. ಮಂಗಳೂರು, ದ.ಕ.

ನೇತ್ರಬಿಂದು

ಇದು ಕಣ್ಣಿನ ದೃಷ್ಟಿಮಾಂದ್ಯ, ಕಣ್ಣೀರು ಸೋರುವಿಕೆ, ಕಣ್ಣಿನ ಮೂಲೆ ತುರಿಯುವಿಕೆ. ಕೆಂಗಣ್ಣು, ರೆಪ್ಪೆ ಉದುರುವಿಕೆ ಈ ಮೊದಲಾದ ರೋಗಗಳಿಗೆ ಸಿದ್ಧೌಷಧವು. ಕ್ರಯ ಬಾಟ್ಲಿಗೆ ರೂ. 0—8—0 ವಿ. ಪಿ. 0—4—0.

ಸಿದ್ಧಲಕ್ಷ್ಮೀವಿಲಾಸ—ಇದು ಒಳ್ಳೇ ರಕ್ತವನ್ನು ಮಾಡುತ್ತದೆ. ಕ್ರಯ ಬಾಟ್ಲಿ ೧ರ 0-12-0 ವಿ. 0—4—0.

ಇದು ವಿನಹ ಇಲ್ಲಿ ಅಸವಗಳೂ, ಅರಿಷ್ಟಗಳೂ, ಘೃತಗಳೂ, ಲೇಹಗಳೂ, ಚೂರ್ಣಗಳೂ, ಕ್ಷಾರಗಳೂ, ಮಾತ್ರೆಗಳೂ, ಧನ್ವಗಳೂ ವಗೈರೆ ದೊರೆಯುವವು.

ಏಳಾಸ:— ಧನ್ವಂತರಿ ಆಯುರ್ವೇದಿಕ್ ಔಷಧಾಲಯ
ಮುಲ್ಕಿ

Printed & published by V. S. Kamathi at the Mangalore Trading Association's Sharada Press, Mangalore.

ವೈದ್ಯಚಿಂತಾಮಣಿ

ಪ್ರತಿಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ — ವರ್ಷಕ್ಕೆ ರೂ 1-4 0. ಟಪ್ಪಾಲು ಹಾಸಲು ಸೇರಿರೂ 2 1 0

ಪುಸ್ತಕ 4 ಬಂಗಳೂರು, ತಾರೀಕು 30ನೇ ಶುಕ್ರವಾರ ಸೆಪ್ಟೆಂಬರ 1910 ಸಂಚಿಕೆ 39

Amrutanjan Depot Fort Bombay.

ಅಮೃತಾಂಜನ

Trade Mark Registered.

ಸಿಂದೂಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಜೀನಿಹಾರಿ ಮುಲಾಮು. ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭ್ರಾಂತಿ, ಅರ್ಧಾಂಗವಾಯು, ಸೊಂಟಪಕ್ಕೆನೋವು ಗಂಟ್ಲು ನೋವು ಜ್ವರ, ಉಳುಕು, ಘಾಸು, ಶೀತ, ಈ ಎಲ್ಲಾ ತರದ ನೋವುಗಳೂ ಪೂರ್ಣವಾಗಿ ಗುಣವಾಗುವವು. ಇದು ಸಣ್ಣ ಮಗುವಿನ ಬಳಿಗೆ ದೇಹಕ್ಕಾದರೂ ಬಾಧವಿರಹಿತವಾಗಿ ಹಚ್ಚಬಹುದು. ಇನ್ನಾಗಾಪುರ ಮಹಾ ಪ್ರವಾಸದಲ್ಲಿ ಈ ಅಮೃತಾಂಜನಕ್ಕೆ ಬಂಗಾರದ ಪದಕವು ಸಿಕ್ಕಿರುತ್ತದೆ ಅಮೃತಾಂಜನವು ಎಂಬಾಸಿ ದರ್ಬಾರ್ ಎಲ್ಲಾ ದೊಡ್ಡ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಸಿಕ್ಕುವದು. ಬಾಟ್ಲಿಗೆ ಕಿಮ್ಮತು ೧ ಆಣೆ

ದಂತಾಂಜನ

ಹಲ್ಲುಗಳಿಂದ ಬರುವ ರಕ್ತ ಸಿಲ್ಲಿಸುತ್ತದೆ ಹಲ್ಲುಗಳು ಬೆಳ್ಳಗಾಗುತ್ತವೆ. ಬಾಯಿಗೆ ಬಹಳ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ ಹಲ್ಲುಗಳು ಫಟ್ಟಿಯಾಗುತ್ತವೆ ಈ ವಿಜಿನಾನ್ನು ಒಂದು ಸಾರಿ ಪರೀಕ್ಷೆ ಮಾಡಿದಲ್ಲಿ ಇದರ ಗುಣವು ತಿಳಿಯುವದು ಡಬ್ಬಿಗೆ ಕಿಮ್ಮತು ೨ ಆಣೆ

ಕೇಶವರ್ಧಿನಿ ಎಣ್ಣೆ

ಇದನ್ನು ಕೂದಲುಗಳಿಗೆ ತಾಗಿಸುವದರಿಂದ ಕೂದಲುಗಳು ಕಪ್ಪಾಗಿಯೂ ಮೃದ್ವಾಗಿಯೂ ಬೆಳೆಯುವವು ಇದಕ್ಕೆ ಮನೋಹರವಾದ ಪರಿಮಳವು ಸಹ ಇದೆ. ಬಾಟ್ಲಿ ಒಂದರ ಕಿಮ್ಮತು ರೂ 1

ಖಿಜಿ ಮುಲಾಮು.

ಬಾಟ್ಲಿ ಒಂದರ ಕಿಮ್ಮತು 3 ಆಣೆ.

ಗಜಕರ್ಣದ ಮುಲಾಮು.

ಕಿಮ್ಮತು ಆರು ಆಣೆ ಈ ನಮೂನೆ ಪಟ್ಟಿ

ಗಜಕರ್ಣದ ಪುಡಿ.

ಇದನ್ನು ತಾಗಿಸುವದರಿಂದ ಎಲ್ಲಾ ತರದ ಜಿಜಿಯು ನಾಶವಾಗಿ ಹೋಗುವದು ಇದರಿಂದ ಉರಿಯು ಬರವದಿಲ್ಲ, ಚರ್ಮವು ಕಪ್ಪಾಗುವದಿಲ್ಲ. ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿಯುವದು ಇದನ್ನು ತಾಗಿಸುವದರ ಒಳಗೆ ಗಜಕರ್ಣವು ಹೋಗುವದು ಪಟ್ಟಿಗೆ ಕಿಮ್ಮತು 6 ಆಣೆ ಗಿಡಿಪ್ಪುಟ್ಟಿ ರೂ 4

ವಜ್ರಗುಟಿಕೆ.

ರಕ್ತಕುಷ್ಠಿ ಧಾತು ಪುಷ್ಟಿ ಸ್ವಪ್ನೇಂದ್ರಿಯ ಅಗುವದು ನಿಲ್ಲಿಸುತ್ತದೆ. ನಿಪುಣಾಕ್ತಿಯಂತರಿಗೆ ಶಕ್ತಿ ಕೊಡುತ್ತದೆ. ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ ಇದರಲ್ಲಿ ಜೆಮೆಯಿನ ಕೆಂಪು, ಲೆಸೆತಿನ್ ಎಂಬ ಧಾತು ಪುಷ್ಟಿ ಔಷಧಗಳಿವೆ. ೨೦ ಗುಟಿಕೆಗಳ ಡಬ್ಬಿಗೆ ಕಿಮ್ಮತು ರೂ 1.

ಸುಂದರ ತೈಲ.

ಇದನ್ನು ಮೋರೆಗೆ ತಾಗಿಸುವದರಿಂದ ಮುದ್ದಣಗಳೂ ಕಪ್ಪು ಕಲೆಗಳೂ ಹೋಗಿ ಮೃದುವಾದ ಮತ್ತು ಮನೋಹರವಾದ ಕಾಂತಿಯು ಬರುವದು ಬಾಟ್ಲಿ ಒಂದರ ಕಿಮ್ಮತು 8 ಆಣೆ.

ಜುಲಾಬು ಮಾತ್ರೆ.

ಬಾಟ್ಲಿ ಒಂದರ ಕಿಮ್ಮತು 8 ಆಣೆ.

ವಿಳಾಸ:—ಅಮೃತಾಂಜನ ಡಿಪೊ, ಕೋಟ್, ಮುಂಬಯಿ.

ಟೆಲಿಗ್ರಾಫ್ ಎಡ್ರೆಸು:—"ಅಮೃತಾಂಜನ್", ಮುಂಬಯಿ

[illegible] ಎಂಬ ಗ್ರಂಥವು ಇನ್ನು ಸದ್ಯದಲ್ಲಿಯೇ ಪ್ರಕಟವಾಗುವುದೆಂಬುದನ್ನು ಸ್ವದೇಶಾಭಿಮಾನಿಯ ವಾಚಕರೆಲ್ಲರಿಗೂ

ತಿಳಿಯಬೇಕಾಗಿರುವುದು.

ಕನ್ನಡಭಾಷೆ ಗೊತ್ತಿರುವವರ್ಯಾರಾದರೂ ತಮ್ಮ ಹೆಸರು ಮತ್ತು ವಿಳಾಸವನ್ನು ಕಳುಹಿಸಿಕೊಟ್ಟಲ್ಲಿ ಟಪ್ಪಾಲು ಖರ್ಚು ಹಾಸಲು ಇದೆ ಸಹಾ ಗ್ರಂಥವನ್ನು ಉಚಿತವಾಗಿ ಪಡಿಯುಬಹುದು. ಶ್ಲೇಷು ಭಾಷೆಯಲ್ಲಿ ಹೆಸರು ಮತ್ತು ವಿಳಾಸಗಳನ್ನು ಕಳುಹಿಸುವಾಗ ತಮ್ಮ ಸ್ನೇಹಿತರ ಯಾ ಸೆಂಟರಿಷ್ಟರ ಪೈಕಿ 10 ಜನರ ಹೆಸರು ಮತ್ತು ವಿಳಾಸಗಳನ್ನು ಒರೆದು ಕಳುಹಿಸತಕ್ಕದ್ದು.

ಅತೀ ಉತ್ತಮವಾದ ನ್ಲೂಬ್ಲೇಕ್ ರಾಯಿಯ ಪೆನ್ಸಿಲು.

ಇತರ ಎಲ್ಲಾ ಶಾಯಿಯ ಪೆನ್ಸಿಗಿಂತಲೂ ಇದು ಬಹಳ ಉತ್ಕೃಷ್ಟವಾದದ್ದು

ಒಂದು ಪೊಟ್ಟಣಕ್ಕೆ 4 ಪೈ.

ಈ ಶಾಯಿಯ ಪುಡಿಯನ್ನು ೬ ರೂಪಾಯಿ ನೀರಿನಲ್ಲಿ ಕಲಸಿದೊಡನೆ ಈ ಶಾಯಿಯು ದೊರಕುವದು. ಇದರಿಂದ ಒರಟರೆ ಲೋಪದ ಪೇನಿನ್ಸಿಗೆ ತುಕ್ಕು ಹಿಡಿಯದು. ಪೇನಿನಲ್ಲಿ ಶಾಯಿಯು ಬಹಳ ಸೊಗಸಾಗಿ ಪರಿಯುವದು. ಈ ಶಾಯಿಯ ಪುಡಿಯಲ್ಲಿ ಬ್ಲೂಬ್ಲೇಕ್, ಕೆಂಪು, ಪಚ್ಚೆ, ದೂಮ್ರವರ್ಣ ಇನ್ನೇ ನೋಡಲಾದವುಗಳು ಇರುವವು

ಹಲವು ಪ್ರದರ್ಶನಗಳಲ್ಲಿ ಈ ಶಾಯಿಯ ಪುಡಿಯು ಬೆಳ್ಳಿ ಪದಕಗಳನ್ನೂ, ಯೋಗ್ಯತಾಪತ್ರಗಳನ್ನೂ ಹೊಂದಿಯದೆ.

ಒಂದೇ ಸಾರಿ 100 ಪೊಟ್ಟಣಗಳಿಗಿಂತ ಜಾಸ್ತಿ ಕಾರ್ಡರ್ ಕೊಟ್ಟಲ್ಲಿ ಪೈಸೆಗೆ ಒಂದನ್ನು ತೆಗೆದುಕೊಂಡಲೆ ಟಪ್ಪಾಲು ಖರ್ಚು ಸಹಾ ರೂ ೧—೪—೦

ಟಿ. ಎನ್. ಸುಬ್ರಮಣ್ಯಮಂ ಎಂಡ್ ಕೋ.
೩೭ ಅರ್ಮೇನಿಯನ್ ರಸ್ತೆ, ಮದ್ರಾಸು

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತ್ತರ ವ ದಕ್ಷಿಣಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪೂರ್ಣಪರಿಚಯವಿದ್ದಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಏಜೆನ್ಸಿ ಮೂಲಕ ರವಾನಿಸಲ್ಪಡುವಿಕೆಯಿಂದ ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅಥವಾ ನೇರವಾಗಿ ಪತ್ರವ್ಯವಹಾರ ಮಾಡಿದಲ್ಲಿ ಶೀಘ್ರವಾಗಿ ಉತ್ತರಿಸಲ್ಪಡುವದು ಶಾಶ್ವತವಾಗಿರುತ್ತದೆ

ವಿಳಾಸ — ರಂಗಪ್ಪಾ ರಾಮಕೃಷ್ಣ ಕವಿ
ಮನೋಹರ ಬಿಲ್ಡಿಂಗ್ ಲವಾಣಾಲ್, ಮುಂಬಯಿ

ಕವಿ ಎಂಡ್ ಸನ್ಸ್ ಜನರಲ್ ಮರ್ಚೆಂಟ್ಸ್,

ಮಂಗಳೂರು, ನ ಕ.

ನಮ್ಮಲ್ಲಿ ಎಲ್ಲಾ ತರದ ಚೀಟು ಬಟ್ಟೆ ಪಕೋಟಿಂಗ್, ಸೀರೆಗಳು, ಕಪ್ಪಿನ, ಗ್ಲಾಸ ಸಾಮಾನು, ಬಯಲ್‌ಸೀಮೆ ಸ್ಟೋರ್ಸ್ ಮುಂತಾದ ಅನೇಕ ಸಾಮಾನುಗಳೂ ವಿಳಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮಂಗಳಾಲ್ಕೆ ಅವಶ್ಯವಾಗಿವೆ ಬೇಕಾಗಿವೆ, ಎಲ್ಲಾ ಜಾತಿಯ ಕೊಡೆಗಳು ದಪ್ಪ ಬಗೆಯೂ ಚಿಲ್ಲರೆಯಾಗಿಯೂ ಕಮ್ಮಿ ಸುಂಕಾಳಿ ಮುಂದೆ ಮಾರುತ್ತೇವೆ. ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಶೀಘ್ರವಾಗಿ ಉತ್ತರಿಸಲ್ಪಡುವದು

ನವೀನ ಶೃಂಗಾರ ಪ್ರೇಮ ಸಂಕಸಪ್ತತಿ ಕಥೆ.

ನೀವು? ಶೃಂಗಾರ ಮತ್ತು ಚಮತ್ಕಾರವಾಗಿರುವ ಕಥೆಯನ್ನು ಓದಲೇಕಾಗಿ ಅಭಿಲಾಷೆ ಇದ್ದರೆ ಮೇಲ್ಕಂಡ ಕಥೆಗೆ ಸಮಾನವಾದ ಕಥೆ ಯಾವದೂ ಇಲ್ಲ ಕೃಯ ಹಾಸಲ್ ಸಹಾ ೧೦ ಆಣೆ

ಮತ್ತು ನಮ್ಮಲ್ಲಿ ಕನ್ನಡ, ತೆಲುಗು, ಸಂಸ್ಕೃತ ಪುಸ್ತಕಗಳು ಪರಮಾಯದ ಊದಬತ್ತಿಗಳು, ಹಸಿಗಂಧ. ಹಸಿ ಬಿಲ್ಲೆಗಳು, ಪನ್ನೀರು, ತರಹೆವಾರಿ, ಜನಿವಾರ ಸಹಾ ದೊರೆಯುವದು ಅಲ್ಲದೆ, ಇತರ ಯಾವ ಪದಾರ್ಥಗಳು ಬೇಕಾದರೂ ನಂಬಿಕೆಯಿಂದ ಕಮಿಷನಿಗೆ ರವಾನೆ ಮಾಡುವೆವು. ಹಿಂದಾವರ್ತಿ ತರಿಸಿ ನೋಡಿದರೆ ಗೊತ್ತಾಗುತ್ತೆ. ನಮ್ಮ ಕಂಪೆನಿ ಕೆಟಲಾಗ್ ಉಪಕಾರ್ತಾಗಿ ದೊರೆಯುವದು.

ಕೆ. ಎನ್. ಶ್ರೀನಿವಾಸ ಶೆಟ್ಟಿ, ಬುಕ್‌ಡಿಪೊ,
ಚಿಕ್ಕಪೇಟೆ, ದೇವಗೊರು ಸಿಟಿ.

ಲ್ಯಾಫ್ ಎಶ್ಯೂರೆನ್ಸ್ ಕಂಪನಿ

ಲಿಮಿಟೆಡ್.

ಆಫೀಸು. ವಿಶಾಖಪಟ್ಟಣ, ಮತ್ತು ಮದ್ರಾಸು

ಟ್ರಸ್ಟೀಸ್:— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಆನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೆಗಿನ ಮೊಬಲಗುಗಳಿಗೆ ಜೀವ ವಿಮೇ ಆತಿ ಕಮ್ಮಿಯಾದರೂ ಬೆದ್ರವಾದ ವಿಮೇ ದರಗಳಲ್ಲಿ ಉತ್ತರಾಯಿನ್ನು ಬ್ಯಸ್ಸುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಪೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಿಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿ ಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸಿ ಒಕ್ಕುದು.

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಶೇಷ ಸೂಚನೆ.—ಪ್ರಖ್ಯಾತಿಗೊಂಡ ಶ್ರೀಕೃಷ್ಣಬ್ರದರ್ಸರವರ ನಾನಾ ತರದ ದೃಷ್ಟಿ ಚಕ್ರಗಳನ್ನು ಅಲ್ಪ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಡಲಾದೀತು.

ಎಲ್ಲೂರು ರಾಮರಾವ್, ಜನರಲ್ ಏಜಂಟ್, ಮಂಗಳೂರು, ದ. ಕನ್ನಡ.

ಒಳ್ಳೆಯ ಮಾನ! ಒಳ್ಳೆಯ ಮಾನ! ಒಳ್ಳೆಯ ಮಾನ!

THE KALA-NIDHI MANGALORE,

(ಪೊಟ್ಟಣ 1 ಕ್ಕೆ 3 ಪೈ)

ಬರುವ ದಶಂಬರ ತಿಂಗಳ ವರೆಗೆ ಮಾತ್ರ ೪ ರೂಪಾಯಿಗಳ ಶಾಯಿ ಪೊಟ್ಟಣಗಳನ್ನು ತೆಗದುಕೊಳ್ಳುವವರಿಗೆ ಓವನ್ ಫೇನ್ ನಿಕ್ಕಲ್ ಸಿಲ್ವರ್ ರಾ ಸ್ಕೋಪ್ ಕೀಲಿನ್ ಪೆಡಿಯಾರವು.

ಈ ಶಾಯಿಯಿಂದ ಬರೆದ ಪೇಪರಿಗೆ ತುಕ್ಕು ಹಿಡಿಯದು. ಶಾಯಿಯು ಮೇಲ್ಮಡೆ ಬೂಜು ಸಲಾ. ಬರೆಯುವಾಗ ಸೀಸ ಬಿದ್ದಲ್ಲಿದ್ದು ಅಳಿಸಿಹೋಗಿ ಅತಿ ಕಪ್ಪಾಗುವದು.

ಬಹುಮಾನಗಳ ವಿವರ ೪ ರೂಪಾಯಿ ಪೊಟ್ಟಣಗಳನ್ನು ತೆಗೆದುಕೊಳ್ಳುವವರಿಗೆ ಸುಗಂಧ ದಂತ [illegible] ಪೊಟ್ಟಣಗಳನ್ನು ತೆಗೆದುಕೊಳ್ಳುವವರಿಗೆ ಜೋಸ್ ಫೇಬರ್ ಪೆನ್ಸಿಲ್ ಡಜನ್ ೧; [illegible] ಪೊಟ್ಟಣಗಳನ್ನು ಒಡನೆ ತೆಗೆದುಕೊಳ್ಳುವವರಿಗೆ ಉತ್ತಮವಾದ ಒನಿಯನ್ ೧; ೫ ರೂಪಾಯಿ ಪೊಟ್ಟಣಗಳನ್ನು ತೆಗೆದುಕೊಳ್ಳುವವರಿಗೆ [illegible] ಕೀಲಿನ ಪೆನ್ಸಿಲ್ ೧, ೪ ರೂಪಾಯಿಗಳನ್ನು ತೆಗೆದುಕೊಳ್ಳುವವರಿಗೆ [illegible] ನಿಕ್ಕಲ್ ಸಿಲ್ವರ್ ಸ್ಕೋಪ್ ಕೀಲಿನ ಪೆಡಿಯಾರವು ಗ್ಲಾಸ್ [illegible]

[illegible] ಪೊಟ್ಟಣಕ್ಕೆ ಆಣೆ ೮ ಪಣ್ಣದಕ್ಕೆ ಆಣೆ ೪. ಶಾಯಿಯು [illegible] ಸಿಕ್ಕುವದು ಪರ್ಸ್ಥಳದವರಿಗೆ ಪಿ. ಪಿ. ಬಾರ್ಜು ಪ್ರತ್ಯೇಕ.

ವಿಳಾಸ — ಕಲಾನಿಧಿ. ಮಂಗಳೂರು.

ಅಥವಾ ದಿ ಊಲನ್ ಮಾರ್ಟ್ ನಂಬ್ರ ೧ ಮಂಗಳೂರು (ದ. ಕ)

ಔಷಧಸಾಯಿ ಸಾಬೂನು.

ಈ ಸಾಬೂನು ಕೂದಲು ಬೆಳೆದಿರುವ ಸಕಲ ಸ್ಥಳಗಳಲ್ಲಿ ಚರ್ಮಕ್ಕೆ ಯಾವ ತರದ ತೊಂದರೆಯಾದರೆ ೫ ನಿಮಿಷದಲ್ಲೇ ಕೂದಲು ಉದುರಿ ಹೋಗುವದಲ್ಲದೆ, ಹಚ್ಚಿದ ಭಾಗವು ತಳ ತಳಿಸಿ ಮೃದುವಾಗುವದು. ಇಂದೇ ಕೊಂಡು ಪರೀಕ್ಷಿಸಿರಿ.

ಕ್ರಯ ಪೆಟ್ಟಿಗೆ ೧ಕ್ಕೆ ೦—೬—೦, ಪೋಸ್ಟಾಲು ಖರ್ಚು ಒಂದರಿಂದ್ದು ಪೆಟ್ಟಿಗೆ ವರೆಗೆ ೦—೪—೦

ವಿಳಾಸ:— ದಿ. ಊಲನ್ ಮಾರ್ಟ್,
ಅಸ್ಪತ್ರೆ ಎದುರು,
ಮಂಗಳೂರು.

ಸದೇಶಾಭಿಮಾನಿ.

ಮಂಗಳೂರು. ಶುಕ್ರವಾರ ತಾರೀಕು 30ನೇ ಸಪ್ಟಂಬರ 1910.

ವ್ಯವಸಾಯದ ವ್ಯವಸ್ಥಾ ಏರ್ಪಾಡುಗಳು.

ಭೂ ಸಾಗುವಳಿ ಮಾಡುವ ರೈತರಿಗೆ ಕೈಗಾರಿಕೆ ಕಾರಖಾನೆಗಳಿಗೆ ಬೇಕಾದ "ಕಚ್ಚಾ" ಸಾಮಾಗ್ರಿಗಳು ಬಿದಗಲ್ಪಡುವದೇಕು. ಈ ಸಾಮಾಗ್ರಿಗಳು ಮುಖ್ಯವಾಗಿ ದೇಶದಲ್ಲಿ ದೊರಕಿದರೆನೇ ಕೈಗಾರಿಕೆಯು ಜೀವಸಾರ್ಥಕ ಕಲಾ ಗಬಹುದು ಸಾಕಾದಷ್ಟು ಹತ್ತಿಯು ದೊರಕಿಸಿದೇ ಹತ್ತಿ ಕಾರಖಾನೆಗಳು ಕೆಲಸ ಸಾಗುವುದು ಕಬ್ಬು ಬೆಳೆ ಇಲ್ಲದಿದ್ದರೆ ಸಕ್ಕರೆ ಕಾರಖಾನೆಗಳು ಮಾತಿರುವುದೇ? ಅಗಿದಿಗೆ ಬೇಕಾದ ಆಹಾರ ಸಂಗ್ರಹವೂ ಸಹಾ ರೈತರಿಂದಲೇ ತಯ್ಯಾರಾಗುವುದು ರೈತರ ಏರಿಪತ್ತಿ ವು ಇಷ್ಟರಲ್ಲಿ ಮುಗಿಯದು. ಬನಸುಬೈಯು ಪ್ರಧಾನವು ರೈತರೇ ಆಗಿದ್ದು ಕೈಗಾರಿಕೆ ಕಾರಖಾನೆಗಳಲ್ಲಿ ತಯ್ಯಾರುಮಾಡಲ್ಪಟ್ಟ ಸಾಮಾಗ್ರಿಗಳಲ್ಲಾ ಸಕಕ್ಕೂ ಜನರೇ ಮುಖ್ಯ ವಾದ ಗಿರಾಕಿಗಳಾಗಿರುವರು ಸರಕಾರದವು ರಿಗಾಗು ಮುಂಬೈ ಮೂಲಪ್ಪ ಸಹಾ ಭೂಕಂದಾಯವೇ ಆಗಿರುವುದು. ಈ ವಿಷಯಗಳಿಂದ ರೈತರ ಏಪಾ ವ್ಯವಸಾಯ ಅಭಿವೃದ್ಧಿಯು ದೇಶದ ಎಲ್ಲಾ ಬಗೆಯ ಉದ್ಯೋಗಗಳಿಗೆ ಕಾರಣವಾಗಿರುವುದೆಂಬ ದನ್ನು ತಿಳಿಕೊಳ್ಳಬಹುದು ದೇಶೋದ್ಧಾರಕ್ಕೆ ಶ್ರಮಿಸುವವರೆಲ್ಲರೂ ಈಗ ಬಹಳ ದೀನಸ್ಥಿತಿಯಲ್ಲಿರುವ ಹೊಲೆ ತುಂಬ ಉಗ್ರಾಣಿಕ್ಕಿಂತ ಬೆಳೆ ಕಾಳಾವ ರೈತರಿಗೆ ಕೈ ನೀಡಿ ಅವರಲ್ಲಿ ಸಾಮಾನ್ಯ ಶಿಕ್ಷಣವೂ ವ್ಯವಸಾಯ ವಿಷಯವಾಗಿ ವಿಶೇಷ ಜ್ಞಾನವೂ ಬರುವಂತೆ ಪ್ರಯತ್ನಪಟ್ಟರೆ, ಅಂದಾ ಪ್ರಯತ್ನಗಳಿಂದ ಜಾರಕಸಾಧ್ಯ ಸುಲಭ ಕೃಷ್ಟಾಗಿ ದೇಶವು ಸಮೃದ್ಧಿಗೊಳ್ಳುವುದು

ರೈತನಿಗೆ ಶಿಕ್ಷಣವು ಬೇಕಾಗಿರುವದೆಂಬ ಭಾವನೆ ಪ್ರತಿಯನ್ನೂ ಮಾತಾಲಾರದ ಮೂಢಮತಿಯು ವ್ಯವಸಾಯ ವೃತ್ತಿಯನ್ನು ಎಲೆಲಂಬಿಸುವುದೆಂಬ ಮೊದಿನ ಪ್ರಶ್ನೆಗೆ ಅವಕಾಶ ಕೊಡಕಿರುವುದು. ರೈತರಿ ಪ್ರಾತ್ಯಕ್ಷಿಕ ಪೂರ್ಣ ಕೃಷಿಯ ವ್ಯವಸಾಯ ವೃತ್ತಿಗೆ ಅಗತ್ಯವಾಗಿ ಬೇಕಾದ್ಯವೆಂಬುದನ್ನು ಪ್ರಾಮಾಣಿಸುವುದು ಮಕ್ಕು ಬಿತ್ತುವುದು ಇಷ್ಟರಲ್ಲಿಯೆ ವ್ಯವಸಾಯದಲ್ಲಿ ಮತ್ತಾವ ವಿಷಯವೂ ಇಲ್ಲವೆಂಬ ನಮ್ಮ ನಿರಕ್ಷರಕುಕ್ಷಿಗಳ ಭಾವನೆಯು ತಿಳಿದಲ್ಲಿ ಇಂಗ್ಲಿಷ್ ಮೊದಲಾದ ದೇಶಗಳಲ್ಲಿ ವ್ಯವಸಾಯವು ಶಾಸ್ತ್ರಜ್ಞಾ ಮಾಹಿತಿಯನ್ನು ಕಲ್ಪಿಸುವ ರೈತರ ಹ್ಯಾಗೆ ಸಂಪನ್ನರಾಗಿರುವರೆಂಬ ಇವಿಗೆ ಕೆತ್ತಿರಾ ಸರ್ವಸಮ್ಮತಕಾಲಕ್ಕೆ ಲಿಖಿತ ಪಡಿಸಿ ಪ್ರಯತ್ನವಿಲ್ಲದೆ ನಿಲ್ಲ ತಿಕರಾ ನಮ್ಮ ರೈತರಿ ಸ್ಥಿತಿಯು ಶೋಚನೀಯವಾಗಿರುವುದು

ಬ್ರಿಟನ್ ದೇಶದ ಅಭಿವೃದ್ಧಿಗೆ ಅದರ ವ್ಯಾಪಾರವೂ, ಇತರ ಕೈಗಾರಿಕೆಗಳೂ, ಮುಖ್ಯ ಕಾರಣವಾಗಿದ್ದರೂ ಆ ದೇಶದ ಸಹಾ ಜಮೀನ್ದಾರರ ಒಳ್ಳಿತನ್ನು ಪ್ರಜೆಗಳೂ ಸರಕಾರದವರೂ ಬಹಳ ಉತ್ಸಾಹವಾಗಿ ಅಂತಿಗಳ್ಳಿ ಪರಸ್ಪರ ಸಹಕಾರದಿಂದ ಸಾಧಿಸುತ್ತಿರುವರು. ಕಳೆದ ಶತಮಾನದ ಅಂತ್ಯಭಾಗದಲ್ಲಿ ಬ್ರಿಟಿಷ ಜನರು ಬಹಳ ಖಿನ್ನವಾದ ಸ್ಥಿತಿಯಲ್ಲಿದ್ದರು ಆ ಶಾಸ್ತ್ರೋಕ್ತ ವಿಧಾನಗಳ ವ್ಯವಸಾಯ ಮಾಡಿ ತಿಯ್ಯು ಜನರಿಗಿರಲಿಲ್ಲ ಅನ್ಯ ದೇಶಗಳಿಂದ ಧಾನ್ಯಗಳನ್ನು ಕಡಿಮೆ ಮಾತಕೂತ ದೆಂದು ನಿರ್ಬಂಧಿಸುವ ಕಾನೂನು ಬ್ಯಾರಿಯಲ್ಲಿತ್ತು. ಬಡ ಸಂಖ್ಯೆಯು ದೇಶದಲ್ಲಿ ಏರುತ್ತಿದ್ದದರಿಂದ ಗೋಧಿಯ ಧಾರಣೆಯು ಬಹಳ ವಿಪರೀತವಾಯಿತು ಜನರಲ್ಲಿ ಸರ್ವಸಾಧಾರಣರೆಲ್ಲರಿಗೂ ಇದರಿಂದ ಬಹಳ ಸಂಕಟ ಪ್ರಾಪ್ತವಾಯಿತು. ಕೈಗಾರಿಕೆಯು ಅಭಿವೃದ್ಧಿ ಹೊಂದಿ ಕೈಗಾರಿಕೆಗಳ ಭಂಡಸಾಲೆಗಳ ಮಾಲಿಕರಿಗೆ ವಿಶೇಷ ಲಾಭವು ದೊರಕಿದರೂ ಸಾಧಾರಣ ಜನರ ಸ್ಥಿತಿಯು ಒಳ್ಳಿತಾಗಲಿಲ್ಲ. ಪ್ರಜೆಗಳ ಈ ಸಂಕಟ ಪರಿಸ್ಥಿತಿಯನ್ನು ನಿವಾರಿಸುವರೆ ರಾಜನೀತಿ ವಿಕಾರದರೂ ಭೌತಿಕ ಮತ್ತು ರಸಾಯನ ಶಾಸ್ತ್ರ ಪ್ರಯತ್ನಪಟ್ಟು, ನವೀನವಾದ ವ್ಯವಸಾಯ ವಿಧಾನಗಳನ್ನು ಶೋಧಿಸಿ ದರು. ಬ್ರಿಟಿಷ ಸರಕಾರದವರು ತಮ್ಮ ದೇಶದಲ್ಲಿ ವ್ಯವಸಾಯ ಶಿಕ್ಷಣವನ್ನು ಏರ್ಪಡಿಸಿ ವ್ಯವಸಾಯ ಶಾಲೆಗಳಿಗೆ ಸರಕಾರದವರಿಂದ ವಿಶೇಷ ದ್ರವ್ಯ ಸಹಾಯವು ದೊರಕಿಸಿ ಕೊಟ್ಟರು. ವ್ಯವಸಾಯ ಶಾಸ್ತ್ರಜ್ಞರ ಸಂಘ ಯೊಂದು ಬೋರ್ಡುಗಳು ಸರಕಾರದವರಿಂದ ಸ್ಥಾಪಿಸಲ್ಪಟ್ಟವು. ಈ ಬೋರ್ಡಿನ ಉಪಶಾಖೆಗಳ ಮುಖೇನ ಧೇಶದಲ್ಲೆಲ್ಲಾ ಒಂದೇ ವ್ಯವಸಾಯ ಕ್ರಮದ ಮಾಹಿತಿಯನ್ನು ಪಸರಿಸುವುದಕ್ಕೂ ರೈತರ ಸಾಗುವಳಿಗಳಲ್ಲಿ ಪ್ರಯೋಗ ನಡಿಸಲಿಕ್ಕೂ ಉಪಾಯವಾಯಿತು. ಜನರೂ ಸಹ ಸುಮ್ಮನಿರಲಿಲ್ಲ. ವ್ಯವಸಾಯ ಶಾಲೆಗಳನ್ನೂ, ಕಾಲೇಜುಗಳನ್ನೂ, ಸ್ಥಾಪಿಸಿದ್ದಲ್ಲದೆ ಜಿಲ್ಲಾ ಮೂಲಾದ್ಯ ಸಂಘಗಳನ್ನು ಸಹಾ ಏರ್ಪಡಿಸಿದರು ಈ ರೀತಿ ಸರಕಾರದವರೂ ಪ್ರಜೆಗಳೂ ಶ್ರಮ ತೆ ಮಾ ಕ್ಷಪಟ್ಟು, ಇದೂ ಕತಮಾನದಲ್ಲಿಯೇ ವ್ಯವಸಾಯ ಶಿಕ್ಷಣವನ್ನು ಇತರ ಶಿಕ್ಷಣಾದ ತಕ್ಕಗತಿಗೆ ತಂದು ದೇಶವನ್ನುದ್ಧರಿಸಿದರು ತಿರುವು

ಈ ಸೆಂದಜೆಗಳಲ್ಲಿ ಬ್ರಿಟಿಷ ವ್ಯವಸಾಯ ಶಿಕ್ಷಣವು ಹ್ಯಾಗೆ ಬೇಗನೇ ಫಲಕಾರಿಯಾಯಿತೆಂಬುದನ್ನು ತಿಳಿಯುವುದುಪಯುಕ್ತ ವ್ಯವಸಾಯಕ್ಕೆ ಸಮ್ಬಂಧಪಟ್ಟ ರಸಾಯನ ಶಾಸ್ತ್ರ, ವನಸ್ಪತಿ ವಿದ್ಯೆ ಮೊದಲಾದ ಮಾಹಿತಿಯನ್ನು ರೈತ ವಿದ್ಯಾರ್ಥಿಗಳಿಗೆ ಕೊಡುವ ಹೊರತು ಈ ವಿದ್ಯಾರ್ಥಿಗಳು ಸಾಮಾನ್ಯ ಶಿಕ್ಷಣವನ್ನು ಪಡಿಯಬೇಕಾಗಿರುವುದು. ಈ ಬಗ್ಗೆ ಮೂಲಶಿಕ್ಷಣವನ್ನು ಪ್ರಜೆಗಳೆಲ್ಲರೂ ಪಡಿಯುವಂತೆ ಅದನ್ನು ಕಡ್ಡಾಯವಾಗಿ ಮಾಡಿದರು ಶಿಕ್ಷಣವು ರೈತರೆಲ್ಲರಿಗೆ ದೊರಿಯುವಂತೆ ಅಲ್ಲಲ್ಲಿ ಶಾಲೆಗಳನ್ನು ಸ್ಥಾಪಿಸಿ, ವಿದ್ಯಾರ್ಥಿ ವೇತನಗಳನ್ನಿಟ್ಟು ಹುಡುಗರನ್ನು ಶಾಲೆಗೆ ಬರಮಾಡಿಕೊಂಡರು. ಸೆಕಂಡರಿ ಶಾಲೆಗಳಲ್ಲಿ ಇತರ ವಿಷಯಗಳೊಡಿಗೆ ರಸಾಯನ ಶಾಸ್ತ್ರ ವನಸ್ಪತಿ ವಿದ್ಯೆ ಮೊದಲಾದವುಗಳ ಅಭ್ಯಾಸಕ್ರಮವನ್ನು ಕೊಡುವ ಏರ್ಪಾಡಾಯಿತು. ಈ ಶಾಲೆಗಳಲ್ಲಿ ವ್ಯವಸಾಯ ಶಾಸ್ತ್ರಜ್ಞರಿಂದ ಉಪಾಧ್ಯಾಯರಾಗುವುದಿಲ್ಲ ವಿದ್ಯಾರ್ಥಿಗಳು ಸೆಕಂಡರಿ ಶಾಲೆಗಳಲ್ಲಿ ಅಭ್ಯಾಸವನ್ನು ಕಮ್ಮಿ ಪಡಿದಾಗಲೇ ಅಥವಾ ಪಡಿಸೇಕಿನೇ ವಯಸ್ಸಿನಲ್ಲಿ ಹಿಂದು ಬಂದೆರಲು ಸರಕಾರಗಳ ಕನಕೃಷಿಸಂಬಂಧ ಕಾವ ಮಾಹಿತಿ ಬಗ್ಗೆ ಗದ್ದೆಗಳಲ್ಲಿ ಕೆಲಸ ನೋಡುವರು ಸಂತರ ವ್ಯವಸಾಯ ಶಾಲೆ ಅಥವಾ ಕಾಲೇಜಿನಲ್ಲಿ ರೈತರಿಗೆ ಬೇಕಾದ ತರಬೇತಿಯನ್ನು ಪಡಿಯುವರು. ಹೀಗೆ ಕಾರ್ಯ ಮಾಹಿತಿಯೂ ಇವರಿಗೆ ಪ್ರಾಪ್ತವಾದ ಮೇಲೆ ಅವರು ತಮ್ಮ ತಂದೆಯ ತಿಕಾಲದಲ್ಲಿ ತಮಗೆ ಬೇಕಾದಷ್ಟರ ಸರ್ವ ಮಾಹಿತಿಯನ್ನು ಪಡಿಯಲು ಅನುಕೂಲಗಳಾಗುವರು. ಅಂಗ್ಲಾಳರಲ್ಲಿ ಹೀಗೆ ವ್ಯವಸಾಯ ಶಿಕ್ಷಣಕ್ಕೆ ಬೇಕಾದ ಸೌಕರ್ಯವಿದ್ದರೂ ರೈತರಲ್ಲಿ ವಿದ್ಯೆಯನ್ನು ಪಡಿಯುವುದು ಎನಸುಕಾಲವಾದ್ದರಿಂದ ಅಕ್ಷರ ಪಡಿಯುವಷ್ಟು ರೈತರ ಬಗ್ಗೆ ಸಾಮಾನ್ಯಕಾಲದ ಸಮಯದಲ್ಲಿ ಬೇಕಾದ ಅನುಭವವನ್ನು ಕಲಿಸಿಕೊಡುತ್ತಿರುವ ಏರ್ಪಾಡುಗಳು ಈ ರೀತಿಯಿಂದ ವ್ಯವಸಾಯ ವಿಷಯವಾಗಿ ಮಾತ್ರವಲ್ಲ. ಬಿಡಿಗ ಕೆಲಸ, ಕಛ್ಚಿಗ ಕೆಲಸ ವ್ಯವಸಾಯ ಯಂತ್ರಮಾಹಿತಿ ಮೊದಲಾದ ಇತರ ವಿಷಯಗಳಲ್ಲಿ ಸಹಾ ಸಾರ್ವಜನಿಕರಿಗೆ ಕೊಡುತ್ತಾರೆ ಹೀಗೆ ಬ್ರಿಟಿಷ ರೈತನು ಸಾಮಾನ್ಯನಿಗೆ ಅಕ್ಕರೆಯ ಕಮ್ಮಾರ ಕೆಲಸ, ಕಲ್ಲುಕುಟಿಗರ ಕೆಲಸ ಮೊದಲಾದವುಗಳನ್ನು ಮಾತಾಡಬಲ್ಲನು. ಭಾರತೀಯ ರೈತನಿಗೆ ಇವಿಲ್ಲವೂ ತಿಳಿಯದ ವಿಷಯ ಗಳು ಸೆಗಿಲ ಮೊಸೆಯು ಮುರಿದರೆ ಧಾರತೀಯನು ಕಮ್ಮಾರನು ಸಿಕ್ಕುವ ವರೆಗೆ ಸುಮ್ಮನಿರಬೇಕಾಗಿರುವುದು ಪ್ರತಿಷ್ಟ ರೈತನಿಗೆ ಸರ್ವ ಮಾಹಿತಿಯೂ ಇರುವುದು.

ಅಂಗ್ಲಾಳರಲ್ಲಿ ಮೇಲೆ ನಮೂದಿಸಿದಂತಹ ವ್ಯವಸಾಯ ಶಿಕ್ಷಣ ಪಸರಣೆಯ ಏರ್ಪಾಡುಗಳಿಲ್ಲದೆ ಇನ್ನೂ ಹಲವು ಏರ್ಪಾಡುಗಳಿಗೆ ಅಲ್ಲಲ್ಲಿ ಮಾದರಿ ಹೊಲಗಳೂ ಪರೀಕ್ಷಾರ್ಥವಾಗಿ ಏರ್ಪಡಿಸಿದ ವ್ಯವಸಾಯ ರಾಜ್ಯಗಳೂ, ವ್ಯವಸಾಯ ಪ್ರದರ್ಶನಗಳೂ, ವ್ಯವಸಾಯ ವಿಷಯಗಳಿಗಾಗಿಯೇ ಪ್ರಕಟಿಸಲ್ಪಡುವ ವರ್ತಮಾನ ಪತ್ರಗಳೂ ಮೊದಲಾದವುಗಳಿರುವವು. ಪರೀಕ್ಷಾರ್ಥ ರಾಜ್ಯಗಳಲ್ಲಿಯೂ ಮಾದರಿ ಹೊಲಗಳ ಸಹಿತ ಅಲ್ಲಲ್ಲಿಯೂ ಅಲ್ಲಲ್ಲಿ ಶೋಧನಾಲಯಗಳೂ ಶಾಸ್ತ್ರ ಪಂಡಿತರೂ ಜನರಿಗೆ ಅನುಭವ ಕೊಡುವ ಒಳ್ಳೆ ಸಿದ್ಧವಿರುವರು ರೈತರು ಹಣ ಸಾಲಕೊಡುವವರಿಂದ ವಿಪರೀತ ಬಡ್ಡಿಗೆ ಹಣ ಪಡಿಯದಂತೆ ಅಲ್ಲಲ್ಲಿ ವ್ಯವಸಾಯ ಬ್ಯಾಂಕು ಮೊದಲಾದವುಗಳಿರುವವು.

ಹೀಗೆ ವ್ಯವಸಾಯ ಅಭಿವೃದ್ಧಿಗೆ ಮುಖ್ಯವಾದ ಏರ್ಪಾಡುಗಳು ಯಾವವೆಂಬುದನ್ನು ತಿಳಿಕೊಳ್ಳಬಹುದು ಕಡ್ಡಾಯವಾದ ಉಚಿತ ಪ್ರಾಮರಿ ಶಿಕ್ಷಣ, ಸೆಕಂಡರಿ ಮತ್ತು ಉಚ್ಚ ಶಿಕ್ಷಣಗಳಿಗೆ ಬೇಕಾದ ಸೌಕರ್ಯಗಳು, ಒಳ್ಳೆ ವ್ಯವಸಾಯ ಶಿಕ್ಷಣ ಪದ್ಧತಿ, ಮಾದರಿ ಹೊಲ ಮತ್ತು ಪರೀಕ್ಷಾರ್ಥ ವ್ಯವಸಾಯ ರಾಜ್ಯಗಳು, ಇವುಗಳೊಂದಿಗೆ ಶಾಸ್ತ್ರ ಪಂಡಿತರೂ ಶೋಧನಾಲಯಗಳೂ ಸಹಾ, ವ್ಯವಸಾಯ ಪ್ರದರ್ಶನಗಳು, ವ್ಯವಸಾಯ ಪತ್ರ ಪ್ರಕಟಣೆಗಳು, ಕ್ರೆಡಿಟ್ ಬ್ಯಾಂಕುಗಳು, ಮತ್ತು ವ್ಯವಸಾಯ ಉತ್ಪತ್ತಿಯನ್ನು ತಕ್ಕದಾದ ರೀತಿಯಲ್ಲಿ ವಿಕ್ರಯಿಸುವಂತೆ ಏರ್ಪಡಿಸಬೇಕಾದ ಪರಸ್ಪರ ಸಹಾಯಕ ಸಂಘಗಳು, ಇವೆಲ್ಲವೂ ದೇಶದ ಎಲ್ಲಾ ಕಡೆಗಳಲ್ಲಿಯೂ ಸ್ಥಾಪಿಸಲ್ಪಡುವ ಪ್ರಯತ್ನಗಳು ಬೇಕಾಗಿರುವವು.

ನವನಾಯ್ ತಿಳ್ವಣದ ಕಾರೇಜುಗಳ
ಆದರೆ ನಾಮಾನ್ಯ ಶಿಕ್ಷಣವು ಪ್ರ
ಗಳು ಕುಂದುಕೊರತೆಗಳಿಲ್ಲದೆಯಿಲ್ಲ. ಅವುಗಳಲ್ಲಿ ಸಮ
ಪ್ರಯೋಜನಗಳನ್ನು ಪಡೆಯುವರೆ ನಿರಾತಂಕವಾಗಿ ವ್ಯವಸಾಯ
ಕುಂದುಕೊರತೆಗಳನ್ನು ನಿವಾರಿಸಲು ಪ್ರಯತ್ನಿಸುವಾಗ ಪ್ರ ತರಿಗೆ ಉಪ
ಮೊದಲಾದವುಗಳನ್ನು ವಿಪರ್ಡಿಸಿ ಇಂಥಾ ಸಂಘಗಳು ರೈ ತಾಗಿ ಸರ್ವ
ನವಂತೆ ಸಾಹಸ ಪಡಬೇಕು. ಆಗ ರೈತರ ಸ್ಥಿತಿಯು ಒಳ್ಳೆ
ಸಂಪನ್ನತೆಯು ಪ್ರಾಪ್ತವಾಗುವರು.

—— o ——

ದೆ ೪ ತಾ. 24ರಲ್ಲಿ ಬಂಟರ ಯಾನಾಡವರ ವಿದ್ಯಾರ್ಥಿ ಭವನದಲ್ಲಿ
ಕೊಡಿದ ಮಲೆಯಾಳಿ ಮತ್ತು ಬಂಟ ಗ್ರಹಸ್ಥರ ಸಭೆಯು ವೃತ್ತಾಂತವು

ಮದ್ರಾಸು ಗವರ್ನರರವರ ನ್ಯಾಯ ನಿರ್ಮಾಣ ಸಭೆಯು ಮುಂ
ಳಿಯ ಸಂತಾನದ ಕಟ್ಟಿನಲ್ಲಿ ಹಿಸೆ ಹಕ್ಕು ಕೊಡಬೇಕೆಂಬುವ ಮಾಪ
ಸೂಚಿಸಿರುವ ಕಾನೂನು ಮಸೂದೆಯನ್ನು ಚರ್ಚಿಸಿ ತಮ್ಮ ಅಭಿಪ್ರಾಯ
ಕಾರದವರಿಗೆ ತಿಳಿಯಪಡಿಸುವರೆ ಬಂಟರ ಮತ್ತು ಮಲೆಯಾಳಿ ಗ್ರಹಸ್ಥ
ಈ ತಿಂಗಳ ತಾ. ೧೫ರಲ್ಲಿ ರಾ। ಬಿ ಮಹಾಬಲ ಹೆಗ್ಗಡೆಯವರು ನೋಟೀ
ಮೇರೆಗೆ ಬಂಟರ ವಿದ್ಯಾರ್ಥಿ ಭವನದಲ್ಲಿ ನೆರೆದಿತ್ತು. ಸಭಾಧ್ಯಕ್ಷರು ಸೇ
ನಮೂದಿಸಿದಂತೆಯೇ ಮಾಜಿ ಡಿಸ್ಟ್ರಿಕ್ಟ್ ಜಜ್ಜರಾದ ದಿವಾನ್ ಬಹದೂರ ಮ
ನೆಂಕಟ್ರಮಣಯ್ಯನವರುಗಳಾಗಿದ್ದರು ಬಂಟರ ಮತ್ತು ಈ ಜಿಲ್ಲೆಯಲ್ಲಿ ನಿವಾಸಿಸಿ
ಮಲೆಯಾಳಿ ಗ್ರಹಸ್ಥರಲ್ಲಿ ಪ್ರಮುಖರಾಗಿ ಹಲವರು ಈ ಸಮಯದಲ್ಲಿ ಹಾ

ಅವರ್ಯಾರೆಂದರೆ —

ಮಾ। ರಾ। ರಾ। ಕೊಡಿಯಾಲಗುತ್ತು ದೇವು ಶೆಟ್ಟರವರು, ಎರಡನೇ ಕೆ
ಗುತ್ತು ತಾಲೂಕು ಬೋರ್ಡ್ ಮೆಂಬರ ಕೃಷ್ಣ ಸುಬ್ಬಯರವರ, ರಾ
ತಿಮ್ಮಪ್ಪ ಮೇಲಾಂಟರವರು, ಬಜ್ಪೆ ಮನೆಯ ರಾ। ದೂನು ರೈಗಳವರು (ಈ
ಮನೆಯವರು ಮಂಗಳೂರು, ಕಾಸರಗೋಡು ಮತ್ತು ಉಪ್ಪಿನಂಗಡಿ ತಾಲೂ
ಬಂಟರ ಜಾತಿಯವರಲ್ಲಿ ಒಂದೇ ಮಾತಾ ದೆಯವರು) ಕಾಸರಗೋಡು
ಕೊನಸ್ತಿನ ರಾ ಜಾತುನಂಬಿಯಾರವರು ಯಚ್ಚಾನ್ ರಾ ವಾರಕಾ
ನಾಯರರವರು, ಮೆಲೋತಿನ ರಾಮನ್ನಾಯರರ ಎ ಕೊರೋತ್ ರಾ
ರನ್ ನಾಯರರವರು, ಪರೇಕಳ ಮತ್ತಿತ್ತರ ರಾ ಪಮ್ಯ ಮೆಂಬರ್
ಶಂಕರ ಬಂಟರವರು, ತಲಕಾಡಿ ಸುಬ್ಬಯ್ಯಮಲ್ಲರಸು ಡಿಸ್ಟ್ರಿಕ್ ಮೆಂಬರ್
ಬಾಕ್ರಬೈಲ ತಿಮ್ಮಪ್ಪ ಶೆಟ್ಟರವರು, ಅಮಣೆ ನಾರಾಯಣ ರಾವರವರು
ಮುತ್ತಯ್ಯ ಶೆಟ್ಟರವರು, ವೇರಾಜ ವೆಂಕಪ್ಪ ಗೌಡರವರ ತಿಮ್ಮಯ್ಯಗೌ
ಭಂಡಾರಿಗಳವರು, ಬೆಳ್ಳಾರೆ ಜತಪ್ಪ ಶೆಟ್ಟರವರು, ಮುಂಡಪ್ಪಾಡಿ ದೇವ
ರವರು, ವಾಪೂರು ತಿಮ್ಮಯ್ಯ ಆಳ್ವರವರು, ವೆನ ಪಮಾಂಗ ವಲ್ಲರವರು
ಕೆಂಚಣ್ಣ ಆಳ್ವರವರು, ಎಕ್ಕಾರು ಅಣ್ಣಪ್ಪ ಹೆಗ್ಗಡೆಯವರು ಕಾಸರಗೋಡು
ನಂಬಿಯಾರ್‌ರವರು, ಮಕ್ಕಿ ಸುಬ್ಬಯ್ಯ ಶೆಟ್ಟರವರು, ಮುಲ್ಕಿ ವೆಂಕು
ಪಡುಬಿದ್ರೆ ವೆಂಕಣ್ಣ ಶೆಟ್ಟರವರು ಮೊದಲಾದವರೂ ಇನ್ನೂ ಅನೇಕ ಕ
ಕೆರಿಯ ಮೆಂಬರರೂ ಸಹ ಸಭೆಗೆ ಬಂದಿದ್ದರು

ಅಧ್ಯಕ್ಷರವರು ಸಭೆಯ ಉದ್ದಿಶ್ಯವನ್ನು ಸಭಿಕರಿಗೆ ತಿಳಿಯಪಡಿಸಿದ ಮೇ
ಮಹಾಬಲ ಹೆಗ್ಗಡೆಯವರು ಸಭಿಕರಿಗೆ ಕಾನೂನು ಮಸೂದೆಯನ್ನು ಓದಿ
ಕಾನೂನು ಮಸೂದೆಯು ಸಭೆಯಲ್ಲಿ ವಿವರಿಸಲಾಯಿತು ಹಿಸೆ ಹಕ್ಕು ಕ
ಕೆಂಬುವ ಕಾನೂನು ಮಸೂದೆಗೆ ಸಭಿಕರು ಅಂಗೀಕಾರವಿರುವುದೋ ಎಂಬ ಸೂ
ಸಭೆಯಲ್ಲಿ ವಾದಿಸಲ್ಪಟ್ಟು ಮಸೂದೆಯು ಸ್ವೀಕರಿಸತಕ್ಕದಲ್ಲವೆಂತ ಸರ್ವರ
ಪ್ರಾಯಪಟ್ಟು ಸೂಚನೆಯು ತೆಗದುಹಾಕಲ್ಪಟ್ಟಿತು

ನಂತರದಲ್ಲಿ ಇತ್ತಲಾಗೆ ಮಲೆಬಾರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪ
ನ್ಯಾಯವಿಧಾಯಕ ಸಭೆಗೆ ಪ್ರತಿನಿಧಿಗಳಾಗಿ ಆರಿಸಲ್ಪಟ್ಟ ಬಹುಮಾನವಂತ
ಸಾಹೇಬ ನಯಂಪಳ್ಳಿ ಸುಬ್ಬರಾವರವರು (ಮಿತಾಕ್ಷರಿ ಕಾನೂನಿಗೆ ಒಳಪಟ್ಟ
ಕಾನೂನು ಮಸೂದೆಯ ಕೆಲವು ನಿಯಮಗಳನ್ನು ಸಭಿಕರಿಗೆ ಇನ್ನಷ್ಟು ವಿವರಿಸು
ವೆನೆಂಬದಾಗಿ ಸೂಚಿಸಿ ಸಭೆಯಲ್ಲಿ ಮಾತಾಡ್ಡಲಿಕ್ಕೆ ಅಧ್ಯಕ್ಷರಿಂದ ಅಪ್ಪಣೆಯನ್ನಿತ್ತ
ದರು. ಬಹುಮಾನಪಟ್ಟ ಸುಬ್ಬರಾವರವರು ತಮ್ಮ ಭಾಷಣ ಮಧ್ಯದಲ್ಲಿ ಈ

ಸಂತಾನದ ಕುಟುಂಬದ ಆಡಳಿತದಾರರ ದುಷ್ಟಕೃತ್ಯಗಳನ್ನು ಅ
ಕಾನೂನು ಮಸೂದೆಯಿಂದ ದೂರಕುವ ಪ್ರಯೋಜನಗಳನ್ನು ಸ್ಪಷ್ಟವಾಗಿ ವಿವರಿ
ಮಸೂದೆಯನ್ನು ತಿದ್ದುಪಡಿಮಾಡಿಯಾದರೂ ಸ್ವೀಕರಿಸುವುದುಚಿತವೆಂತ ತಾತ್ಪರ್ಯ
ಪಟ್ಟರು ರಾ। ಸುಬ್ಬರಾವರನ್ನು ಪ್ರತಿವಾದಿಸಿ ಹಲವು ಸಭಿಕರು ಮಾತಾಡಿದರು
ಕುಟುಂಬದ ಆಡಳಿತೆದಾರರಲ್ಲಿ ಒಬ್ಬಿಬ್ಬರು ದುಷ್ಟರಿದ್ದರೆ ನೂರಾರು ಜನ ಒಳ್ಳೆ
ಆಡಳಿತೆದಾರರಿರುವರೆಂತ ಎದುರಾಡಿದರು

ಕಾನೂನು ಮಸೂದೆಯ ಸೂತ್ರಗಳನ್ನು ಕುರಿತು ಮಂಗಳೂರಿನಲ್ಲಿ ವಕೀಲ
ರಾಗಿರುವ ರಾ। ಕುಂಜ ರಾಮನ್ ನ್ಯಾಯರ್ ಬಿ ಎ ಬಿ ಎಲ್ ರವರು ಸಭೆಯಲ್ಲಿ
ಭಾಷಣ ಮಾಡಿದರು

ಈ ಜಿಲ್ಲೆಯ ನಿವಾಸಿಕರಾದ ಸಭೆಗೆ ಹಾಜರಾದ ನಾಯರು ಗೃಹಸ್ಥರ ಪೈಕಿ ಅರು
ಜನರು ಹಿರಿ ಹಕ್ಕಿನ ಕಾನೂನು ಮಸೂದೆಯೂ ತಂದೆಯಿಂದ ಮಕ್ಕಳಿಗೆ ಸಿಕ್ಕುತಕ್ಕ
ಸ್ವಾರ್ಜಿತ ಆಸ್ತಿಯ ಚಾಧ್ಯತೆಯ ಕಾನೂನು ಮಸೂದೆಯೂ ತಮಗೆ ವಿರೋಧವಾದವು
ಕಾಂತ ವಿಜ್ಞಾಪಿಸಿಕೊಂಡು ಮದ್ರಾಸು ಸರಕಾರದವರಿಗೆ ಒರಕೊಂಡ ಮನವಿಯ ಪ್ರತಿ
ಗಳನ್ನು ಸದಯಲ್ಲಿ ಅಧ್ಯಕ್ಷರವರಿಗೆ ಕೊಡುವವರಾದರು

ಆಡಳಿತೆಯ ಕುಟುಂಬದ ಮೆಂಬರರನ್ನು ಆಯೋಪಿಸುವರೆ ತಕ್ಕದಾದ್ಯ ವಿಚಾರ
ಣೆಯನ್ನು ಮಾಡುವುದುಚಿತವೆಂತ ರಾ। ಕುಂಜ ರಾಮನ್ನಾಯರರವರು ಸೂಚಿಸಿದರು.
ಈ ಸೂಚನೆಯನ್ನು ಹಜೂರು ಕ್ಲಾರ್ಕರಾಗಿರುವ ರಾ ತಿಮ್ಮಪ್ಪ ಪೂಂಜ ಬಿ. ಎ.
ಯವರೂ ಕೊಡೋತನ್ ಕುಂಜ ಕಾರನ್ ನ್ಯಾಯರವರೂ ಅನುಮೋದಿಸಿದರು.
ರಾ। ಕುಂಜ ಕಾರನ್ ನ್ಯಾಯರರವರು ಈ ಸೂಚನೆಯನ್ನು ತನ್ನ ಸ್ವಂತ ಅಭಿಪ್ರಾಯದ
ಮೇರೆಗೆ ಅನುಮೋದಿಸಿರುವರಾದರೂ ಸದಯಲ್ಲಿ ತನ್ನ ಮನೆಯವರ ಪರವಾಗಿ ಹಿಸ್ಸ
ಹಕ್ಕಿನ ಕಾನೂನು ಮಸೂದೆಯನ್ನು ಪೂರ್ಣವಾಗಿ ವಿರೋಧಿಸಿರುವರು

ಮೇಲೆ ಹೆಸರು ಕಾಣಿಸಿದ ಮೂರು ಜನ ಗೃಹಸ್ಥರು ಕೂಡಿ ಸಭಿಕರಲ್ಲಿ ಎಳು
ಜನರು ಹಿರಿ ಹಕ್ಕಿನ ಕಾನೂನು ಮಸೂದೆಯನ್ನು ತಿದ್ದುಪಡಿ ಮಾಡಿ ಅಂಗೀಕರಿಸಬಹು
ದೆಂದರೂ ತಿದ್ದುಪಡಿಗಳು ಯಾವುದೆಂತ ಸೂಚಿಸಲಿಲ್ಲ ಬಾಕಿ ಇರುವ ಎಲ್ಲಾ ಸಭಾ
ಸದರು ಕಾನೂನು ಮಸೂದೆಯನ್ನು ಪೂರ್ಣವಾಗಿ ತಿರಸ್ಕರಿಸಬೇಕೆಂಬ ತಮ್ಮ ಅಭಿ
ಪ್ರಾಯವನ್ನು ನಿರ್ಣಯಿಸಿದರು

ಅಳಿಯ ಸಂತಾನದ ಕಟ್ಟಿನವರಿಗೆ ತಂದೆಯ ಸ್ವಾರ್ಜಿತ ಆಸ್ತಿಯ ಚಾಧ್ಯತೆ
ಕಾನೂನು ಅತ್ಯವಶ್ಯವಿಲ್ಲವೆಂಬ ಅಭಿಪ್ರಾಯವಾಯಿತು. ಸಭೆಯಲ್ಲಿ ಹಾಜರಿದ್ದ ೭ ಜನ
ಮಲೆಯಾಳಿ ವೈಕರಲ್ಲಿ ೫ ಜನರು ಈ ಕಾನೂನು ಮಸೂದೆಯ ವಿರೋಧವಾಗಿಯೂ
ಇದ್ದಾರು ಮಸೂದೆಯ ಪರವಾಗಿಯೂ ತಮ್ಮ ಸಮ್ಮತಿಯನ್ನು ಕೊಟ್ಟರು.

ಯು ಮುಗಿಯುವ ಮೊದಲು ಬಹುಮಾನವಂತ ಎನ್ ಸುಬ್ಬರಾವ್‌ರವರಿಗೆ
ನ್ಯಾಯ ನಿರ್ಮಾಣ ಸಭೆಯ ಮೆಂಬರುತನ ಪದವಿಯು ದೊರಕಿದ್ದರಿಂದ ಉಂಟಾದ
ಸಂತೋಷವನ್ನು ಸೂಚಕವಾಗಿ ಸಭಿಕರು ಕೂಡಿರುವ ನಿರ್ಣಯವನ್ನು ಸಭೆಯ ಕಡೆಯಿಂದ
ರಾ। ಬೇ ಸಿ ಅಯ್ಯಂಗಾರ್‌ರವರು ಸಭೆಯ ಮುಂದಿಟ್ಟರು ಬಹುಮಾನಪಟ್ಟ ಸುಬ್ಬ
ರಾವರವರು ಪ್ರಜಾ ಪ್ರತಿನಿಧಿಗಳಾಗಿ ಯತಾಥ್ ಭಾವನೆಗಳನ್ನು ಸರಕಾರಕ್ಕೆ ಯಾವಾಗ್ಗಲೂ
ವೇದ್ಯವಂತಮಾಡಿಕೆಂದು ಪಂಗ ಪೂಚಿಸಿ ರಾ। ಸುಬ್ಬರಾವರವರು ಭಾಷಣ ಮಾಡಿದರು.
ಈ ಸಲಹೆಯನ್ನು ಸರ್ವರೂ ಮನ್ನಿಸಲ್ಪಟ್ಟಿತು

ಅಧ್ಯಕ್ಷರಿಗೆ ವಂದನಾರ್ಪಣೆಯನ್ನು ಕೊಟ್ಟ ಮೇಲೆ ಸಭೆಯು ಸಂಪೂರ್ಣವಾಯಿತು

ಗ್ರಾಮ ವಾರ್ತೆ

ರಸ್ತೆಗಳ ಸ್ಥಿತಿಗತಿ

ಇತ್ತಲಾಗೆ ದಕ್ಷಿಣ ಕನ್ನಡ ಜಿಲ್ಲಾ ಗಜೆಟಿನೊಂದಿಗೆ ಪ್ರಕಟಿಸಲ್ಪಟ್ಟ ಮಂಗ
ಳೂರು ತಾಲೂಕು ಬೋರ್ಡು ವಾರ್ಷಿಕ ರಿಪೋರ್ಟಿನಲ್ಲಿ ಮಂಗಳೂರು ತಾಲ್ಲೂಕಿನಲ್ಲಿ
ರಸ್ತೆಗಳ ಸ್ಥಿತಿಯು ಹೀನಾಗಿದೆ ಎಂಬುದಾಗಿ ಒದರಿರುವರು ಕಳದ ಮಾರ್ಚಿ ತಿಂಗಳ
ಅಂತ್ಯದ ವರೆಗೆ ಮಾರ್ಗಗಳು ಈ ಸ್ಥಿತಿಯಲ್ಲಿದ್ದವೆಂಬುದಾಗಿ ಈ ವರದಿಯಲ್ಲಿ ತೋರು
ವುದು ಪ್ರಯಾಣಿಕರ ಗಾಡಿಗಳೂ, ಸರಕು ಗಾಡಿಗಳೂ ಚಲಾವಣೆಯಾಗುವುದು ಕಡಿ
ಮೆಯಾದ ಸ್ಥಳಗಳಲ್ಲಿ ಈ ವರುಷ ಸಹಾ ಮಾರ್ಗಗಳು ಈ ಸ್ಥಿತಿಯಲ್ಲಿಯೇ ಇರುವವು.
ಆದರೆ ಮಂಗಳೂರಿಂದ ಕುಳೂರು ಹೊಳೆ ದಾಟಿ ಮುಲ್ಕಿ ತನಕ ಇರುವ ಮಾರ್ಗದ
ನಾದುರುಸ್ತಿ ಸ್ಥಿತಿಯನ್ನು ನೋಡಿ ಯಾರೂ ಬೆರಗಾಗದಿರರು. ಜಟ್ಕಿ ಧಾಂಡಿಗಳೆಂಬ
ಕುದುರೆ ಗಾಡಿಗಳಲ್ಲಾಗಲಿ, ಎತ್ತಿನ ಗಾಡಿಗಳಲ್ಲಾಗಲಿ ಈ ಮಾರ್ಗವಾಗಿ ಪ್ರಯಾಣ

[illegible] ಬಂದಕ್ಕೆ ಕಿಸಿದ ಕಿಕ್ಕೆ ಬಂದು [illegible] ಮೂಲ ಇಲ್ಲಿ ವರೆಯಿಂದ ನಮ್ಮ ಈ ರಸ್ತೆಯಲ್ಲಿ ನಡಿಯುವುದು ಅಸಾಧ್ಯ. ಭೆತ್ತ ಮಣ್ಣನ್ನು ಹುಡಿ ಮಾಡಿ ಹೊಂಡಗಳನ್ನು ಹೊಡಿ ಹದಮಾಡಿದ ಗದ್ದೆಯಲ್ಲಿ ನಡದಂತೆಯೇ ಈ ಮಾರ್ಗದಲ್ಲಿ ಎಲ್ಲಿ ಎಲ್ಲಿ ಕಾಲೂರಿದರೂ ಕೆಸರಿನಲ್ಲಿ ಮುಣುಗಿ ಹೋಗುವುದು. ಭಂಡಿಗಳನ್ನು ನಿಳಿಯುವ ಬಡ ಕುದುರೆ ಎತ್ತುಗಳ ಗೋಳು ವರ್ಣಿಸತೀರದು. ತಾವು ಇಳಿಸಿದಂತೆ, ಇವುಗಳು ನಡಿಯುವುದಿಲ್ಲವೆಂತ ಭಂಡಿ ಹೊಡಿಯುವವರು ಈ ಮೂಕ ಪ್ರಾಣಿಗಳ ಮೇಲೆ ಸಿಟ್ಟುಗೊಂಡು ಮುಳ್ಳುಗಳಿಂದ ತುಂಬಿರುವ ಪಿದರು ಕೊಲುಗಳಿಂದ ಇವುಗಳನ್ನು ನದೆ ಬಡಿಯುವರು. ಬೇನೆಯನ್ನು ತಾಳಲಾರದೆ ಕಣ್ಣುಗಳಿಂದ ದುಃಖಾತಿಶಯದ ಅಶ್ರುಧಾರೆಯೂ, ಘಾಯಗಳಿಂದ ರಕ್ತಪ್ರವಾಹವೂ ಒಂದೇ ರೀತಿ ಇಳಿಯುವವು. ಈ ವರುಷದಲ್ಲಿ ಕೆಟ್ಟಂತೆ ಬಾಕಿ ಯಾವ ವರುಷದಲ್ಲಿಯಾದರೂ ಈ ಮಾರ್ಗವು ಕೆಡಲಿಲ್ಲವೆಂಬದಾಗಿ ಮಾರ್ಗದ ಅಜುಬಾಜಿನ ನಿವಾಸಿಕರೆನ್ನುವರು

ವಿಪರೀತ ಮಳೆಯು ಈ ವರುಷ ಲಗದಿದ್ದರೂ ರಸ್ತೆಯು ಎಲ್ಲಾ ಕಡೆಗಳಲ್ಲಿಯೂ ಒಂದೇ ರೀತಿ ಕೆಡಲು ಕಾರಣವೇನು? ನಮ್ಮಲ್ಲಿ ರಸ್ತೆ ದುರುಸ್ತಿಗಳ ಕೆಲಸವು ಹ್ಯಾಗೆ ನಾಗುತ್ತಿರುವುದೆಂಬದನ್ನು ಪರ್ಯಾಲೋಚಿಸುವುದು ಈ ಸಂದರ್ಭದಲ್ಲಿ ಉಚಿತ ಕಾಣುತ್ತದೆ.

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ ತಲೆಬಾಚಿಕೊಳ್ಳುವದಕ್ಕೂ ಅತ್ಯಂತೋಪಯುಕ್ತವಾದದ್ದು ಇದರಲ್ಲಿ ಅತ್ಯಾಶ್ಚರ್ಯಕರವಾಗಿ ಕೂದಲನ್ನು ಬೆಳಸುವ ಗುಣಗಳಿರುವದಲ್ಲದೆ ಇದು ಮಿದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು ೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೫ ಆಣೆಗಳು.

ಕವಿರಾಜ ಆರ್ ಸಿ ಸೆನ್, ಎಲ್ ಎಮ್ ಎಸ್.,
216 ಕಾರ್ನವಾಲಿಸ್ ಬೀದಿ. ಕಲ್ಕತ್ತಾ.

ಟೆಲಿಗ್ರಾಫ್ ವಿಳಾಸ — "ಕೌಮುದಿ"

ಮೈಸೂರು ದೇಶಕ್ಕೆ ವಿಜಂಟರು — ಎಲ್ ಎ ಫೋರುವಾಲ್ ಎಂಡ್ ಕೋ,
ಚಿಕ್ಕಪೇಟೆ, ಬೆಂಗಳೂರು.

ಮಂಗಳೂರಿಗೆ ವಿಜಂಟರು,—ಮಾ| ರಾ| ರಾ| ಸಿ. ಆರ್. ಕಾಮತರು.

ಉಡುಪಿ ಮಾರ್ಕೆಟ್ ಕಟ್ಟಡ

ಅನುಭವಸಿದ್ಧವಾದ ವನೌಷಧಗಳು

ಕುಂತಳಾವಧಿದ ತೈಲವು. ಕೇಶವರ್ಧಕವೂ ಶಿರೋರೋಗನಾಶಕವೂ ಸುವಾಸಿಕವೂ ಶೀತಲವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ರೂ ೧೦ ಆಣೆ,

೨. ಪ್ರಮೇಹರಿಪು ಬಿಂದು ಉರಿಯನ್ನೂ ಕೇವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು ಬಾಟ್ಲಿಗೆ ೨ರೂ

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಬಕವೂ **ಪ್ರಮೇಹನಿತ್ಯ ನಾಶಕವೂ** ಆಗಿದೆ. ಅರ್ಧ ತೊಲೆಗೆ ೨ರೂ.

೪. ಪಂಚಪೀರಕ ಪಾಕ. ಎಲ್ಲ ಪ್ರದರಂಗಳನ್ನೂ ಮುಟ್ಟು ಕಟ್ಟಲಿಯದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು ರಾತಲಿಗೆ ೨ರೂ

೫. ಸೂರಣಾವ ಲೇಹ. ರಕ್ತ ಅಧವಾ ಮೊಳಕೆಯ ಮೂಲವ್ಯಾಧಿಯ **ಮೇಲೆ ಅತ್ಯುತ್ತಮವು.** ವೈಪ್ಪಿಕವಾಗಿದೆ ರಾತಲಿಗೆ ೨ರೂ

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳಾಗಲಿ ಅಧಾಯವಿಲ್ಲದೆ **ದಾರುಣವಾದ** ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ರೂ ೮ ಆಣೆ

೭. ಜಗನ್ಮೋಹನ ದಂತಮಂಜನ ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೂಕ್ತವಾಗಿರುವ ಅನೇಕ **ವನೌಷಧಗಳಿಂದ** ತಯಾರಿಸಿಯದೆ ೧೦ ತೊಲೆಗೆ ೧೦ ಆಣೆ

೮. ಸರಳಭೇದಿ ಮಾತ್ರೆ ಉಪಾಸನಸ್ಮಂಟುನಾರ್ ಸೂಪರೇಚಕವು **ತೊಲೆಗೆ ೨ರೂ.**

ನಮ್ಮ ವಿಳಾಸ:—ಬಿ. ಎಮ್ ನಾಥ್ ಅಂಡ್ ಕಂ.,

ವೆರಂ ಪೋಸ್ಟ್ ಮದ್ರಾಸು

೯ ಮಹಾಜ್ವರಾಂಕುಶ ಮಾತ್ರೆ ಚಳಿಜ್ವರ, ವರಿಸಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ರೂ.

೧೦. ವಾಸಾವ ಲೇಹ. ಕೆಮ್ಮು, ಗುಲ್ಮಾಬ್ಯಸ, ಕಫ, ಕ್ಷಯಗಳ ಮೇಲೆ ರಾಮಬಾಣವು ರಾತಲಿಗೆ ೨ರೂ

೧೧ ಶಾಲ್ಮಲೀ ಪಾಕ ಸ್ಪಷ್ಟಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ವ್ಯಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು ರಾತಲಿಗೆ ೨ರೂ.

೧೨ ವಾತಮುರಾರಿ ಬಾವ್ ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತಭಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೨ರೂ ೬ ಆಣೆ

೧೩ ಗಜಕರ್ಣ ಕೇಸರಿ ಮುಲಾಮು ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಬೇರೆಯಾವ ಔಷಧಿಗಳಿಗಾಗಿಯೂ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ ಕಂಪಾಗಿಗೆ ೪ ಆಣೆ

೧೪ ಸಪ್ತವೀರಾಂಜನ (ಸುರುಮಾ) ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು ತೊಲೆಗೆ ೧೦ರೂ

೧೫ ಪ್ರಜ್ಞಾ ಸಾರಸ್ವತ ಚೂರ್ಣ ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು ಸ್ಮರಣಾಶಕ್ತಿಯನ್ನು ಬೆಳೆಯಿಸುವದು, ನಾಲಿಗೆ ಪಟುತ್ವವನ್ನು ಕೊಡುವದು ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳೂ ದೊರೆಯುವವು ನಮ್ಮ ದೊಡ್ಡ ಕನ್ನಡ ಕೆಟಲಾಗ್ ನೋಡಿರಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ದೊರೆಯುವಂತೆಯೂ ಮಾಡುವೆವು ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ವ್ಯವಹಾರ ನಡೆಯಿಸಬಹುದು

B M. Nath & Co, *Ayurvedic Chemists*,
Vepery Post, MADRAS.

Royal Indian Balm Depot.

ರೊಯಲ್ ಇಂಡಿಯನ್ ಬಾಮ್.



ಪ್ರಖ್ಯಾತಪಟ್ಟ ಯು ರೋಪಿಯನ್ ಡಾಕ್ಟರರಿಂದಲೂ, ಇಂಜಿನಿಯರುಗಳಿಂದಲೂ, ಪರೀಕ್ಷಿಸಲ್ಪಟ್ಟ ದ್ದಾಗಿರುತ್ತದೆ

ಇದರಿಂದ —ವಾತ ಸಂದಿವಾತ, ತಲೆನೋವು, ತಲೆತಿರಿತ, ಉಳುಕು, ಬೆಂಕಿಯುರಿತ, ಬಿಲಿಮೆ, ಎದೆನೋವು, ಸೊಂಟದ ನೋವು, ಗಂಟಲು ನೋವು, ಆಸ್ತಮಾ ಕೆಮ್ಮು ಮುಂತಾದ ಸ್ತ್ರೀಪುರುಷರ ಅತ್ಯಾವಶ್ಯಕವಾದ ಸಾಮಾನುಗಳೂ ಇದೆ ಮತ್ತು ಪ್ರಯಾಣಕ್ಕೆ ಅನುಕೂಲವಾಗಿ ಕಿಸೆಯಲ್ಲಿಡಬಹುದಾದ ಚಿಕ್ಕ ಚಿಕ್ಕ ಡಬ್ಬಿಗಳಲ್ಲಿಯೂ ಇವೆ

ರೊಯಲ್ ಇಂಡಿಯನ್ ಬಾಮ್ ಎಲ್ಲ ಔಷಧಾಲಯಗಳಲ್ಲಿಯೂ ಮಾರಾಟಕ್ಕೆ ದೊರಕುವದು

ಗಜಕರ್ಣಾದಿ ಮುಲಾಮು.

ಎಲ್ಲಾ ತರದ ಗಜಕರ್ಣ ತುಂಕಟಿಯ ಮೇಲೆ ದಿನಕ್ಕೆ ಮೂರು ಸಾರಿ ತಾಗಿಸುವದರೊಂದಿಗೆ ಗಜಕರ್ಣ ಪೂರ್ತಿ ಹೋಗುವದು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಬಾಟ್ಲಿ ಬೆಲೆ ೦ ೪ ೦

ಏಳಾಸ — ಮೆಸರ್ಸ್ ಕಾಪೆಸ್, ಗಿರಗಾಂ ಮುಂಬಯಿ.

ಏಜಂಟರು ಪಲ್ಲ ಎಂಡ್ ಸನ್ಸ್ ಮಂಗಳೂರು
ಬೇಕಲ ವೆಂಕಟ ರಾವ್, ಉಡುಪಿ
ಬಿ ನರಸಿಂಹ ಮಲ್ಯ ಪುತ್ತೂರು.

ಬಿ. ಎಸ್. ಮಲ್ಯಾ ರಾಮ ಪ್ರಸಾದ ಔಷಧಾಲಯ. ಬಾರಕೂರು.

ಬಳಗಾಂ, ಧಾರವಾಡ, ಹುಬ್ಬಳಿ, ಸಾಗರ (ಮೈಸೂರು) ಕಾರವಾರ ಇನ್ನೂ ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದೆ.

ಕಂಪಿತ್ ಟಿ. ಬಾಬುರಾಯರ

ಪರಿಮಳಾಂಜನ.

ಇದರ ಬಾಳ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕೆನ್ನೆ, ಅರ್ಧಾಂಗವಾಯು, ವಾತ, ಸಂದುವಾತ, ಶೀತ, ಕೆಮ್ಮು, ಗಂಟುನೋವು, ಜಖಮ್, ಉಳುಕು, ಪಾಯಿಗಾಲ್, ಪಕ್ಷಾತ, ಬೆನ್ನುನೋವು, ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಾರ್ವಜನಿಕೆ ಸಲ್ಲುವವು ಡಬ್ಬಿಗೆ ೧ರ ಕ್ರಯ 0—8—0.

ಆರು ಡಬ್ಬಿಗಳನ್ನು ಒಂದೇ ಸಾರಿ ತರಿಸಿಕೊಂಡರೆ ೫—8—0.

ಇಷ್ಟು ಜನಾಕ ದೊರೆದಿಲ್ಲವೆಂಬ ಯೋಚನೆಯಿಂದ ಬೇಕಾದವರು ಕೆಟಲಾಗಿಗೆ ಬರೆಯಿರಿ

ಟಿ ಬಾಬುರಾಯರ,

ಅಬ್ಸರ್ವೇಟರಿ ರೋಡ್, ಮಂಗಳೂರು, ದ. ಕ.

ನೇತ್ರಬಿಂದು

ಇದು ಕಣ್ಣಿನ ದೃಷ್ಟಿಯಾಂಧ್ಯ, ಕನ್ನೀರು ಸೋರುವಿಕೆ, ಕಣ್ಣಿನ ಮೂಲೆ ತುರಿಸುವಿಕೆ ಕೆಂಗಣ್ಣು ನೆನ್ಪೆ ಉಜುರುವಿಕೆ ಈ ಮೊದಲಾದ ರೋಗಳಿಗೆ ಸಿದ್ಧೌಷಧವು ಕ್ರಯ ಬಾಟ್ಲಿ ೧ರ ರೂ 0—8—0 ೩ ಪಿ. 0—4—0.

ಸಿದ್ಧಲಕ್ಷ್ಮೀವಿಲಾಸ—ಇದು ಒಳ್ಳೇ ರಕ್ತಶುದ್ಧಿ ಮಾಡುತ್ತದೆ ಕ್ರಯ ಬಾಟ್ಲಿ ೧ರ 0-12-0 ವಿ. ಪಿ. 0—1—0

ಇದು ವಿನಹ ಇಲ್ಲಿ ಆಸವಗಳು, ಅರಿಷ್ಟಗಳೂ, ಘೃತಗಳೂ, ಲೇಹಗಳೂ, ಚೂರ್ಣಗಳೂ, ತೈಲ್ಯಗಳೂ, ಮಾತ್ರೆಗಳೂ, ಭಸ್ಮಗಳೂ ವಗ್ಗೈರೆ ದೊರೆಯುತ್ತವೆ.

ಏಳಾಸು:— ಧನ್ವಂತರಿ ಆಯುರ್ವೇದಿಕ್ ಔಷಧಾಲಯ.
ಮಂಗಳೂರು

Printed & published by V. S. Kamath, at the Mangalore Trading Association's Shakthi Press, Mangalore

ಸ್ವದೇಶಾಭಿಮಾನಿ

ಪ್ರತಿಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ — ವರ್ಷಕ್ಕೆ ರೂ 1 4 0 ಟಪ್ಪಾಲು ಹಾಸಲು ಹೆಚ್ಚಿರೂ 2 1 0

ಪುಸ್ತಕ 4 ವಂಗಳೂರು, ಶಾರೀಕು 14 ನೇ ಶುಕ್ರವಾರ ಅಕ್ಟೋಬರ 1910 ಸಂಚಿಕೆ 41

Amrutanjan Depot Fort Bombay.

ಅಮೃತಾಂಜನ

Trade Mark Registered

ಏಂದ ಸ್ಥಾನದ ವನಸ್ಪತಿಗಳಿಂದ ತಯ್ಯಾರಿಲ್ಪಟ್ಟ ಬೇಸಿಹಾ ಮುಲಾಮು ಇದರಿಂದ ವಾತ, ಗಂಥಿವಾತ, ತಲೆನೋವು, ಶಿರೋಜ ಪ, ಅರ್ಧಾಂಗವಾಯು ಸೊಂಟ-ನೋವು ಗಂಟ್ಲು ನೋವು ಜಖಾಮು, ಉಳುಕು, ಥಾನು ಕೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವವು ರು ಸಣ್ಣ ಮಗುವಿನ ಮೇಲೇ ಕೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹುದು ಸಾರ್ವಪ್ರಮುಖ ಪ್ರವರ್ತಿಗಳಲ್ಲಿ ಈ ಅಮೃತಾಂಜನಕ್ಕೆ ಬಹುಮಾನ ಪದಕವು ಸಿಕ್ಕಿರುತ್ತದೆ ಅಮೃತಾಂಜನವು ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರ್‌ಗಳಲ್ಲಿಯೂ ಶಿಕ್ಕುವದು ಎಂಟ್ಲು ಗಿರ ಕಿಮ್ಮತ್ತು ೬ ಆಣೆ

ಗಜಕರ್ಣದ ಮುಲಾಮು.

ಕಿಮ್ಮತ್ತು ಆರು ಆಣೆ ಈ ನಮೂನೆ ಡಬ್ಬಿ

SAFE ★ EFFICACIOUS ★ SURE ★ PILLS ★ OINTMENTS ★ POWDERS

WILLIAM & Co BOMBAY

ಕಿಮ್ಮತ್ತು ಆರು ಆಣೆ ಈ ನಮೂನೆ ಡಬ್ಬಿ

ಗಜಕರ್ಣದ ಪುಲಾವು.

ಇದನ್ನು ಕಾಗಿಸುವದರಿಂದ ಎಲ್ಲಿ ತರದ ಕಜ್ಜಿಯು ನಾಶವಾಗಿ ಹೋಗುವದು ಇದರಿಂದ ಉರಿಯು ಬರವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿಯುವದು — ಇದ್ದಾಂತೆ ತಾಗಿಸುವದರಿಂದ ಒಳಗೆ ಪ್ರವೇಶವು ಆಗುವದು ಡಬ್ಬಿ ಗರ ಕಿಮ್ಮತ್ತು 6 ಆಣೆ ೧೩ ಡಬ್ಬಿ ರೂ 4

ದಂತಸಂಜೀವಿನಿ

ಹಲ್ಲುಗಳಿಂದ ಎರುವ ರಕ್ತ ಸಿಲ್ಲಿತ್ತಿ ಹಲ್ಲುಗಳು ಬೆಳ್ಳಗಾಗುತ್ತವೆ ಬಾಯಿಗೆ ಬಾ ಕೆಟ್ಟ ವಾಸನೆಯನ್ನು ಪೋಗಲಾಡಿಸುತ್ತದೆ ಹಲ್ಲುಗಳು ಫಟ್ಟಯಾಗುತ್ತವೆ ಈ ವಾಸನೆಯನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿವದು ಡಬ್ಬಿಗರ ಕಿಮ್ಮತ್ತು ೩ ಆಣೆ

ಕೇಶವರ್ಧಿನಿ ಎಣ್ಣೆ

ಇದನ್ನು ಕೂದಲುಗಳಿಗೆ ತಾಗಿಸುವದರಿಂದ ಕೂದಲುಗಳು ಕಪ್ಪಾಗಿಯೂ ಉದ್ದವಾಗಿಯೂ ಬೆಳೆಯುವವು ಇದಕ್ಕೆ ಮನೋಹರವಾದ ಪರಿಮಳವು ಸಹ ಇದೆ ಬಾಟ್ಲಿ ಒಂದರ ಕಿಮ್ಮತ್ತು ರೂ 1

ಖಜಿಜ ಮುಲಾಮು.

ಬಾಟ್ಲಿ ಒಂದರ ಕಿಮ್ಮತ್ತು 3 ಆಣೆ

ನವ್ರಗಾಟಿಕ್.

ರಕ್ತಶುದ್ಧಿ ಧಾತುಪುಷ್ಟಿ ನರ್ವೆಂಡ್ರಿಯ ಆಗುವದು ಸಿಲ್ಲಿಸುತ್ತದೆ. ಸಿಪ್ಪಣವಂತರಿಗೆ ಶಕ್ತಿ ಹೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ ಇದ್ದಲ್ಲಿ ಡೆಮಿಯಿಸ ಕೊಕೊ. ಲೆಸೆತಿನ್ ಎಂಬ ಧಾತು ಪುಷ್ಟಿ ಬೆಪದಗಳಿವೆ. ೨೦ ಗುಟಿಕೆಗಳ ಡಬ್ಬಿ ಗರ ಕಿಮ್ಮತ್ತು ರೂ 1

ಸುಂದರಿ ತೈಲ.

ಇದನ್ನು ಮೋರೆಗೆ ತಾಗಿಸುವದರಿಂದ ಮುದ್ದಣಗಳೂ ಕಪ್ಪು ಕಲೆಗಳೂ ಹೋಗಿ ಮೃದುವಾದ ಮತ್ತು ಮನೋಹರವಾದ ಕಾಂತಿಯು ಬರುವದು ಬಾಟ್ಲಿ ಒಂದರ ಕಿಮ್ಮತ್ತು 8 ಆಣೆ

ಪುಲಾಬು ಮಾತ್ರೆ.

ಬಾಟ್ಲಿ ಒಂದರ ಕಿಮ್ಮತ್ತು 8 ಆಣೆ

ವಿಳಾಸ: — ಅಮೃತಾಂಜನ ಡಿಪೊ, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಎಡ್ರೆಸು: — "ಅಮೃತಾಂಜನ", ಮುಂಬಯಿ

[illegible] ಆಯುರ್ವೇದ ಚಿಕಿತ್ಸಾ [illegible] ಗ್ರಂಥವು ಇನ್ನು ಸದ್ಯದಲ್ಲಿಯೇ ಪ್ರಕಟವಾಗುವುದು ಇದನ್ನು ಸ್ವದೇಶಾಭಿಮಾನಿಯ ವಾಚಕರೆಲ್ಲರೂ

ತಿಳಿಯಬೇಕಾಗಿರುವುದು.

ಕನ್ನಡಭಾಷೆ ಗೊತ್ತಿರುವವರ್ಯಾರಾದರೂ ತನ್ನ ಹೆಸರು ಮತ್ತು ವಿಳಾಸವನ್ನು ಕಳುಹಿಸಿಕೊಟ್ಟಲ್ಲಿ ಟಪ್ಪಾಲು ಹಾಸಲು ಇಲ್ಲದೆ ಸಹಾ ಗ್ರಂಥವನ್ನು ಉಚಿತವಾಗಿ ಪಡಿಯಬಹುದು ಇಂಗ್ಲೀಷು ಭಾಷೆಯಲ್ಲಿ ಹೆಸರು ಮತ್ತು ವಿಳಾಸವನ್ನು ಕಳುಹಿಸುವಾಗ ತಮ್ಮ ಸ್ನೇಹಿತರ ಯಾ ನೆಂಟರಿಷ್ಟರ ಪೈಕಿ 10 ಜನರ ಹೆಸರು ಮತ್ತು ವಿಳಾಸಗಳನ್ನು ಬರೆದು ಕಳುಹಿಸತಕ್ಕದ್ದು

ಅತೀ ಉತ್ತಮವಾದ ಬ್ಲೂಬ್ಲೇಕ್ ಶಾಯಿಯ ಪುಡಿ

ಇತರ ಎಲ್ಲಾ ಶಾಯಿಯ ಪುಡಿಗಿಂತಲೂ ಇದು ಒಹಳ ಉತ್ಕೃಷ್ಟವಾದದ್ದು

ಒಂದು ಪೊಟ್ಟಣಕ್ಕೆ 4 ಪೈ

ಈ ಶಾಯಿಯ ಹುಡಿಯನ್ನು ೨ ಔನ್ಸು ನೀರಿನಲ್ಲಿ ಕಲಸಿದೊಡನೆ ಅತೀ ಕಪ್ಪಾದ ಶಾಯಿಯು ದೊರಕುವದು ಇದರಿಂದ ಒರದರೆ ಲೋಹದ ಪೆನುಗಳಿಗೆ ತುಕ್ಕು ಹಿಡಿಯದು. ಪೇನಿನಲ್ಲಿ ಶಾಯಿಯು ಬಹಳ ಸೊಗಸಾಗಿ ಹರಿಯುವುದು ಈ ಶಾಯಿಯ ಪುಡಿಯಲ್ಲಿ ಬ್ಲೂಬ್ಲೇಕ್, ಕೆಂಪು, ಪಚ್ಚೆ, ದೂಮ್ರವರ್ಣ ಇನೇ ಮೊದಲಾದವುಗಳು ಇರುವವು

ಹಲವು ಪ್ರದರ್ಶನಗಳಲ್ಲಿ ಈ ಶಾಯಿಯ ಪುಡಿಯು ಬೆಳ್ಳಿ ಪದಕಗಳನ್ನೂ, ಯೋಗ್ಯತಾಪತ್ರಗಳನ್ನೂ ಹೊಂದಿಯದೆ

ಒಂದೇ ಸಾರಿ 100 ಪೊಟ್ಟಣಗಳಿರುವ ಒಂದು ಕಾಡ ಬೋರ್ಡ್ ಪೆಟ್ಟಿಗೆಯನ್ನು ತರಿಸಿಕೊಂಡರೆ ಟಪ್ಪಾಲು ಹಾಸಲು ವಿನಹಾ ರೂ ೧—೪—೦

ಟಿ ಎಸ್. ಸುಬ್ರಮಣ್ಯಮಂ ಎಂಡ್ ಕೊ
32 ಆರ್ಮೆನಿಯನ್ ರಸ್ತೆ, ಮದ್ರಾಸು

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತ್ತರ ವ ದಕ್ಷಿಣಕನ್ನಡದ ಎಲ್ಲಾ ವ್ಯಾಪಾರಸ್ತರಿಗೆ ಹೆಚ್ಚಿನ ಪರಿಚಿತಿಯುಳ್ಳವರಿಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಖಿಮಿಶನ ಮೂಲಕ ರವಾನಿಸುತ್ತೇವೆ ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಥಾಣೆ ಸ್ಟಾಂಪ್ ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ

ವಿಳಾಸ — ರಂಗಪ್ಪಾ ರಾಮಕೃಷ್ಣ ಕವಿ,
ವ ನೋಹರ ಬಿಲ್ಡಿಂಗ್ ಲವರಚಾಲ ಮುಂಬಯಿ

ಕವಿ ಎಂಡ್ ಸನ್ಸ್ ಜನರಲ್ ಮರ್ಚಂಟ್ಸ್,
ಮಂಗಳೂರು, ದ ಕ

ನಮ್ಮಲ್ಲಿ ಎಲ್ಲಾ ತರದ ಚೀಟು ಬಿಚ್ಚಿ ವ ಕೋಟಿಂಗ್, ಸ್ಟೇಶನರಿ, ಕಟ್ಲೆರಿ, ಗ್ಲಾಸ ವೇರ, ಒಯಲ್‌ಮೆನ್ ಸ್ಟೂರ್ಸ ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮಿರ್ಜಾಲಕ್ಕೆ ಉಪಯೋಗವಾಗುವ ಫ್ಲೆನೆಲು, ಎಲ್ಲಾ ಜಾತಿಯ ಕೊಡೆಗಳು ರಖಂ ಆಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾದೀತು

ನವೀನ ಶೃಂಗಾರ ಸ್ತ್ರೀ ಶುಕಸಪ್ತತಿ ಕಥೆ

ನೀವು ಶೃಂಗಾರ ಮತ್ತು ಚಮತ್ಕಾರವಾಗಿರುವ ಕಥೆಯನ್ನು ಓದಬೇಕಾಗಿ ಅಧಿಲಾಷೆ ಇದ್ದರೆ ಮೀಲ್ಕುಂಡ ಕಥೆಗೆ ಸಮಾನವಾದ ಕಥೆ ಯಾವದೂ ಇಲ್ಲ ಕ್ರಯ ಹಾಸೆಲ್ ಸಹಾ ೧೦ ಆಣೆ

ಮತ್ತು ನಮ್ಮಲ್ಲಿ ಕನ್ನಡ, ತೆಲುಗು, ಸಂಸ್ಕೃತ ಪುಸ್ತಕಗಳು ಪರಮಾಯದ ಊದಬತ್ತಿಗಳು, ಹಸಿಗಂಧ ಹಸಿ ಬಿಲ್ಲೆಗಳು, ಪನ್ನೀರು, ತರಹೆವಾರಿ, ಜವಳಿ ಸಹಾ ದೊರೆಯುವದು ಅಲ್ಲದೆ, ಇತರ ಯಾವ ಪದಾರ್ಥಗಳು ಬೇಕಾದರೂ ನಂಬಿಕೆಯಿಂದ ಕಮಿಷನಿಗೆ ರವಾನೆ ಮಾಡುವೆವು ಒಂದ್ಹಾವರ್ತಿ ತರಿಸಿ ನೋಡಿದರೆ ಗೊತ್ತಾಗುತ್ತೆ ನಮ್ಮ ಕಂಪೆನಿ ಕೆಟಲಾಗ್ ಪುಸ್ತಕವನ್ನು ಉಚಿತವಾಗಿ ದೊರೆಯುವದು

ಟಿ. ಯನ್. ಶ್ರೀನಿವಾಸ ಶೆಟ್ಟಿ, ಬುಕ್‌ಡಿಪೊ,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅಶ್ವಿನಿ ಗವರ್ನ್‌ಮೆಂಟ್ ಸಿಕ್ಕಿರುವ

ಲೈಫ್ ಇಶ್ಯೂರೆನ್ಸ್ ಕಂಪೆನಿ

ಲಿಮಿಟೆಡ್

ಆಪೀಸು ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ — ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಆತಿ ಕಮ್ಮಿಯಾದರೂ ಜಬ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲದನವೆಲ್ಲವೂ ಸರಕಾರದ ಬದ್ರತಾಪತ್ರಗಳಲ್ಲಿ ರೇವಜಾತಿ ಯಾಗಿಟ್ಟಿರುವುದು

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಶೇಷ ಸೂಚನೆ —ಪ್ರಖ್ಯಾತಿಗೊಂಡ ಶ್ರೀಕೃಷ್ಣ ಬ್ರದರ್ಸ್‌ರವರ ನಾನಾ ತರದ ದೃಷ್ಟಿ ಚಕ್ರಗಳನ್ನು ಅಲ್ಪ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಡಲಾದೀತು.

ಎಲ್ಲೂರು ರಾಮರಾವ್, ಜನರಲ್ ಏಜಂಟ್, ಮಂಗಳೂರು, ದ. ಕನ್ನಡ.

ಬಹುಮಾನ! ಬಹುಮಾನ! ಬಹುಮಾನ!

THE KALA-NIDHI MANGALORE,

(ಪೊಟ್ಟಣ 1 ಕ್ಕೆ 3 ಪೈ)

ಬರುವ ಡಿಸಂಬರ ತಿಂಗಳ ವರೆಗೆ ಮಾತ್ರ ೪ ರೂಪಾಯಿಗಳ ಶಾಯಿ ಪೊಟ್ಟಣಗಳನ್ನು ತೆಗದುಕೊಳ್ಳುವವರಿಗೆ ಓವನ್ ಪೇಸ್ ನಿಕ್ಕಲ್ ಸಿಲ್ವರ್ ರಾಸ್ಕೋವ್ ಕೀಲೆಸ ಪಡಿಯಾರವು

ಈ ಶಾಯಿಯು ಬಲು ಹಳೆ ಪೆನುಗಳಿಗೆ ತುಕ್ಕು ಹಿಡಿಯದು ಶಾಯಿಯ ಮೇಲ್ಮಡೆ ಬೂಜು ಬಲು ಬರಿಯಾಗಿ ಬಲು ಬ್ಲಾದಲ್ಲಿದ್ದು ಆರಿದೊಡನೆ ಅತಿ ಕಪ್ಪಾಗುವದು

ಬಹುಮಾನಗಳ ವಿವರ ೪ ಆಣೆಯ ಪೊಟ್ಟಣಗಳನ್ನು ತಕ್ಕೊಳ್ಳುವವರಿಗೆ ಸುಗಂಧ ದಂತ [illegible] ಪೆಟ್ಟಿಗೆಯನ್ನು ತಕ್ಕೊಂಡವರಿಗೆ ಜೋನ್ ಫೇಬರ್ ಪೆನ್ಸಿಲ್ ಡಜನ್ ೧; ೧ ಪೆಟ್ಟಿಗೆಯನ್ನು ಒಡನೆ ಡಾಲಿಗೆ ಹೊತ್ತವರ ಉತ್ತಮವಾದ ಬಣಿಯನ್ ೧, ೨ ರೂಪಾಯಿಗಳನ್ನು ತಕ್ಕೊಳ್ಳುವವರಿಗೆ [illegible] ಕಿಸೆ ಘಾಟಿಯ ಪೆಟ್ಟಿಗೆ ೧, ೪ ರೂಪಾಯಿಗಳನ್ನು ತಕ್ಕೊಳ್ಳುವವರಿಗೆ [illegible] ನಿಕ್ಕಲ್ ಸಿಲ್ವರ್ ರಾಸ್ಕೋವ್, ಕೀಲೆಸ ಕಿಸೆ ಪಡಿಯಾರವು ಗ್ಲಾಸ್ [illegible]

[illegible] ಪೆಟ್ಟಿಗೆ ಬಾಬ್ತು ೧ಕ್ಕೆ ಆಣೆ ೪ ಸ್ಟಾಂಪಿಗೆ ಆಣೆ ೪ ಶಾಯಿಯ ಗುಳಿಗೆ ಬಾಬ್ತು ಬಿಕ್ಕುವದು ಪತ್ರಸ್ಥರವರಿಗೆ ೬ ಪಿ ಚಾರ್ಜು ಪ್ರತ್ಯೇಕ

ವಿಳಾಸ — ಕಲಾನಿಧಿ ಮಂಗಳೂರು

ಅದವಾ ದಿ ಊಲನ್ ಮಾರ್ಟ್ ನಂಬ್ರ ೧ ಮಂಗಳೂರು (ದ ಕ)

ಖಾಫಶಾಯಿ ಸಾಬೂನು.

ಈ ಸಾಬೂನು ಕೂದಲು ಬೆಳೆದಿರುವ ಸ್ಥಳಕ್ಕೆ ಹಚ್ಚಿದಲ್ಲಿ ಚರ್ಮಕ್ಕೆ ಯಾವ ತರದ ತೊಂದರೆಯಾಗದೆ ೫ ನಿಮಿಷದಲ್ಲೇ ಕೂದಲು ಉದುರಿ ಹೋಗುವದಲ್ಲದೆ, ಹಚ್ಚಿದೆ ಭಾಗವು ತಳ ತಳಿಸಿ ಮೃದುವಾಗುವದು ಇಂದೇ ಒಂದು ಪೆಟ್ಟಿಗೆ ಪಡಕೊಳ್ಳಿರಿ

ಕ್ರಯ ಪೆಟ್ಟಿಗೆ ೧ಕ್ಕೆ ೦—೬—೦. ತ ಪ್ಪಾಲು ಖರ್ಚು ಒಂದರಿಂದ ೪—ಪೆಟ್ಟಿಗೆ ವರೆಗೆ ೦—೪—೦

ವಿಳಾಸ:— ದಿ. ಊಲನ್ ಮಾರ್ಟ್.
ಆಸ್ಪತ್ರೆ

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 11ನೇ ಅಕ್ಟೋಬರ 1910 ಪ್ರಿಂಟ್

ಖಾನ್ ಬಹದ್ದೂರ್ ಎಮ್ ಅಜೀಜುದ್ದೀನ್ ಸಾಹೇಬ ಬಹದ್ದೂರರವರ ದಕ್ಷಿಣ ಕನ್ನಡ ಜಿಲ್ಲೆಯ ತಡಳಿತೆಯು

ಕಲೆಕ್ಟರರ ಹುದ್ದೆಗಳಂಥಾ ಸರಕಾರಿ ಕಾರ್ಯನಿರ್ವಾಹಕ ಮೇಲು ಪದವಿಗಳು ದೇಶೀಯರಿಗೆ ದೊರಕುವುದೇ ಅಪರೂಪ ಇಂಥಾ ಪದವಿಗಳನ್ನು ಪಡೆಯಲು ಅರ್ಹರಾದವರು ದೊರಕುವುದೇ ಅಸದಳವೆಂತ ಹಲವು ಪ್ರತಿಕಕ್ಷಿಗಳ ವಾದವಾಗಿರುವುದು ಜಿಲ್ಲಾ ಆಡಳಿತೆಯನ್ನು ನಡಿಸಲು ಬೇಕಾದ ನ್ಯಾಯಶೀಲತೆ ಪಕ್ಷಪಾತವಿಲ್ಲದ ಮನೋಭಾವನೆ, ಕಾರ್ಯದಕ್ಷತೆ, ಸಂದರ್ಭಾನುಸಾರ ಬೇಕಾದ ಮನಸ್ಸಿನ ಧೈರ್ಯಸ್ಥೈರ್ಯಗಳು ಮೊದಲಾದ ಸಮರ್ಥ ಗುಣಗಳು ಇರುವಂದ ದೇಶೀಯರು ಅಪರೂಪವಾದ್ದರಿಂದ ಲೇ ಇಂಥ ಮೇಲು ಹುದ್ದೆಗಳು ದೇಶೀಯರಿಗೆ ದೊರಕವೆಂದನ್ನುವರು ದೇಶೀಯರಲ್ಲಿ ಇಂಥ ಅಪರೂಪ ಮಾನವನ್ನು ಸರಕಾರದವರಿಂದ ಪಡೆದ ನಮ್ಮ ಜಿಲ್ಲೆಗೆ ಪ್ರಥಮ ಸತ್ಕೀರ್ತಿಗೆ ಬಂದಿದ್ದ ದೇಶೀಯ ಜಿಲ್ಲಾ ಕಲೆಕ್ಟರರಾದ ಖಾನ್ ಬಹದ್ದೂರ್ ಎಮ್ ಅಜೀಜುದ್ದೀನ್ ಸಾಹೇಬ್ ಬಹದ್ದೂರರವರ ಸ್ವಾಗತ, ವರ್ಷಗಳ ಆಡಳಿತೆಯ ವಿಮರ್ಶೆಯು ಖಾನ್‌ಬಹದೂರರವರು ಜಿಲ್ಲೆಯಿಂದ ವರ್ಗಾಯಿಸಲ್ಪಟ್ಟ ಈ ಸಂದರ್ಭದಲ್ಲಿ ಉಪಯುಕ್ತವಾಗಿರುವುದು ಸ್ವದೇಶಸ್ಥರು ಈ ಪದವಿಗಳಿಗೆ ನೇಮಿಸಲ್ಪಟ್ಟಲ್ಲಿ ಪ್ರತಿಕಕ್ಷಿಗಳ ಮೇಲಿನ ವಾದಕ್ಕೆ ಎಷ್ಟು ಆಸ್ಪದವಿರುವುದೆಂಬುದಕ್ಕೆ ಇದರಿಂದ ನ್ಯಕ್ತವಾಗಬಹುದು.

ಸಾಮಾನ್ಯವಾಗಿ ಜಿಲ್ಲಾ ಕಲೆಕ್ಟರರುಗಳಿಗೆ ಅವರು ನಡಿಸುವ ಆಡಳಿತೆಗಳಲ್ಲಿ ಹೆಚ್ಚಿನ ಸ್ವಾತಂತ್ರ್ಯವಿದ್ದರೂ ಇವರ ಅಧಿಕಾರವಲ್ಲಿಗೂ ರವಿನ್ಯೂ ಬೋರ್ಡು ಮೊದಲಾದ ಸರಕಾರಿ ಸಂಸ್ಥೆಗಳ ನಿಯಮಗಳ ಅಪಕ್ಷಿಸುವುದು ಸರಕಾರಕ್ಕೂ ಪ್ರಜೆಗಳಿಗೂ ಜಿಲ್ಲಾ ಕಲೆಕ್ಟರರುಗಳು ಎಷ್ಟು ಸ್ತಾರಾಗಿರುವರು ಸರಕಾರವು ಕಲೆಕ್ಟರರುಗಳು ಮುಖೇನ ಪ್ರಜಾಹಿತವನ್ನು ಸಾಧಿಸಬೇಕಾದರೆ ಕಲೆಕ್ಟರುಗಳು ಸರಕಾರವರ ವಿಶ್ವಾಸಕ್ಕೆ ಪಾತ್ರರಾಗಿರಬೇಕು ಪ್ರಜಾಜನಗಳಿಗೆ ಸಮ್ಮಿಪಡಿಸಬೇಕಾದರೆ ಪ್ರಜೆಗಳಿಗೆ ಪ್ರೀತಿ ಗೌರವ ಬಳಿಕೆವುಳ್ಳವರಾಗಬೇಕು ಸರಕಾರವರ ಕಾರ್ಯಾಲಯದ ನಿಯಮಗಳು ಎಷ್ಟೇ ಅವಶ್ಯವಾದರೂ ಕೆಲವೊಮ್ಮೆ ಅವುಗಳಿಂದ ಪ್ರಜೆಗಳಿಗೆ ಕಷ್ಟವಾಗಿ ಬೇಕಾದ್ದರಿಂದ ತಮ್ಮ ಸ್ವಂತ ಅಧಿಕಾರವನ್ನು ಉಪಯೋಗಿಸಿದರೂ ದೊಡ್ಡ ಮನುಷ್ಯರಾದ ಕೆಲವರು ಸಂದರ್ಭಗಳಲ್ಲಿ ತಮ್ಮ ಸೌಜನ್ಯತೆಯನ್ನು ಇಷ್ಟ ಕಂಡಂತೆ ನೆರವೇರಿಸಲಾರದೆ ಸರಕಾರವರ ಸಿದ್ಧಾಂತಗಳಿಗನುಗುಣವಾಗಿಯೇ ವರ್ತಿಸಬೇಕಾಗುವುದು ಆದ್ದರಿಂದ ಕಲೆಕ್ಟರುಗಳ ಆಡಳಿತೆ ವಿಮರ್ಶೆಯನ್ನು ಮಾಡುವಾಗ ಈ ವಿಚಾರಕ್ಕೆ ಸಹಾ ಗಮನಕೊಡಬೇಕಾಗಿದೆ

ದೇಶೀಯರಾದ್ದರಿಂದ ಖಾನ್ ಬಹದೂರರವರಿಗೆ ಎಲ್ಲಾ ತರಗತಿಯ ಜನಗಳಲ್ಲಿ ಬಳಿಕೆಯಾಗುವ ಸಂದರ್ಭಗಳಿದ್ದವು ಪ್ರಜಾಹಿತವಾದ ಇಂಥ ಸಂದರ್ಭಗಳನ್ನು ನಿರ್ದಾಕ್ಷಿಣ್ಯವಾಗಿ ಕಳೆದು ಹೋಗಲು ಬಿಡದೆ ಎಲ್ಲಾ ವಿಧದ ಜನರನ್ನು ಮೇಲು ಕೀಳು ತರಗತಿಗಳ ವರೆಂಬ ಭೇದ ನೋಡದೆ ತನ್ನನ್ನು ಸಂಧಿಸಲು ವಿಶ್ವಾಸವಿತ್ತಿದ್ದರು ಇದರಿಂದ ಜಿಲ್ಲೆಯ ಇತರ ಇವರ ಕೈ ಕೆಳಗಣ ಅಧಿಕಾರಿಗಳಿಗೆ ಸಹಾ ಈ ವರ್ತನೆಯನ್ನು ಅವಲಂಬಿಸ ಬೇಕಾಗಿ ಬಂತು. ತಾವು ಸರಕಾರಿ ನೌಕರರೆಂದೆ ಪ್ರಜಾ ನೌಕರರು ಸಹಾ ಆಗಿರುವೆ ವೆಂಬ ಭಾವವು ಸರಕಾರಿ ಉದ್ಯೋಗಸ್ಥರೊಳಗೆ ಮತ್ತಷ್ಟು ಇವರ ಆಡಳಿತೆಯಲ್ಲಿ ಪ್ರಬಲವಾಯಿತು ಜನರು ಅನ್ಯಾಯ ಪಡೆಯಬಾರದೆಂಬ ಇಚ್ಛೆಯು ಇವರಲ್ಲಿ ಬಹಳ ವಾಗಿತ್ತು. ಈ ಉದ್ದಿಶ್ಯದಿಂದ ಇವರು ತನ್ನ ಆಡಳಿತೆಯ ಕಾರ್ಯವಿವರವೆಲ್ಲಕ್ಕೂ ಸಾಧ್ಯವಾದಂತೆ ತಾವೇ ಪೂರ್ಣವಾಗಿ ಗಮನಕೊಡುತ್ತಿದ್ದರಲ್ಲದೆ ಈ ವಿಷಯವಾಗಿ ಜನರ ಅಭಿಪ್ರಾಯವನ್ನು ಬಹಳ ಯುಕ್ತಿಯುಕ್ತವಾಗಿ ಪಡೆಯುತ್ತಿದ್ದರು ಸರ್ಕೀಟು ಗಳಲ್ಲಿ ಇರುವಾಗ ಅರ್ಜಿದಾರರನ್ನು ಖುದ್ದಾಗಿ ಮಾತ್ರವಲ್ಲ ಅವರ ಊರಲ್ಲಿ ಇವರ ಕಡೆಯಿಂದ ಹಾಲುಹವಾಲುಗಳೇನಿಲ್ಲುವೆಂದು ವಿಚಾರಿಸಿಕೊಳ್ಳುವ ವಾಡಿಕೆಯೂ ಇವರಲ್ಲಿತ್ತು. ಈ ವರ್ತನೆಯಿಂದ ಒಬ್ಬಿಬ್ಬ ತಪ್ಪಿತಸ್ಥ ಸದ್ಮೇಲ್ ಸ್ಟೇಟರುಗಳನ್ನೂ ಕ್ಲಾರ್ಕ್ ಮೊದಲಾದವರನ್ನೂ ತಕ್ಕಂತೆ ಶಿಕ್ಷಿಸುವರೆ ಇವರಿಗೆ ಸಾಧ್ಯವಾಯಿತು

ಪಟೇಲ ಶ್ಯಾನುಬಾಗರ ಖರ್ಚಿನಿಂದ ನಡಿಯುತ್ತಿದ್ದ ಜಮಾಬಂದಿ ದರಬಾರು ಮಹೋತ್ಸವಗಳ ನಿರರ್ಥಕ ವಿಜೃಂಭಣೆಯು ಇವರ ಆಡಳಿತೆಯಲ್ಲಿ ಪೂರ್ಣವಾಗಿ ಅದೃಶ್ಯವಾಯಿತು ಗ್ರಾಮ ಉದ್ಯೋಗಸ್ಥರ ವರ್ತನೆಗಳ ವಿವಿಧ ರಿಜಿಸ್ಟ್ರಿಗಳನ್ನೂ ಲೆಕ್ಕಗಳನ್ನೂ ಕ್ರಮವಾಗಿ ಪರಿಶೋಧಿಸಿದ್ದರಿಂದ ಗ್ರಾಮ ಅಧಿಕಾರಿಗಳಲ್ಲಿ ಸೇರಳವಾದ ನಡತೆಗೆ ಮುಂಚಿಗಿಂತ ಹೆಚ್ಚು ಅವಕಾಶವಾಯಿತು. ಪ್ರತಿ ಜಮಾಬಂದಿ ಕಾಲದಲ್ಲಿಯೂ ರೈತರ ಸಂಕಷ್ಟಗಳೇನಿರುವವೆಂದು ವಿಚಾರಿಸಿಕೊಳ್ಳುತ್ತಿದ್ದರು ಈ ಮೂಲಕ ಜಿಲ್ಲೆಯ ಜನರ ಸ್ವಭಾವವನ್ನು ಪೂರ್ಣವಾಗಿ ಅರಿತುಕೊಂಡು ತಹಸೀಲದಾರರೇ ಮೊದಲಾದ ರೆವಿನ್ಯು ಅಧೀಸರ ದುಳ್ಳಲ್ಲಿ ಕೆಲಸ ಗೌಂವದ ನೋಲಾಟವನ್ನುಂಟುಮಾಡಿ ಜೂಕಂದಾಯ ಮೊದಲಾದ ತೆರಿಗೆಗಳ ವಸೂರಿಯನ್ನು ಬಹಳ ಸಮಗ್ರವಾಗಿ ನಡಿಸುತ್ತಿದ್ದರು ಪ್ರತಿ ಫಸಲಿಯ ಅಂತ್ಯದಲ್ಲಿ ಜೂಕಂದಾಯ ವಸೂಲಾಗದೆ ಬಾಕಿ ಇದ್ದಿಲ್ಲ ಗ್ರಾಮ ಮುನ್ಸಿಫ್ ಕೋರ್ಟುಗಳು ಇವರ ಆಡಳಿತೆಯಲ್ಲಿಯೇ ಹೆಚ್ಚಾಗಿ ಪ್ರಚಾರಕ್ಕೆ ಬಂದುವು

ದೇಶೀಯರಾಗಿದ್ದು ಪ್ರಜೆಗಳಲ್ಲಿ ಸಹಾನುಭೂತಿಯುಳ್ಳವರಾಗಿದ್ದರಿಂದ ಪ್ರಜಾ ಮುಂದಾಳುಗಳು ಇವರಿಗೆ ಸಹಕಾರವನ್ನೀಯುವುದರಲ್ಲಿ ಮುಂದೊತ್ತಿ ನಿಲುತ್ತಿದ್ದರು ಮುಂದಾಳುಗಳ ಇಂಥಾ ಸಹಕಾರದಿಂದ ಪ್ರತಿನಿಧಿಗಳಾದ ನಮ್ಮ ಗವರ್ನರ್ ಸರ್ ಆರ್ಥರ್ ಲೆಮೆ ದೊರೆಸಾನಿಯವರು ಈ ಜಿಲ್ಲೆಗೆ ಬಂದಾಗ ಅವರನ್ನು ಬಹಳ ಪುರಸ್ಕಾರದಿಂದ ಸತ್ಕರಿಸಲು ಖಾನ್ ಬಹದೂರರವರಿಗೆ ಸಾಧ್ಯವಾಯಿತು ಈ ಸಂದರ್ಭದಲ್ಲಿ ಖಾನ್ ಬಹದೂರರವರ ಮೂಲಕ ಗವರ್ನರ್ ದೊರೆಸಾನಿಯವರ ಮುಂದಿರಿಸಿದ ಪ್ರಜಾ ಅಭಿಪ್ರಾಯಗಳಲ್ಲಿ ಹಲವು ಗವರ್ನರ ದೊರೆಸಾನಿಯಿಂದ ನೆರವೇರಿಸಲ್ಪಟ್ಟವು ಮಂಗಳೂರು ಮುನಿಸಿಪಲ್ ಆಫೀಸು ಇರುವ ಕಟ್ಟಡವು ಮುನಿಸಿಪಾಲಿಟಿಗೆ ಕೊಡಿಸಲ್ಪಟ್ಟಾಯಿತು ಸುರಕ್ಷಿತ ಪಡಿಸಿದ ಕಾಡುಗಳಲ್ಲಿ ಜನರಿಗೆ ಕೆಲವು ಉಪಯೋಗಗಳನ್ನು ದೊರಕಿದವು ಉಡ್ಡಿಪಟ್ಟಣದ ಮಧ್ಯ ಇರುವ ಅಜಾರು ಕಾಡನ್ನು ಸುರಕ್ಷಿತವಾಗಿ ವಿರಹಿತಪಡಿಸುವರೆ ಅಪ್ಪಣೆಯಾಯಿತು ಮಂಗಳೂರು ಪಟ್ಟಣದ ಆರೋಗ್ಯ ಅಭಿವೃದ್ಧಿಗಳಿಗೆ ತಕ್ಕಷ್ಟು ದ್ರವ್ಯಸಹಾಯವು ಸರಕಾರದವರಿಂದ ಕೊಡಿಸಲ್ಪಟ್ಟಾಯಿತು

ಖಾನ್ ಬಹದೂರರವರಿಂದ ಇಲ್ಲಿಯ ಜಿಲ್ಲಾ ವ್ಯವಸಾಯ ಸಂಘವು ಸ್ಥಾಪಿಸಲ್ಪಟ್ಟು ತಮ್ಮ ಸಮಯಾನುಕೂಲಗಳಿಗೆ ತಕ್ಕಂತೆ ಇದರ ಮೀಟ್ಗಿಂಗವು ಇವರಿಂದ ನಡಿಸಲ್ಪಡುತ್ತಿತ್ತು ಪ್ಲೇಗ್, ಕಾಲರಾ, ಸಿಡುಬುಮೊದಲಾದ ಮಾರಿ ಬೇನೆಗಳು ಎಲ್ಲಿಂದಾದ್ಯಾ ತಲೆದೋರಿದಾಗ ರೋಗ ತಲೆದ ಕಡೆಗಳಿಗೆ ಮುನ್ಸಿಪಲ್ ಚೇಯರ್‌ಮನ್ ಮೊದಲಾದ ಸ್ಥಳೀಯ ಅಧಿಕಾರಿಗಳೊಂದಿಗೆ ತೊಗಿ ರೋಗದ ಸೋಂಕಿನಿಂದ ಜನರನ್ನು ದೂರಪಡಿಸುವರೆ ಪ್ರಯತ್ನಪಟ್ಟರು ಪ್ಲೇಗು ನಿಬಂಧನೆಗಳ ಜಾರಿಯನ್ನು ಮುಂದೆ ಕೆಲವು ಆಫೀಸರು ನಡಿಸಿವಂತೆ ವೀದಿಗಳಿಗೆ ಬೇಲಿ ಮೊದಲಾದವುಗಳನ್ನು ಕಟ್ಟಿಸಿ ನಡಿಸುವ ಸಾಧನಗಳನ್ನು ಇವರು ಪೂರ್ಣವಾಗಿ ವಿಟ್ಟು ಬಿಟ್ಟು ಸೌಮ್ಯ ಉಪಾಯಗಳಿಂದಲೇ ಜನರನ್ನು ಮಾರಿಬೇನೆಗಳಿಂದ ದೂರಪಡಿಸಲು ಪ್ರಯತ್ನಪಡುತ್ತಿದ್ದರು

ಲೋಕಲ್ ಬೋರ್ಡುಗಳ ಇಂಜೀನಿಯರರನ್ನಾಗಿ ನಿಯಮಿಸಿಯುಳ್ಳವರೂ ಯತಾರ್ಥಮತರೂ ಆದ ಮಿ ರಾ ರಾ ಕೃಷ್ಣಸ್ವಾಮಿಯರರವರನ್ನು ನೇಮಿಸಿದ ಖಾನ್ ಬಹದೂರರವರ ಏರ್ಪಾಡು ಸ್ತುತ್ಯವಾಗಿರುತ್ತದೆ ಇದರಿಂದ ಲೋಕಲ್ ಬೋರ್ಡುಗಳ ಕೆಲಸಗಳಲ್ಲಿ ಮುಖ್ಯವಾದ ರಸ್ತೆ ದುರುಸ್ತಿ ಮೊದಲಾದವುಗಳ ಬಗ್ಗೆ ದುರ್ವ್ಯಯವು ಆಗದಂತೆ ಉಪಾಯವಾಯಿತು

ವಿದ್ಯೆಯಲ್ಲಿ ಹಿಂದುಳಿದ ಜಾತಿಗಳಲ್ಲಿ ವಿದ್ಯಾಭಿರುಚಿಯನ್ನುಂಟುಮಾಡಿ ಅವುಗಳ ಉಬವೃದ್ಧಿಯನ್ನು ಖಾನ್‌ಬಹದೂರರವರು ಸಾಧಿಸಿದರು ಒಂಟರ ಯಾನಾಡವರ ವಿದ್ಯಾ ಸಂಘದ ಪೋಷಕರಾಗಿದ್ದರು ನುಹಮ್ಮದೀಯರಿಗೆ ತನ್ನಿಂದಾಗುವ ವಿದ್ಯಾ ಪ್ರೋತ್ಸಾಹವನ್ನು ಕೊಟ್ಟಿರುವರು ಪಂಚಮರ ದೀನ ಸ್ಥಿತಿಗೆ ಗಮನ ಕೊಟ್ಟು ಜಿಲ್ಲೆಯ ಪೀಡಿತ ಜನೋದ್ಧಾರಕ ಸಂಘಕ್ಕೆ ತನ್ನಿಂದಾಗುವ ಸಹಾಯವನ್ನು ಮಾಡಿರುವರು

ಖಾನ್‌ಬಹದೂರರವರು ಜಿಲ್ಲೆಯನ್ನು ಬಿಟ್ಟುಹೋಗುವ ಸಂದರ್ಭದಲ್ಲಿ ಹಿಂದೂಗಳೂ, ಮಹಮ್ಮದೀಯರೂ, ಕ್ರೈಸ್ತರೂ ಇವರಿಗೆ ಖಾಸಗಿಯಲ್ಲಿ ಮಾಡಿದ ಉಪಚಾರಗಳು ಇವರ ಮೇಲಿರುವ ಜನರ ವಾತ್ಸಲ್ಯಕ್ಕೆ ಸಾಕ್ಷ್ಯವಾಗಿರುವವು.

ಮಾನ್ಯ ಬಿಡದೊರೆಯವರ ಆಡಳಿತೆಯು 'ನ್ಯೂನಾತಿರಿಕ್ತಗಳಲ್ಲಿಲ್ಲದ್ದೂ, ಅಥವಾ ಬಾ ಳಿಕ್ಕರಾಗಿ ಬರುವ ಆಂಗ್ಲೇಯರಿಂದ ಇಂಥಾ ಆಡಳಿತೆಯು ಸಾಧ್ಯವಲ್ಲವೆಂಬ ನಿಮ್ಮವಾದವಲ್ಲ ಮಾಜಿ ಜಿಲ್ಲಾ ಕಲೆಕ್ಟರರುಗಳಾಗಿದ್ದ ಸ್ಪಿಕ್ ವೆಟ್ಸ್ಟರ್ ಮೊದಲಾದ ಆಂಗ್ಲೇಯ ದೊರೆಗಳವರ ಆಡಳಿತೆಯ ಪ್ರಜಾರಂಜಕತೆಯನ್ನು ಕೇಳಿ ಬಲ್ಲೆವು ಆಗ್ಯೆ ಕಲೆಕ್ಟರ್ ದೊರೆಗಳವರ ಕೆಳ ನೌಕರರಲ್ಲಿಯೂ ಪ್ರಜೆಗಳಲ್ಲಿಯೂ ಇಂಗ್ಲೀಷು ಭಾಷಾ ಪರಿಚಿತಿಯು ವಿರಳವಾದ್ದರಿಂದಲೂ ವಿಲಾಯತಿಗೆ ಹೋಗುವ ಸೌಕರ್ಯಗಳೂ ಕಡಿಮೆಯಾದ್ದರಿಂದಲೂ ಕಲೆಕ್ಟರರು ಮೊದಲಾದ ಹುದ್ದೆದಾರರು ಬಹಳ ಕಾಲದವರೆಗೆ ಇಲ್ಲಿಯೇ ಇದ್ದು ದೇಶಭಾಷೆಗಳನ್ನು ಕಲಿತುಕೊಂಡು ಪ್ರಜೆಗಳ ಳಿಕೆಯನ್ನು ಮಾಡಲು ಅವಕಾಶ ದೊರಕುತ್ತಿತ್ತು ಇಂಗ್ಲೀಷ್ ಭಾಷೆಯ ಪರಿಚಿತಿಯು ಒನರಲ್ಲಿ ಹೆಚ್ಚಿ ವಿಲಾಯತಿಗೆ ಹೋಗುವ ಪ್ರಯಾಣ ಸೌಕರ್ಯಗಳು ಬಹಳವಾಗಿರುವುದರಿಂದ ಮೊದಲು ಕಲೆಕ್ಟರರುಗಳಿಗೆ ಪ್ರಜಾ ಬಿಳಿಕೆಗೆ ಇಷ್ಟವಿ ಸಂದರ್ಭಗಳು ಈಗ ಇರುವುದಿಲ್ಲ ಪ್ರಜಾ ಬಳಿಕೆಯೂ ಸಹಾನುಭೂತಿಯೂ ಕಲೆಕ್ಟರರುಗಳ ಆಡಳಿತೆಗಳಿಗೆ ಮುಖ್ಯವಾಗಿ ಬೇಕಾದವು

ಗ್ರಾಮ ಮಾಹಿತಿ

ಆಳಿದ ಊರಿಗೆ ಉಳಿದವನೇ ಗೌಡ

ತಾಲೂಕು ಸರಕಾರಿ ಆಸ್ಪತ್ರೆಗಳಲ್ಲಿ ತಾಲೂಕು ಪಟ್ಟಣಗಳ ಹೊರತು ಮಿಕ್ಕ ಯಾವ ಊರುಗಳನ್ನು ಹೋಗಿ ನೋಡಿದರೂ ಅಲ್ಲಿಯವರಿಗೆ ಕೇಳಿದರೂ ನಿವಾಸ ಸ್ಥಾನಗಳೂ ಹಾಳುಬಿದ್ದ ಸ್ಥಿತಿಯಲ್ಲಿರುವಂತೆ ತೋರುವವು ವ್ಯಾಪಾರ ವೈವಾಟು, ಜಾಗಗಳ ಆಮದು ರಫ್ತು ಮೊದಲಾದ ಪೂರ್ವವಾಸ್ತವ ಚಟುವಟಿಕೆಯು ಇಲ್ಲದೆ ಊರುಗಳಲ್ಲಿ ಹೆಚ್ಚಿನ ಜೀವಕಳೆ ಇಲ್ಲದ ಅತಿ ವಿಕಾರಕರವಾಗಿ ಗತಿಯಿಲ್ಲಿರುತ್ತವೆ ಪ್ರಹರಕ್ಕೆ ಎರಡು ಪ್ರಹರಕ್ಕೊಮ್ಮೆ ಹುಟ್ಟಿಗಾತಿಯು ಸುತ್ತಾಟಿಯ ಸಾಮಗ್ರಿಗೂಸ್ಕರ ಟಿಂಗಡಿಗಳಿಗೆ ನಾಲ್ಕು ತಾಸುಗಳ ಕಾಲವೂ ಕಯದಲ್ಲಿ ಅವಕಾಸು ಟಿಕ್ಕಾಸೆ ಕಡಿಮೆವಾಬೇಕೆಂತ ಚರ್ಚೆಮಾಡಿ ಕಟ್ಟಕಡೆಗೆ ಈ ರೀತಿಯ ಕುಸಿ ಗಾದ ವ್ಯಾಪಾರವನ್ನು ಸಹ ನಗದಾಗಿ ಕೊಡುವರು ಇಲ್ಲದೆ ಲಕ್ಕಕ್ಕೆ ಏಯಿರಿಸಿ ಅತಿ ತುರ್ತಾದರೆ ಅಪ್ಪಣೆ ಕೊಟ್ಟು ಹೋಗುವನು ಜನ ಸಾಮಾನ್ಯರ ಸಂಪನ್ನತೆಗೆ ಮುಖ್ಯ ಕಾರಣವಾದ ಬೆಳೆ ರಾದ ನಡುತರಗತಿಯವರು ದಿನೇ ದಿನೇ ನಿಷ್ಕರ ಸಂಖ್ಯೆಯಲ್ಲಿ ಕಡಿಮೆಯಾಗಿಸುತ್ತ ಬಂದು ಈ ಹಳ್ಳಿ ಊರುಗಳಲ್ಲಿ ತಮ್ಮ ಜೀವನೋಪಾಯವನ್ನು ಕಸ್ಪಿಸಲಾರದೆ ಕುಟುಂಬವಿಡುವ ಶಹರುಗಳನ್ನು ಸೇರುತ್ತಿರುವರು ಈ ಪರಿಸ್ಥಿತಿಯಲ್ಲಿ ಇಂಥಾ ಊರುಗಳಿಗೆ ಬೇ ಸಾಗುವಳಿಗೂ ಇತರ ಕಾವು ಕುಲಿ ಕೆಲಸಗೂ ಬೇಕಾದ ಜನ ಬಗ್ಗರೂ ಇಂಥ ವಿಪನ್ನರ ಪರಿಸ್ಥಿತಿಯಿಂದ ಪ್ರಯೋಜನವನ್ನು ಪಡೆದು ಸಾಧನಗಳಿಂದ ದ್ರವ್ಯವನ್ನು ಸಂಪಾದಿಸಿ ಬಿಚ್ಚು ಕೊಳ್ಳೋಣವೆಂದೂ ಅಲ್ಲಲ್ಲಿ ಹೊಂಚಾ ಗಿರುವರು ಇದಂಗೇ 'ಆಳಿದ ಊರಿಗೆ ಉಳಿದವನೇ ಗೌಡ' ಎಂಬ ಲೋಕೋಕ್ತಿಯು ಸಲ್ಲುವುದು

ನಡುತರಗತಿಯವರು ಹಳ್ಳಿ ಊರುಗಳಲ್ಲಿ ಪೂರ್ವಕಾಲದಲ್ಲಿ ಮಾಡಿಕೊಂಡಿರುವ ಅಥವಾ ಈ ಊರುಗಳಲ್ಲಿರುವ ಸಂಪನ್ನರಲ್ಲಿ ಸಜ್ಜನರ ಇಲ್ಲವೇ ಲ್ಲವೆಂಬ ಕಾಲ್ಪನಿಕ ಪ್ರಾಯವಲ್ಲ ಆದರೆ ತಮ್ಮ ಪರಿಸ್ಥಿತಿಯಿಂದ ಬಿಡುಗಡೆಯಾಗಲಿಚ್ಛಿಸುವವರೂ ಪರಿಸ್ಥಿತಿಯಿಂದ ಬಿಡುಗಡೆಯಾಗಿರುವವರೂ ಅವರವರ ಸ್ವಿತ್ವಂತರದ ಪೂರ್ವ ವಿಪರ್ಯದಿಂದ ಪ್ರತಿ ಯ ಗ್ರಾಮ ಸೋಟಿಕನ ಲಕ್ಷ್ಯಕ್ಕೆ ಮುಂದಾಗಿ ತೋರುವರು

ಈ 'ಉಳಿದ ಗೌಡರು ಸಂಖ್ಯೆಯಲ್ಲಿ ಅತ್ಯಲ್ಪರಾದರೂ ಸಾಮಾನ್ಯವಾಗಿ ಲ್ಲಾ ಯ ಬ್ರಾಹ್ಮಣ ಶೂದ್ರ ಮೊದಲಾದ ಎಲ್ಲಾ ಜಾತಿಗಳಲ್ಲಿಯೂ ಇರುವರೆನ್ನ ಬುದು ಇವರಲ್ಲಿ ವ್ಯವಸಾಯ ಕಸಬಿನ ಶೂದ್ರರು ಹಳ್ಳಿಗಳಲ್ಲಿಯೂ ವ್ಯಾಪಾರ ಕಸಬಿನ ಬ್ರಾಹ್ಮಣ ಮೊದಲಾದ ಜಾತಿಯವರೂ ಹಳ್ಳಿಗಳ ಸಮೀಪವಿರುವ ಊರುಗಳಲ್ಲಿಯೂ ನಿವಾಸಿಸಿರುವರು ಇಂಥ 'ಗೌಡ'ರವರ ಕಾರ್ಯವ್ಯಾಪಾರ ವೃತ್ತಾಂತದೊಂದಿಗೆ ಮುಂದಿನ ದಿನ ಸ್ಥಿತಿಯ ವಿವರವನ್ನು ಮಂಗಳೂರು ತಾಲೂಕಿನ ಕೆಲವು ಹಳ್ಳಿಗಳಲ್ಲಿ ಸಂಗ್ರಹಿಸಿಕೊಂಡು ಬರೆದಿರುವೆ.

ಲೇಖದ ಅನುಕೂಲತೆ ಬಗ್ಗೆ ಈ ಗೌಡರನ್ನು ಮೇಲೆ ಹೇಳಿದಂತೆ ಎರಡು ವರ್ಗಗಳಾಗಿ ವಿಂಗಡಿಸಬಹುದು. ಪಟ್ಟಣ ಗೌಡರು ಮತ್ತು ಗ್ರಾಮ ಗೌಡರು ಪಟ್ಟಣ ಗೌಡರವರ ವೃತ್ತಿಯು ಪೂರ್ಣವಾಗಿ ವ್ಯಾಪಾರವಾಗಿರುವುದೆಂದು ಹೇಳಲಾಸ್ಪದವಿಲ್ಲ ಅಂಗಡಿ ಮುಂಗಟ್ಟುಗಳನ್ನು ತೆರೆದುಕೊಂಡು ಭೂಮಿಯ ವಕ್ಕಲುಗಳಿಂದ ಅಕ್ಕಿ ಮೊದಲಾದ ಧಾನ್ಯಗಳನ್ನು ಪಡೆದು ಪರಬಂದರಗಳಿಗೂ ಪರ ಊರುಗಳಿಗೂ ಸಾಗಿಸುವ ವ್ಯಾಪಾರವನ್ನು ಅಲ್ಲಲ್ಲಿ ಇವರಲ್ಲಿ ಕೆಲವರು ಮಾಡುತ್ತಿರುವರು. ಇನ್ನು ಕೆಲವರು ನೂಲು ವಜವಳಿ ವ್ಯಾಪಾರವನ್ನು ನಡಿಸುತ್ತಿರುವರು ಮತ್ತು ಕೆಲವರು ಇನ್ನಾವ ದಾದರೂ ವ್ಯಾಪಾರ ನೆವವನ್ನು ಹೇಳಿ ಅಂಗಡಿಗಳಲ್ಲಿ ಕೂತುಕೊಂಡಿರುವರು. ಆದರೆ ಈ ಎಲ್ಲಾ ವ್ಯಾಪಾರ ವಿಧಾನಗಳಲ್ಲಿ ಅಂತರ್ಗತವಾಗಿರುವ ಏಕೋದ್ದಿಶ್ಯವನ್ನು ಸ್ವಲ್ಪ ಪರ್ಯಾಲೋಚನೆಯಿಂದ ತಿಳಿಕೊಳ್ಳಬಹುದು

ಸಶೇಷ.

ಮಹಾ ರಾಣಾ ಗೃಹಶೀಲೆ

(ಕಳೆದ ಸಂಚಿಕೆಯ ದ ಮುಂದುವರಿದುದು)

ಬಿ ಆನಂದ ರಾವ್ ಇವರಿಂದ

೨.

ಪರಶುರಾಮ ಸೃಷ್ಟಿಯೋತ್ಪನ್ನ ತುಳು ರಾಜ್ಯವು ಇದರ ಪೂರ್ವಕ್ಕೆ ಶ್ರೀ ಕುಮಾರಧಾರಿಯು ಮೂಲಸ್ಥಾನವೆನಿಸಿ ಪ್ರಸಿದ್ಧಿಗೊಂಡ ಪಶ್ಚಿಮ ಪರ್ವತ ಶ್ರೇಣಿ. ರಾಜ್ಯಕ್ಕೆ ಪಶ್ಚಿಮಕ್ಕೆ ಅವಾರವಾದ ಒಲಸಿದಿ

ಶಾ ಶ ಹನ್ನೊಂದನೇ ಶತಮಾನದ ಉತ್ತರಾರ್ಧದಲ್ಲಿ ರಾಜಕುಲತಿಲಕ ಚಂದ್ರ ಶೇಖರ ಸಾರ್ವಭೌಮನು ಈ ತುಳು ರಾಜ್ಯದ ಸಿಂಹಾಸನದಲ್ಲಿ ವಿರಾಜಿಸುತ್ತಿದ್ದನು. ಸರ್ವ ಮಂಗಳಾಸ್ಪದವಾದ ಮಂಗಳಾಪುರವು ರಾಜರ ಪ್ರಧಾನ ನಗರವಾಗಿದ್ದು ಮಹಾ ರಾ ನ ವಾಸಸ್ಥಾನವಾಗಿತ್ತು

ಫಾಲ್ಗುಣ ಶುದ್ಧ ನವಮಿ ದಿವಸ ಪ್ರಭಾತದಲ್ಲಿ ಮಂಗಲಾಪುರವು ಉತ್ಸವ ವಾ ರವಾಗಿ ತೋರಿಸಿತು ರಾ ಮಂದಿರವು ಶ್ಯಾಮಲವರ್ಣವುಳ್ಳ ನವಪಲ್ಲವರಾತಿ ಯಿಂ ಅಲಂಕೃತವಾಯಿತು ರಾಜ ಪ್ರಸಾದದಲ್ಲಿ ನವರಂಗಿನ ಪತಾಕವು ವಕ್ಷಸ್ಥಳ ದಲ್ಲಿ ಪರಶು ಚಿತ್ರವನ್ನು ಧರಿಸಿ ಧ್ವಜಸ್ತಂಭದ ಕೊನೆಯಲ್ಲಿ ನಿಂತು ಗಾಳಿಯೊಡನೆ ಸರಸ ವಾಡುತ್ತಿತ್ತು ಇದೇನು? ರಾಜಧಾನಿಯಲ್ಲಿ ಅಕಸ್ಮಿತವಾದ ಈ ಆನಂದೋತ್ಸವ? ಸಮ್ರಾಟನಾಗಿ ಬಂದ್ರಶೇಖರನು ಮೃಗ ಬೇಟೆಗೆ ಹೋಗುವನು ಈ ದಿನ ಹಿಂದಿರುಗಿ ರವನು ಎಂಬಾಗಿನ ಸಂತೃಪ್ತಿಯೋ ಆನಂದೋತ್ಸವವು

ತುಸ ಹೊತ್ತಿನಲ್ಲೇ ಮಹಾರಾಜನು ಅನುಚರ ಅಂಗರಕ್ಷಕರೊಡನೆ ಬಹಳ ಸಮಾ ರಂಭದಿಂದ ನಗರವನ್ನು ಪ್ರವೇಶಿಸಿದನು ಪುರದ್ವಾರದಲ್ಲಿ ಪೌರಜನರೆಲ್ಲರೂ ಒಟ್ಟು ಕೂಡಿ ಪ್ರಭುವಿನ ಆಗಮನವನ್ನು ನಿರೀಕ್ಷಿಸುತ್ತಲಿದ್ದರು ಮಹಾರಾಜನನ್ನು ಕಂಡ ಕೂಡಲೇ ಸರ್ವರೂ ಸಂಭ್ರಮತ್ ಪ್ರಣಾಮವನ್ನು ಮಾಡಿದರು ಅವರೊಳ್ಳ ಮುಂದಾಗಿ ಮಹಾರಾಜ ಚಂದ್ರಶೇಖರನಿಗೆ ಕಂಠದಲ್ಲಿ ಪುಷ್ಪಮಾಲೆಯನ್ನು ಧರಿಸಿ ದಿಯಾಗಿ —"ಲೋಕದಲ್ಲಿ ಅದ್ವಿತೀಯ ಕೀರ್ತಿಧಾರಿಯಾದ ಶ್ರೀಮತ್ ಸ್ಮರಹರಾವತಾರರಾದ ಚಂದ್ರಶೇಖರನಿಗೆ ರಾಜಭಕ್ತರಾದ ನಮ್ಮೆಲ್ಲರ ಶಿರಸಾಷ್ಟಾಂಗ ದಂಡಪ್ರಣಾ ಮಗಳು ಮಹಾಸ್ವಾಮಿಯವರ ಸವಾರಿಯು ಜಯಕ್ಕೆ ತವಾಗಿ ತಂತ್ರಿಪ್ರವರರಿಗೆ ಮಂಗಳಾರತಿಯ ದಕ್ಕೆ ಸಾದಸೇವಕರಾದ ನಮ್ಮೆಲ್ಲರಿಗೂ ವರಮಾ ನವು ಮಾಡಿತು ಸ್ವಾಮಿಗಳವರು ಮನಃಪೂರ್ವಕವಾಗಿ ಸುಸ್ವಾಗತವನ್ನೆನ್ನು ತ್ತಾ ನಮ್ಮ ಆತ್ಮಗತ್ಯವಾದೊಂದು ಅರಿಕೆಯನ್ನು ಪ್ರೀತಿಯಿಂದ ಆಲಿಸ ಬೇಕು ಸ್ವಾಮಿಗಳವರ ಸಂಸ್ಥಾನಕ್ಕೆ ಯಜಮಾನರಾಗಿರುವ ಪರಶುರಾಮ ಕ್ಷೇತ್ರದ ಇತರ ಕ್ಷಾಪಣಿಯವಾದ ಮೂಲಸ್ಥಾನಗಳು ಪೂರ್ಣವಾಗಿ ಪ್ರಜಾ ನಿಗೆ ಸಂಪೂರ್ಣವಾಗಿವೆ ಆದರೂ ತಾವುಗಳು ವಿವಾಹ ಮಾಡಿಕೊಳ್ಳಲಿಲ್ಲವೆ ಎಂಬೊಂದು ಚಿಂತೆಯು ನಮ್ಮೆಲ್ಲರನ್ನೂ ಬಾಧಿಸುತ್ತಿದೆ. ಭುವ ನಾಳ್ವ ಈ ಪ್ರೌಢಾವಸ್ಥೆಯಲ್ಲಿ ನಮ್ಮ ಆಯುಸ್ಸನ್ನು ಕಾರ್ಮುಗಿಲಿನ ಮಿಂಚಿನಂತೆ ಮಾಯವಾದಿ ಹೋಗುವಂತಾಗಿರುವುದು ಈಗ ತಮ್ಮ ಜೀವ್ಯವು ಆದರೆ ಪ್ರಾಯೆಪ್ಪಿ ಮೇಲಾದ ಹಾಗೆ ಮುಂದೆ ಸಾಗುವುದು ಈ ದೇಹವು ನಶ್ವರವಾಮದು ಧೃಮದೂತರು ಬಂದಾಗ ಎಂದಿಗೆ ನಾವು ಅವರ ಸಾರಕ್ಕೊಳ್ಳಾಗುವೆವೆಂದು ಹೇಳಲಸಾಧ್ಯವು. ಆದುದರಿಂದ ಅತ್ಯಂತ ವಿಧೇಯರಾದ ಮತ್ತು ರಾಜಭಕ್ತರಾದ ನಮ್ಮ ಪ್ರಾರ್ಥನೆಯನ್ನು ಅಂಗೀಕರಿಸಬೇಕು ತಮ್ಮ ಅನುಮತಿ ಇದ್ದರೆ ತಮ್ಮ ಪದವಿಗೆ ಯೋಗ್ಯಳಾದ ಒಬ್ಬ ರಾಜಕುಮಾರಿಯನ್ನು ತರುವೆವು" ಎಂದು ವಿಜ್ಞಾಪಿಸಿದನು

ಅವರ ವಿನಯಪೂರಿತವಾದ ನುಡಿಗಳನ್ನು ಕೇಳುತ್ತಲೇ ಮಹಾಂತಃಪುರವನ್ನು ಪ್ರವೇಶಿಸಿದನು. ಅಲ್ಲಿ ಮಹಾರಾಜನು ಮಂತ್ರಿಯನ್ನು ಕರೆದು ಹೋಗಿ ಕರುಣಾಕರವು ಉಕ್ಕಿ ಒಂತು ಆತನು—"ಪ್ರೇಮಾಸ್ಪದರಾದ ಮಹಾಶಯರೇ! ನಿಮ್ಮ ರಾಜಭಕ್ತಿಯಲ್ಲಿ ವಿಶ್ವಾಸವಿಟ್ಟು ನಿಮ್ಮ ಇಚ್ಛೆಯನ್ನು ಪೂರೈಸುವೆನು ವಿವಾಹದ ವಿಷಯದಲ್ಲಿ ಅನುಮತಿಯನ್ನು ಕೊಟ್ಟೆನು ಆದರೂ ನಾನು ಪಣೆಯ ಪ್ರಕಾರ ಕನ್ನೆಯನ್ನು ಹುಡುಕುವ ಕೆಲಸವನ್ನು ನಿಮ್ಮ ಮೇಲಿರಿಸಿದಿಲ್ಲ

ಬಂದರೆ ಅವಳಿಗೆ ಹೆಣ್ಣಾಗಿ ಹೆತ್ತವರ ಗುಣಗಳೇ ಬರುವುದಿಲ್ಲ, ಗುಣಗಳು ಬರುವುದು ವೈನಾನುಗ್ರಹದಿಂದಲೇ ನರಿ, ಪರಂತು ಮಾತಾಪಿತೃ ಪರಂಪರೆಯಿಂದಲ್ಲ. ಕನ್ಯೆಯು ಕುಲೀನಳಾದರೂ ಸುಶೀಲಳಾಗದೆ ಹೋಗುವ ಸಂಭವವುಂಟು. ಆದುದರಿಂದ ನಿನ್ನಿಕೆಯನ್ನು ಹುಡುಕಿ ತೆಗೆಯುವ ಕಾರ್ಯವನ್ನು ನಾನೇ ವಹಿಸಿ ಕೊಳ್ಳುವೆನು. ನನ್ನ ವಿವಾಹ ಸುಖಾದಿ ಸಕಲ ವಿಷಯಗಳೂ ಈಶ್ವರಾಧೀನವಾಗಿರುವುವು. ಆತನ ಇಚ್ಛವಿದ್ದಂತಾಗಲಿ! ಆದರೆ ನಾನು ಯಾವ ಲಲನೆಯನ್ನು ಪ್ರೇಮಿಸುವೆನೋ ಆವಳನ್ನೇ ಪರಿಗ್ರಹಿಸುವೆನು ಎಂತಹ ದರಿದ್ರ ಕನ್ನೆಯಾದರೂ ಸರಿ, ಅವಳ ಸ್ಥಿತಿಗತಿಗಳನ್ನು ಲಕ್ಷಿಸದೆ ನೀವು ಅವಳನ್ನು ರಾಜಕುಮಾರಿಯಂದೇ ಭಾವಿಸಿ ತಕ್ಕ ಬಹುಮಾನ ಮಾಡಬೇಕು ಈ ವಿಷಯದಲ್ಲಿ ಏನೂ ಅಭ್ಯಂತರ ಬರಕೂಡದು." ಎಂದನು.

ಆಗ ಪ್ರಜಾಜನರೆಲ್ಲರೂ ಮಹಾರಾಜ ಚಂದ್ರಶೇಖರನ್ನು ಪುನಃ ಅಭಿವಂದಿಸಿ ಆತನ ಪ್ರತಿಜ್ಞೆಯನ್ನೂ ಶೀಲಸ್ವಭಾವವನ್ನೂ ಸ್ಮರಿಸುತ್ತ ತಂತಮ್ಮ ಮನೆಗಳಿಗೆ ಹೋದರು

೩

ಮುಕ್ತಪುರವು ದರ್ಶನಾಯೋಗ್ಯವಾದ ಸ್ಥಳವು ಶ್ರೀ ಮಹಾಲಿಂಗೇಶ್ವರನ ಸಾನಿಧ್ಯದಿಂದ ಪವಿತ್ರತೆಯನ್ನು ಹೊಂದಿ ದಶ ಜ್ಯೋದ್ಯಗಳಿಂದ ರೋಚಿಸುತ್ತಿರುವುದು ಕೃಷಿವಲನು ಮಾಡಿದ ಶ್ರಾಯವಿಂದ ರಕ್ತಮಯವಾಗಿ ಕೆಂಪೇರಿದ ಮೈಯುಳ್ಳ ನಂದಿಯು ಶ್ರೀ ಮಹಾಲಿಂಗೇಶ್ವರನ ಪದತಲಸ್ಪರ್ಶನ ಮಾತ್ರದಿಂದಲೇ ಪೂರ್ಣ ಶಿಲಾಮಯವಾದ ವಜ್ರದೇಹವನ್ನು ತಾಳಿ ಆ ಬವಾನಿ ಪತಿಯ ಆವಿರ್ಭಾವೆಗಳನ್ನು ಸದಾ ಸೇಕ್ಷತ್ತಿರುವುದು. ಆ ಗಿರಿಜೇಶನ ಪ್ರಸಾದವನ್ನು ಸೇವಿಸಿದ ಮಾತ್ರದಿಂದಲೇ ಹುಟ್ಟುಎಂಜೆಯಾಗಿದ್ದವರು ಸಹ ಗರ್ಭಲಕ್ಷಣಗಳನ್ನು ತೋರಿಸುವರು ಆತನ ನಮನ ಸಮಕ್ಷಮದಲ್ಲೇ ಇದ್ದು ಆತನು ಅಮೃತ ಸ್ನಾನ ಮಾಡಿದ ತೀರ್ಥೋದಕವನ್ನು ನಿರಂತರ ವಾನ ಮಾಡಿ ಪವಿತ್ರವಾದೊಂದು ಕಾಸಾರದ ಸ್ಪತ್ಪೋದಕವಪ್ಪ ಜಾತಿ ಮುತ್ತಿನ ಜಿಪ್ಪುಗಳು ಬೆಳೆಯುವುವು.

ಈ ಪುಣ್ಯ ಕ್ಷೇತ್ರದಲ್ಲಿ ಸುದಾಮ ಗರೀಬನೂ ವಿಷ್ಣು ಭಕ್ತನೂ ಆದ ರಾಮದಾಸನೆಂಬೊಬ್ಬ ಕೃಷಿವಲನಿದ್ದನು ಕೆಸರಿನಲ್ಲಿ ಪದ್ಮವು ಹುಟ್ಟುವ ಹಾಗೆ ಇವನಲ್ಲಿ ತ್ರಿಲೋಕಸುಂದರಿಯಾದೊಂದು ಕನ್ಯಾರತ್ನವು ಜನ್ಮಿಸಿತ್ತು ಅವಳಿಗೆ ಗೃಹಶೀಲೆಯೆಂದು ನಾಮಕರಣ ಮಾಡಿದ್ದರು ಪ್ರಣಯಿಜನ ವತ್ಸಲೆಯಾದ ಈ ಸುಕುಮಾರಿಯು ದಿನೇ ದಿನೇ ಶುಕ್ಲಪಕ್ಷದ ಚಂದ್ರನಂತೆ ತನ್ನ ಸೌಂದರ್ಯದ ತೇಜಸ್ಸನ್ನು ಸುತ್ತಮುತ್ತಲೂ ಪಸರಿಸುತ್ತ ಪಿತನಾದ ವೃದ್ಧ ರಾಮದಾಸನಿಗೆ ಸದಾ ಆನಂದವನ್ನುಂಟುಮಾಡುತ್ತಿದ್ದಳು

ಗೃಹಶೀಲೆಯು ಒಪಳ ದೌರ್ಭಾಗ್ಯ ಸ್ಥಿತಿಯಲ್ಲೇ ಬಾಳಿದ್ದಳು ದುರ್ವ್ಯಸನಗಳ್ಯಾವುವೂ ಅವಳಲ್ಲಿರಲಿಲ್ಲ ಅವಳಿಗೆ ಇನ್ನೂ ವಯಸ್ಸು ಮೂರಿರಲಿಲ್ಲ ಹದಿನಾರು ವರುಷ ನ್ಯಾಯದ ಬಾಲಕಿ ಬಹು ಸಾದು ಸ್ವಭಾವದವಳು. ಸುಗಂಧದ ಫುಂಜವೇ ಮೂರ್ತಿಗೊಂಡದೋ ಎಂಬ ಹಾಗೆ ತೋರುತ್ತಿದ್ದಳು ಶೈಶವಾವಸ್ಥೆಯಿಂದ ವಯೋವೃದ್ಧತೆಯವಸ್ಥೀಕನೂ ಆದ ಜನಕನ ಪಾದಸೇವೆಯಲ್ಲಿಯೇ ಆಸಕ್ತಳಾಗಿದ್ದಳೆಷ್ಟು ಈಶ್ವರನಲ್ಲಿ ಭಕ್ತಿ ಪೂರಿತಳಾಗಿ ಮುಂಜಾನೆಯಿಂದ ಸಂಜೆಯವರೆಗೆ ಶವವಚ್ಚದರೂ ಅಲಸದೆ ತಂದೆಯಂತೆ ಯಾವುದಾದೊಂದು ಕೆಲಸವನ್ನು ಮಾಡುತ್ತಲೇ ಇರುವಳು ಅಲ್ಲಲ್ಲಿ ತುಂಬಿರುವ ಬಿರು ಮಲೆಯ ಕಟಕಗಳಲ್ಲಿನ ಹಣ್ಣುಹಂಪಲುಗಳನ್ನು ತಂದು ಪಕ್ವಮಾಡಿ ತನ್ನ ತಂದೆಗಿತ್ತು ಅವನಿಗೆ ಮನಸ್ಸಿಗೆ ದುಃಖವಾಗಲೀ ದೇಹಕ್ಕೆ ಬೇನೆಯಾಗಲೀ ಕಿಂಚಿತ್ತಾದರೂ ಉಂಟಾಗದ ಹಾಗೆ ಬಹು ಎಚ್ಚರವಾಗಿದ್ದಳು ಕೆಲವು ಮಕ್ಕಳು ಸಂಸಾರಿಗಳಿಗೊಮ್ಮೊಮ್ಮೆ ವ್ಯಸನಕ್ಕೆ ಕಾರಣವಾಗುವರೆಂದನ್ನುವರು ಗೃಹಶೀಲೆಗೆ ಪ್ರೌಢಶ ವರುಷ ತುಂಬಿ ಪರಿಣಯೋಚಿತ ವಯಸ್ಸಿನವಳಾದಳು ಪಿತನಾದ ರಾಮದಾಸನು ಬಹಳ ಯೋಚನೆಯಲ್ಲಿದ್ದನು

ಹೀಗಿರುತ್ತಿರಲೊಂದು ದಿನ ಹಣ್ಣುಹಂಪಲುಗಳನ್ನು ತರುವ ಸಲುವಾಗಿ ಆರಣ್ಯಕ್ಕೆ ಹೋಗಿದ್ದ ಗೃಹಶೀಲೆಯನ್ನು ಕಾಡುಕೋಣದ ಪಾತದಿಂದ ಚಂದ್ರಶೇಖರನು ತಪ್ಪಿಸಿದ್ದು ನಮಗೆ ಮೊದಲೇ ಗೊತ್ತಿದೆಯಷ್ಟೆ! ಚಂದ್ರಶೇಖರನು ಗೃಹಶೀಲೆಯನ್ನು ನಗರಕ್ಕೆ ತಂದು ಮನೆಯಲ್ಲಿ ಬಿಟ್ಟು ಹೋಗಿದ್ದನು. ಅಂದಿನಿಂದ ಗೃಹಶೀಲೆಯು ಅಧಿಕವಾದ ಚಿತ್ತವಿಕಾರವನ್ನು ತೋರಿಸುತ್ತಿದ್ದಳು. ಒಮ್ಮೆ ಮೆಲೋಗರಕ್ಕೆಂದು ಭಾವಿಯ ತಪ್ಪಲ್ಲಸ್ಥಿತದೊಳಗೆ ಗಜನಿಂಬೆಯನ್ನು ಹಿಸುಕುವಳು! ಇನ್ನೊಮ್ಮೆ ರಸಾಯನಕ್ಕೆ ಅಗತ್ಯವಿರುವ ಸಕ್ಕರೆಯನ್ನು ಹಾಲಿನ ಪಾತ್ರೆಯೊಳಗೆ ಹಾಕುವಳು! ಕೊನೆಗೆ ತನ್ನ ತಪ್ಪನ್ನು ತಾನು ಹಿಡಿದು ಬೆಚ್ಚಿ ಬೀಳುವಳು. ಅನೇಕಾವರ್ತಿ ನಿಕಾಂಗಿಯಾಗಿದ್ದಾಗ ನಿಟ್ಟು

ಸುಯ್ದು—"ಹ್ಯಾ, ಮಹಾಪ್ರಭೂ, ನಿನ್ನ ಕೊಂಡಾಡುವ [illegible] ನಾನು ಮಾಡಿದ್ದೆಲ್ಲ ವೈದಾಂಗ ಶೂರನನ್ನು ಹಿಡಿಸಲು ಯತ್ನಿಸಿದೆ ನಿರರ್ಥಕವಾಯಿತು ನನ್ನನ್ನೇ ಅಬಲೆಯೆಂದು ವೃಥಾ ನೋಯಿಸುವಿಯಲ್ಲ? ತಿಳಾಂತವಾದರೂ ಶೂರನನ್ನು ನಿನ್ನಲ್ಲಿ ಲ್ಲದೇ ಹೋಯಿತೇ?" ಎಂದು ಹೇಳಿ ಮೊರೆಯಿಡುವಳು.

ಜಾತೆಯ ಮನೋವಿಕಾರವನ್ನು ನೋಡಿ ವೃದ್ಧ ರಾಮದಾಸನು ಅತ್ಯಂತ ವ್ಯಾಕುಲಚಿತ್ತನಾದನು (ಶೇಷ)

ದಕ್ಷಿಣ ಕನ್ನಡ ಮತ್ತು ಸನ್ನಿಪಾತ ಜ್ವರ.

(ಕಳದ ಸಂಚಿಕೆಯಿಂದ ಮುಂದರಿಸಿದುದು)

ಪೂರ್ವರೂಪ ಮತ್ತು ರೂಪಗಳಿಂದ ಸನ್ನಿಪಾತಜ್ವರದ ನಿಶ್ಚಯವನ್ನು ಕಂಡು ಕೊಂಡು ಅನಂತರ ಅದರ ನಿವೃತ್ತಿಗೆ ತಕ್ಕ ಉಪಾಯಗಳನ್ನು ಮಾಡಬೇಕು ನಿವೃತ್ತ್ಯುಪಾಯವೇ ಚಿಕಿತ್ಸಾ ಎಂದನ್ನಲ್ಪಡುತ್ತದೆ ಒಂದು ಕುಟುಂಬದೊಳಗೆ ಒಬ್ಬನಿಗೆ ಸನ್ನಿಪಾತ ಜ್ವರವು ಒಂದು ಎಂದು ತಿಳಿದ ಕೂಡಲೇ ಆರೋಗಿ ಆದವಾ ರೋಗಿಣಿಯನ್ನು ಮಲಗಿಸಿಕೊಳಿಸಬೇಕು ಮೇಲಗಿಸುವ ಸಮಯದಲ್ಲಿ ಮುಂದೆ ಹೇಳುವ ರೀತಿ ಅವಶ್ಯವಾಗಿ ಕೆಲವು ವಿಷಯದಲ್ಲಿ ಜಾಗರೂಕತೆಯನ್ನು ತಕ್ಕೊಳ್ಳಬೇಕು (೧) ರೋಗಿಯು ಮಲಗಿಕೊಳ್ಳುವ ಮನೆ ಅಥವಾ ಕೋಣೆಯು ಬೇರೆ ಕೋಣೆಗಳಿಗಿಂತ ಪ್ರತ್ಯೇಕವಾಗಿ ರಬೇಕು. (೨) ಕೋಣೆಯ ಸ್ಥಳವಾ ಮತ್ತು ಗೋಡೆಗಳು ತ್ಯಾವವುಳ್ಳವುಗಳಾಗಿರ ಬಾರದು (೩) ಕೋಣೆಯೊಳಗೆ ಅದಷ್ಟು ಮಟ್ಟಿಗೆ ಒಳ್ಳೇ ಗಾಳಿ ಬರುವಂತೆ ಮಾಡ ಬೇಕು. (೪) ಬಿರುಗಾಳಿ ಮತ್ತು ತ್ಯಾಪ ಒಳ್ಳೆ ಗಾಳಿಯನ್ನು ಕೋಣೆಯೊಳಗೆ ಬರ ದಂತೆ ಮಾಡಬೇಕು (೫) ರೋಗಿಯು ಮಲಗಿರುವ ಕೋಣೆಯ ಹೊರಗಡೆ ಸುತ ಮುತ್ತಲಿರುವ ಕೊಳತ ಹಾಳು ಕಸಕಡ್ಡಿ ಅದವಾ ಬೆಲೆ ಆಗುವಂತಹ ಮತ್ತು ದುರ್ಗಂಧ ಕಶ್ಮಲಗಳನ್ನು ದೂರ ಮಾಡಬೇಕು (೬) ಕೋಣೆಯೊಳಗೆ ಬೆಳಕು ಚನ್ನಾಗಿ ಬರು ವಂತೆ ಮಾಡಿರಬೇಕು. (೭) ಮಂಚ ಅಥವಾ ವ್ಯಸು ಸ್ವಭಾವವುಳ್ಳ ಶಯನಗಳ ಮೇಲೆ ದಪ್ಪವಾದ ಹಾಸಿಗೆಯನ್ನು ಬಿಸಿ ಹಾಸಿಗೆ ಮೇಲೆ ನೀರಿಂಧ್ರವಾದ ಮತ್ತು ನಿರ್ಮಲವಾದ ಎಂದೆರಡು ಬಟ್ಟೆಗಳನ್ನು ಹಾಸಬೇಕು ಈ ಬಟ್ಟೆಗಳನ್ನು ಮಲಿನವಾ ದಂತೆ ಬದಲಾಯಿಸುತ್ತಾ ಇರಬೇಕು ಮಂಚ ಮತ್ತು ಶಯನಗಳ ಉನ್ನತಲವು ರೋಗಿಗೆ ಯಥೇಚ್ಛವಾಗಿ ಮಲಗಿಕೊಳ್ಳಲಿಕ್ಕೆ ಅನುಕೂಲವಿರಬೇಕು (೮) ರೋಗಿಯು ಮಲಗಿರುವ ಕೋಣೆಗೆ ಅವಶ್ಯವಿರುವ ಜನಗಳು ಮಾತ್ರ ಹೋಗಿ ಬರುತ್ತಿರಬೇಕು. (ನಮ್ಮ ದೇಶದಲ್ಲಿ ರೋಗಿಯು ಮಲಗಿಕೊಂಡಿರುವನ್ನ ಅವನ ಸಂಬಂದಿ ಜನಗಳು ಗುಂಪ್ರಗುಂಪಾಗಿ ಕೂತುಕೊಂಡು ಅನಾವಶ್ಯಕ ಹರಟೆಗಳನ್ನೂ, ಮಾತು ಪ್ರಸಂಗಗಳನ್ನೂ ಮಾಡಿಕೊಂಡಿರುವರು) ಅವನು ಮಲಗಿರುವ ಕೋಣೆಯಲ್ಲಿ ಕನತ್ತಿ ಮಡಿಕೆ ಕುಡಿಕೆ ಮೊದಲಾದವುಗಳಿಂದ ಅಡಚಣಿ ಬಾರದಂತೆ ನೀಟಾಗಿಯೂ ನಿರ್ಮಲವಾಗಿಯೂ ಇಡಬೇಕು (೯) ರೋಗಿಯು ಮಲಮೂತ್ರಗಳನ್ನು ತಾನು ಮಲಗಿದ್ದ ಕೋಣೆಯಲ್ಲಿಯೇ ದೊಡ್ಡದಾಗಿಯೂ ಅದಕ್ಕೆ ಅನುಕೂಲವ್ಯಾಗಿಯೂ ಇರುವ ಪಾತ್ರೆಯೊಳಗೆ ವಿಸರ್ಜಿಸಬೇಕು. ಕೂಡಲೇ ಅದನ್ನು ಮೊರಿ ಮತ್ತು ದೂರಕ್ಕೆ ವೈದು ಬೇರೆ ಜನಗಳಿಗೆ ಅದರಿಂದ ಅಪಾಯ ಸಂಭವಿಸದಂತೆ ಮಾಡಿಬೇಕು (ನಮ್ಮಲ್ಲಿ ಬ್ರಾಹ್ಮಣರೇ ಮೊದಲಾದವರು ಮಲಮೂತ್ರಗಳನ್ನು ಒಳಗೆ ಮಾಡುವದು ದರ್ಮವಲ್ಲವೆಂದು ಹೊರಗೆ ತ್ಯಾವವುಳ್ಳ ಗಾಳಿಯಲ್ಲಿಯೂ, ತ್ಯಾವವುಳ್ಳ ಜಾಗಿಯಲ್ಲಿಯೂ ಸಂಚರಿಸಿ ಇನ್ನೂ ಜ್ವರ ಕಾಲದಲ್ಲಿ ಕೈಕಾಲುಗಳಿಗೆ ಹೆಚ್ಚು ವ್ಯಾಯಾಮಗಳನ್ನು ಕೊಡುವದರಿಂದ ಮಿಗಿಲಾದ ಅಪಾಯಗಳಿಗೆ ಗುರಿಯಾಗುತ್ತಾರೆ) (೧೦) ಜ್ವರ ತಗಲಿದಂದಿನಿಂದ ಸ್ನಾನವನ್ನು ನಿಶ್ಲಸುವದಲ್ಲದೆ ತಣ್ಣೀರು ಕುಡಿಯುವದು ತಣ್ಣೀರಿನಿಂದ ಕೈಕಾಲುಗಳನ್ನು ತೊಳಕೊಳ್ಳುವುದು ಇವೇ ಮೊದಲಾದ ಅಪಾಯ ಉಪಚಾರಗಳಿಂದ ದೂರವಾಗಿರಬೇಕು. (೧೧) ರೋಗಿಯು ಮಲಗಿದ್ದಲ್ಲಿ ಅವನಿಗೆ ಹಗಲು ನಿದ್ದೆ ಬಾರದಂತೆ ಮಾಡಬೇಕು. ಮತ್ತು ಅವನ ಕರ್ಮೇಂದ್ರಿಯ ವ್ಯಾಯಾಮಗಳಿಗೆ ಅವಕಾಶ ಕೊಡ ಬಾರದು. (೧೨) ರೋಗಿಗೆ ಉಪಚಾರ ಮಾಡುವವರು ನಿರ್ಮಲರಾಗಿಯೂ ಶಾಂತ ಗುಣವುಳ್ಳವರಾಗಿಯೂ, ಧೈರ್ಯಶಾಲಿಗಳಾಗಿಯೂ, ಸವಿನುಡಿಯುಳ್ಳವರಾಗಿಯೂ, ಚತುರಚಟುವಟಿಕರಾಗಿಯೂ ಇರಬೇಕು.

ಔಷಧ ಮತ್ತು ಅನುಪಾನೋಪಚಾರಗಳು.

ಸನ್ನಿಪಾತ ಜ್ವರವು ಯಾವ ಕಾಲದಲ್ಲಿ ಬಂದು ರೋಗಿಯನ್ನು ಆಕ್ರಮಿಸಿ ಎಂದು ವಿಚಾರಮಾಡಿಕೊಳ್ಳಬೇಕು. ಅಂದರೆ ಜ್ವರವು ಆ ರೋಗಿಯ

ಅಲ್ಲವೆ ಭರಿಧಾನಿದ್ದ ಕಾಲದಲ್ಲಿ ಬಂದಿತ್ತೋ, ಅಥವಾ ಊಟಮಾಡಿ ೩ ಘಂಟೆ ಒಳಗೆ ಆದರೆ ಅನ್ನವು ಜೀರ್ಣವಾಗುವ ಕಾಲದಲ್ಲಿ ಬಂದಿತ್ತೋ ಅಥವಾ ಊಟ ಆದ ಬಹಳ ಹೊತ್ತು ಬಂದಿತ್ತೋ ಎಂಬ ವಿಚಾರವನ್ನು ಮಾಡಬೇಕು. ಅನ್ನಕೋಶವು ಅನ್ನದಿಂದ ತುಂಬಿಕೊಂಡಿರುವ ಸಮಯ ಜ್ವರವು ರೋಗಿಯನ್ನು ಆಕ್ರಮಿಸಿದರೆ ಕೂಡಲೇ ಅವನಿಗೆ ವಾಂತಿಯ ಔಷಧಿಯನ್ನು ಕೊಟ್ಟು ವಾಂತಿ ಮಾಡಿಸಿ ಅನ್ನಕೋಶವನ್ನು ಬರಿದಾಗಿ ಮಾಡಬೇಕು. ಆದರೆ ವಾಂತಿಗೆ ಕೊಡಬೇಕಾದರೆ ರೋಗಿಯ ಮನೋಧೈರ್ಯ ಮತ್ತು ಬಲವನ್ನು ನೋಡಿಕೊಳ್ಳಬೇಕು ದುರ್ಬಲರಿಗೂ ಹೆದರಿಕೆ ಉಳ್ಳವರಿಗೂ ವಾಂತಿಗೆ ಕೊಡುವದು ಅಷ್ಟು ಒಳ್ಳೆಯದಲ್ಲ. ಜ್ವರಾರಂಭ ಕಾಲದಲ್ಲಿ ಅನ್ನಕೋಶದಲ್ಲಿರುವ ಸರ್ವಸಾಮಾನ್ಯವಾದ ಆಹಾರವು ಜೀರ್ಣವನ್ನು ಹೊಂದದೆ ಜ್ವರ ವೃದ್ಧಿಗೆನೇ ಕಾರಣವಾಗುವದು ಜೀರ್ಣವಾಗುತ್ತಿರುವ ಕಾಲದಲ್ಲಿ ಜ್ವರವು ಆಕ್ರಮಿಸಿದರೆ ದೀಪನ ಮತ್ತು ಪಾಚನ ದ್ರವ್ಯಗಳನ್ನು ಕೊಡುವುದು ಜೀರ್ಣವಾದ ನಂತರ ಮುಂದಲ್ಲಿ ಹಿಂದೆ ಹೇಳಿದ ಕ್ರಿಯೆಗಳ ಅವಶ್ಯಕವಿಲ್ಲ. ಜ್ವರ ಆರಂಭವಾಗಿ ಮೂರು ದಿವಸಗಳ ತನಕ ಲಂಘನವನ್ನು ಮಾಡಿಸುವದು ಒಳ್ಳೆದೆಂದು ಕೆಲವರ ಅಭಿಪ್ರಾಯ. ಆದರೆ ಲಂಘನ ವಿಷಯದಲ್ಲಿ ರೋಗಿಯ ಮತ್ತು ದೇಶದ ಸ್ವಭಾವಗಳನ್ನು ಅಂತರಿಸಬೇಕು. ನಮ್ಮ ದೇಶಕ್ಕೆ ಲಂಘನವು ಉಚಿತವಾಗಿ ತೋರುವುದಿಲ್ಲ. ಮಂದಾಗ್ನಿ ಹಾಗೂ ಸರ್ವಧಾನಾಶವಾದ್ದಲ್ಲಿ ಮತ್ತು ರೋಗಿಯ ಅನ್ನಕೋಶವು ಅನ್ನ ಕೆಲವರೆಂದ ತುಂಬಿಕೊಂಡಿದ್ದಲ್ಲಿ ಅವನಿಗೆ ಮುಂದು ಲಂಘನವನ್ನು ಮಾಡಿಸಬಹುದು. ಅನಂತರದಿಂದ ಅವನಿಗೆ ಗಂಜಿಯನ್ನು ಕುಡಿಸಬೇಕು. ಇದಕ್ಕೆ ಕೆಂಪು ಬತ್ತದ ಹುರಳಿ ಅಥವಾ ತೊಳುವಿನಲ್ಲಿ ಕ್ವೆನ್ನಿತ್ ಎಂದನ್ನುವ ಬತ್ತದ ಪರಳು ಅಥವಾ ಯವ (ಜಾವಿ) ಪೊಡಿಗಳವುಗಳನ್ನು ಉಪಯೋಗಿಸಬಹುದು

ಗಂಜಿಯ ಕ್ರಮ.

೧ ಬಿಲ್ವಪತ್ರೆ, ೨ ನರ್ಪಾಲ, ೩ ಅಸೆಮುಂಗು, ೪ ಕುಮುಗ, ೫ ವಕಪತಿ ೬. ಕೆರಿಗುಳ್ಳೆ, ೭ ದೊಡ್ಡಗಳ್ಳೆ, (ಕರಿಗುಳ್ಳೆ ಮತ್ತು ಕುದಶೆ) ೮ ಅಂಜಿಕ ೯ ಮೂವಲೆ, ೧೦. ನೇಗಿಲ್‌ಮುಳ್ಳು ಈ ವಸ್ತುಗಳ ನೇಗಿಲ್‌ಮುಳ್ಳನ್ನು ಬಿಟ್ಟು ಬಿಳಿಯ ಬೇರನ್ನು ಕಾಲು ತೊಲದಂತೆ ತಕ್ಕೊಂಡು ನಾಲ್ಕಾಗಿಗೆ ಪ್ರತಿ ಸೇರು ನೀರು ಹಾಕಿ ಮಣ್ಣಿನ ಪಾತ್ರೆಯಲ್ಲಿ ಕಟ್ಟಿ ನೀರಿನಲ್ಲಿ ಹಾಕಿ (ಅಂದರೆ ಗಂಜಿ ಮಾಡುವದಕ್ಕೆ ಹೊಗುವದಕ್ಕಿಂತ ರಾತ್ರಿಯ ನೀರಿನಲ್ಲಿ) ಚನ್ನಾಗಿ ಕುದಿಸಿ ಅರ್ಧ ಉಳ್ಳಾಗಡ್ಡೆ ಅಥವಾ ಕುಟ್ಟಿ ಪುಡಿ ಮಾಡಿದ ಯವಧಾನ್ಯವನ್ನು ಸಾಕಷ್ಟು ಗಂಜಿ ಮಾಡಿ ರೋಗಿಯ ಪ್ರಕೃತಿಗೆ ಅನುಕೂಲವಾಗಿ ಸಕ್ಕರೆ ಅಥವಾ ಸ್ವಲ್ಪ ಇಂಗುವ್ವು ಮತ್ತು ಮಾಗಿದಾಕಿಂಬೆ ರಸವನ್ನು ರುಚಿಗೆ ಕುಡಿಯಲಿಕ್ಕೆ ಕೊಡಬೇಕು. ಈ ಗಂಜಿ ಬೇಕಾದಷ್ಟು ತೆಳ್ಳಗಾದಾಗ ಮೇಲಿನ ಬೇರು ಮತ್ತು ಹುರಳಿಗೆ ೫ ಕುಡಿ ನೀರಿನಂತೆ, ಉಳ್ಳಾಗಡ್ಡೆ ಅಥವಾ ಯವಕ್ಕೆ ೧ ಸೇರು ನೀರಿನಂತೆ ಅಳತೆ ಮಾಡಿ ಹೆಚ್ಚು ಕಡಿಮೆ ಮಾಡಿಕೊಳ್ಳಬಹುದು. ಈ ಪ್ರಕಾರ ಮಾಡಿದ ಗಂಜಿಯು ಸಾರವಾಗಿಯೂ ಲಘುವಾಗಿಯೂ ಇರುವದು. ಮಕ್ಕಳಿಗೂ ಮುದುಕರಿಗೂ ಸ್ತ್ರೀಯರಿಗೂ ಈ ಗಂಜಿಯು ಹಿತಕರವಾಗಿರುವದು.

ಮುಂದೆ ಬರಲಿರುವ ಮಳೆಯ ಲಕ್ಷಣಗಳು.

ಕೆಲವು ಕಾಲದ ಮುಂದೆ ಫಾಲ್ಗುಣ ಪಟ್ಟಣದಲ್ಲಿ ರಸ್ತೆ ಉತ್ಸವಕಾರಿಗಳು ಮೆ ಅಲೆಗ್ಜಾಂಡರ್ ಗ್ಲಾನ್ ಎಂಬವರು ಮುಂಬರುವಿಕೆಯ ಲಕ್ಷಣಗಳನ್ನು ಕುರಿತು ಹೇಳಿರುವದೇನೆಂದರೆ —

(೧) ಪ್ರತಿವರುಷದ ಮೇ ತಿಂಗಳಿನ ಕೊನೆಕೊನೆಯಲ್ಲಿ ಮಳೆ ಬರುತ್ತ ಆಗ ಜಮೀನು ಇನ್ನೂ ತನುವಾಗಿರುವಾಗಲೇ ಬಿತ್ತಿದ್ದೇ ಆದರೆ ಪೈರು ಚನ್ನಾಗಿ ಬೇರೂರಿ ಬೆಳ್ಳಯುವದಲ್ಲದೆ ಹಿಂಡಿತವಾಗಿ ಸೊಂಪಾಗಿಯೂ ಇರುವದು. ಆದ್ದರಿಂದ ರೈತನು ಹತ್ಯಾರುಗಳನ್ನೆಲ್ಲಾ ಸಿದ್ಧಪಡಿಸಿಕೊಂಡು ಜಮೀನನ್ನು ಸಾಗುವಳಿ ಮಾಡುವದಕ್ಕೆ ಸದರಿ ಮಳೆಯ ಸಾರುವಿಕೆಯನ್ನು ಎದುರು ನೋಡುತ್ತಾ ಇರುವನು ಒಳ್ಳೇದು

(೨) ಶುಕ್ಲಪಕ್ಷದಲ್ಲಿ ಮೊದಲನೇ ವಾರ ಬಿಟ್ಟು ಎರಡನೆ ವಾರವೇನಾದರು ಮಳೆ ಪ್ರಾರಂಭವಾದಲ್ಲಿ ಸಾಧಾರಣವಾಗಿ ಪೌರ್ಣಮಿವರೆಗೂ ಮಳೆ ಬರುತ್ತಲೇ ಇರುವದು. ಆದರೆ ಅದೇ ರೀತಿಯಲ್ಲಿ ಕೃಷ್ಣಪಕ್ಷದಲ್ಲಿ ಪ್ರಾರಂಭವಾದರೆ ಅಮಾವಾಸ್ಯೆ ಮುಂದು ಬರುಗುವದಿಲ್ಲ.

ಆಯುರಾರೋಗ್ಯ ಸಂಪದಗಳು!

ಕಾಮಶಾಸ್ತ್ರ.

ಉಚಿತವಾಗಿ ಕಳುಹಿಸಲ್ಪಡುವುದು! ಕನ್ನಡದಲ್ಲಿ ಈ ಪುಸ್ತಕವು ಇರುವದು ಇದನ್ನೋದುವದರಿಂದ ದೇಹ ಮನಸ್ಸಂಬಂಧಗಳಾದ ಸಕಲ ದೋಷಗಳೂ ಪರಿಹಾರವಾಗುವವು! ಆಯುರಾರೋಗ್ಯಸಂಪದಗಳುಂಟಾಗುವವು!!!

ಆತಂಕ ನಿಗ್ರಹ ಮಾತ್ರೆ.

ಊಟವಾದ ಬಳಿಕ ಹಗಲಿರುಳೂ ಸೇವಿಸಬೇಕಾದದ್ದು! ಆರೋಗ್ಯವಂತರಿಗೆಗೂ ರೋಗ ಪೀಡಿತರಿಗೂ ಉಪಯುಕ್ತವಾದದ್ದು.

ಈ ಮಾತ್ರೆಗಳು. —

(೧) ಜೀರ್ಣಕೋಶ ಸಂಬಂಧವಾದ ವ್ಯಾಧಿಗಳನ್ನೆಲ್ಲಾ ಪರಿಹರಿಸುವದು. (೨) ನರಗಳನ್ನು ದೃಢಪಡಿಸುವದು. (೩) ಜ್ಞಾಪಕ ಶಕ್ತಿಯನ್ನು ವೃದ್ಧಿಗೊಳಿಸುವದು. (೪) ಮೆದುಳನ್ನು ಸರಿಪಡಿಸುವದು (೫) ಶಕ್ತಿಯನ್ನುಂಟುಮಾಡುವದು. (೬) ವ್ಯಾಣಾಧಾರಗಳಿಂದ ಅಂಗಗಳನ್ನು ಬಲಪಡಿಸುವದು (೭) ನಷ್ಟವಾದ ಶಕ್ತಿಯನ್ನು ಮತ್ತೆ ವೃದ್ಧಿಗೊಳಿಸುವದು ಈ ಮಾತ್ರೆಗಳಿರುವ ಡಬ್ಬಿ ೧ಕ್ಕೆ ರೂ. ೧—೦—೦

ಆತಂಕನಿಗ್ರಹ ಔಷಧಾಲಯ) ವೈದ್ಯ ಶಾಸ್ತ್ರಿ,
ಎಸ್ ಬ್ರಾಡ್ವೇ ಮದರಾಸು.) ಮಣಿಶಂಕರ ಗೋವಿಂದಜಿ

ಸನ್ನಯವರ ಬಾಲಸುಧಾರಿ.

ಮಕ್ಕಳಿಗೆ ಅಮೃತಪ್ರಾಯವಾದದ್ದು. ಈ ದಿವ್ಯ ಔಷಧ ಸೇವನೆಯಿಂದ, ಮಕ್ಕಳಿಗೆ ಸಹಿಸಲ್ಶಾಗದಂತಹ ಭಯಂಕರವಾದ ಕಾಯಿಲೆಗಳು ಬರುವದಿಲ್ಲ. ಹಾಗೂ ಬಂದಿದ್ದರೂ ಅವು ಬೇಗನೆ ಗುಣವಾಗುವವು. ಈ ಬಾಲಸುಧಾರಿಯು ಮಕ್ಕಳ ಪುಷ್ಟಿಕಾರಕವಾದ ಸ್ವದೇಶದ ವಸ್ತುಗಳಿಂದಲೂ, ಕೆಲವು ಸಕ್ಕರೆಯಿಂದಲೂ ಮಾಡಲ್ಪಟ್ಟಿದ್ದು ಮನಸ್ಸಿಗೆ ಸಂತೋಷವಾಗಿಯೂ, ಸುವಾಸನೆಯುಳ್ಳದ್ದಾಗಿಯೂ ಇರುವದು. ಇದು ಬಾಲಕರಿಗೆ ನಿದಾನಭಂಗ, ಸನಕಾಸ, ಗರ್ಭವಾತ ವೀಕ್ಷಕ, ಅಮ್ಲತ್ವ, ಬಲಹೀನತೆ, ಶ್ವಾಸದಿ ದಕೂಡಲ್ಬಿಟ್ಟ ಜ್ವರ, ಉಷ್ಣ ಕೆಮ್ಮು, ಶೈತ್ಯ, ಪಾಂಡು, ಕ್ಷಯ ಮೊದಲಾದ ಭಯಂಕರವಾದ ರೋಗಗಳನ್ನು ಸಮಾಧಿಸುವದಕ್ಕೂ, ರೋಗಾನಂತರ ಬಂದ ಮಕ್ಕಳ ಬಲವನ್ನು ಕೊಡುವದಕ್ಕೂ ಕೆಟ್ಟಜೀರ್ಣಕ್ತ ಪೀಡಾಪ್ರಾಗ್ಯತೆಯನ್ನು ಸರಿಪಡಿಸುವದಕ್ಕೂ ಸಮರ್ಥವಾಗಿರುವ ಈ ಬಾಲಸುಧಾರಿ ಸಮಾನವಾದ ಮತ್ತೊಂದು ಔಷಧವಿಲ್ಲ. ತಂದೆತಾಯಿಗಳಾದ ಪ್ರತಿ ಮಕ್ಕಳನ್ನು ಸರ್ವಕಾಲ ಬಲಿಷ್ಠರಾಗಿಯೂ ರೋಗರಹಿತರಾಗಿಯೂ ಮಾಡಲಿ, ನಾಳ್ಕು ಬಾಟಲಿ ಬಾದಾಮಿ ಈ ಔಷಧವನ್ನು ಉಪಯೋಗಿಸಿ, ಮಕ್ಕಳನ್ನು ಹುಲಿಮರಿಗಳಂತೆ ಮಾಡಿರಿಂದು ಕೋರುವೆ. ಕ್ರಯ ಬಾಟಲಿಗೆ ರೂ. ೧—೪—೦ ವಿ ಪಿ ಖರ್ಚು ರೂ ೧—೪—೦ ಕ್ಕೆ ಒಂದಾದರು ಬಿಟ್ಟು

ಸಿ ವೃಸನ್ನ ಕಂಪೆನಿ,
ಗಿರಿಗಾಂ ಬೊಂಬಾಯಿ.

ಗಿಸ್ತಿಹಾರು

ಶ್ರೀ ಶೃಂಗೇರಿ ಜಗದ್ಗುರು ಸಂಸ್ಥಾನ ತಿಜಾರ ವಿಚಾರಣಾಧಿಕಾರಸ್ಥಾನದಿಂದ

ಮಕ್ಕಳಿಗೆ ಕನ್ನಡ ಜಿಲ್ಲೆಗಳಲ್ಲಿರುವ ಸಮಸ್ತರಿಗೂ ಈ ಮೂಲಕ ತಿಳಿಯವಡಿಸುವದೇನಂದರೆ —

ಮಂಗಳೂರು ವಸ್ತೆರೆ ತಾಲೂಕುಗಳ ಅವಶಾಗ ವಿಚಾರದ ಕೆಲಸಕ್ಕೆ ನೇಮಿಸಲ್ಪಟ್ಟಿದ್ದ ರಾಮಮಂಗಲದ ಸೀತಾರಾಮಯ್ಯನವರು ನೇಲ್ಕುಂದ ಕೆಲಸಕ್ಕೆ ತಮ್ಮ ತಂದೆ ಹೋದ ಮೇಲೆ ಶಿವಳ್ಳಿ ಶಾಸ್ತ್ರಿಗಳು ಸಂಸ್ಥಾನವನ್ನು ಸಂಸ್ಥಾನದ ಅಪ್ಪಣೆ ಪ್ರಕಾರ ತಮ್ಮ ಸ್ವತಂತ್ರದಿಂದಲೇ ನೇಮಿಸಿ ಇತರ ಅವರು ಸಹ ಸ್ವಭಾವವಾಗಿ ನಡಿಸುತ್ತಿರುವ ಕೆಲಸಗಳ ವಿಷಯದಲ್ಲಿ ಶಿಷ್ಯ ಜನರ ಪುಕಾರು ಅನೇಕವಾಗಿ ಬರುತ್ತಿರುವುದು ಎಂಬುವೂ ಕಾರಣಕ್ಕೆ ಮುಂತಾದ ಸೇವಾ ದ್ರವ್ಯಗಳು ಕ್ರಮವಾಗಿ ವಸೂಲು ಬಾರದೆ ಬಾಕಿ ಇರುವುದರಿಂದಲೂ ಸಂಸ್ಥಾನದವರು ಸಂದರ್ಭಾನುಸಾರ ಕೊಡುವ ಅಪ್ಪಣೆಗಳನ್ನು ಇವರು ಅತಿಕ್ರಮಿಸಿ ನಡಿಯುತ್ತಾ ಇಂದಿರುವುದೆಂದೂ ಸಹಾ ಶ್ರೀ ಸಂಸ್ಥಾನದವರು ಮೇಲೆ ಕಂಡ ಸೀತಾರಾಮಯ್ಯನವರನ್ನು ಇವರಿಂದ ನೇಮಿಸಲ್ಪಟ್ಟ ಇತರ ಶಿವಳ್ಳಿ ಶಾಸ್ತ್ರಿಗಳು ಮುಂತಾದವರ ಸಮೇತ ಶ್ರೀ ಮಠ ಸಮ್ಮಂದವಾದ ಎಲ್ಲಾ ಕೆಲಸಗಳಿಂದಲೂ ಈ ಹಿಂದೆಯೇ ನಿವೃತ್ತಿ ಪಡಿಸಿರುವುದರಿಂದ ಇವರುಗಳು ನಡಿಸತಕ್ಕ ಕೆಲಸಗಳು ಶ್ರೀ ಮಠಕ್ಕೆ ಸಮ್ಮಂಧ ಪಟ್ಟವಲ್ಲವೆಂತ ಸರ್ವರು ಗ್ರಹಿಸತಕ್ಕದೆಂತ ಈ ಮೂಲಕ ತಿಳಿಸಿ ಸೋಣಾಗಿದೆ

ತಾ 23—9—1910ನೇ ಇಸವಿ.) ಐ. ರಾಮೇಶ್ವರ ಶಾಸ್ತ್ರಿ ಶೃಂಗೇರಿ.
ಮೊಕ್ಕಾಂ ಶೃಂಗೇರಿ.) ಆ. ವಿ. ಅಧಿಕಾರಿ

(೫) ಸ್ವಲ್ಪ ಕಾಲದಿಂದ ಆದಿನಗಳು ಪಟ್ಟಾಗಿ ಗಾಳಿ ಬೀಸುತ್ತಾ ಬಂದಲ್ಲಿ ಮೇರಿಗಾದ ಆಕಾಶದಲ್ಲಿ ತುಂಡಿತವಾಗಿ ಕಾಣಿಸಿಕೊಳ್ಳುವವು.

ಧ್ರುವನು ಧೂಮ್ರವರ್ಣವಾಗಿ ಕಾಣಿಸಿಕೊಂಡಲ್ಲಿ ಅದು ಮಳೆ ಬರ ತಕ್ಕದ್ದನ್ನು ಸೂಚಿಸುತ್ತದೆ. ಚಂದ್ರನು ಕೆಂಪು ಛಾಯೆ ಯುಕ್ತನಾಗಿದ್ದಲ್ಲಿ ಜೋರಾಗಿ ಗಾಳಿ ಬೀಸುವದು. ಚಂದ್ರನ ಸುತ್ತಲೂ ಮೇಘವಾಡುತ್ತಿದ್ದರೆ ಜಾಗ್ರತೆಯಾಗಿ ಮಳೆ ಬರುವದೆಂದು ತಿಳಿದುಕೊಳ್ಳಬೇಕು.

(೫) ಸೂರ್ಯನ ಕಡೆಗೆ ನೋಡಿರಿ. ಸೂರ್ಯನು ಪ್ರಕಾಶಯುಕ್ತನಾಗಿ ಮುಳುಗಿದಲ್ಲಿ ಮಳೆ ಬರುವ ಸಂಭವವಿರುವದಿಲ್ಲ. ಸೂರ್ಯನು ಮುಳುಗುವಾಗ ಬಿಂಬದಲ್ಲಿ ಕಪ್ಪು ಮತ್ತು ಮಲಮಲವಾಗಿ ಕಂಡಲ್ಲಿ ಕ್ಷಿಪ್ರದಲ್ಲಿಯೇ ಮಳೆಯಾಗುವದು. ಸೂರ್ಯನು ಮುಳುಗುವಾಗ ಪೂರ್ವ ದಿಕ್ಕನ್ನು ದೃಷ್ಟಿಸಿ ನೋಡಿರಿ, ಆಗ ಸೂರ್ಯನ ಕಿರಣಗಳು ಪೂರ್ವದಿಕ್ಕಿನಲ್ಲಿನ ಮೇಘಗಳ ಮೇಲೆ ನೇರವಾಗಿ ಬೀಳುತ್ತಾ ಇದ್ದಲ್ಲಿ, ಮೇಘಗಳು ಕರಗಿ ಕೊಂಚವಾಗಿ ಮಳೆ ಬೀಳುವದಾಗಿತು. ಪೂರ್ವ ದಿಕ್ಕಿನಲ್ಲಿ ಆ ಕಾಶವು ಕಡು ಕೆಂಪಾಗಿ ಕಂಡುಬಂದರೆ ಒಳ್ಳೇ ಮೇಘಗಳು ತುಂಬಿರುವದಾಗಿಯೂ ಕ್ಷಿಪ್ರದಲ್ಲಿಯೇ ಮಳೆ ಬರಬಹುದಾಗಿಯೂ ಗೊತ್ತುಮಾಡಿಕೊಳ್ಳಬೇಕು.

(೬) ಮಳೆ ಬರುವ ಹಾಗಿದ್ದರೆ ಗುಬ್ಬಿಗಳು ಅಂತರಿಕ್ಷದಲ್ಲಿ ಎತ್ತರವಾಗಿ ಹಾರಿ ಹೋಗುವದಿಲ್ಲ. ಕಪ್ಪೆಗಳು ವಣ ನೆಲದ ಮೇಲೆ ಹಾರಾಡುತ್ತವೆ ಸೂಣ ಮುಂತಾದವುಗಳು ಹೆಚ್ಚುವವು.

ಪತ್ರವ್ಯವಹಾರ.

(ದಾತ್ಮಿದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.)

ಅಳಿಯ ಸಂತಾನದ ವಿಭಾಗ ಬೇಲು.

ಇತ್ತೆಲಾಗೆ ಜಸ್ಟಿಸ್ ಕೃಷ್ಣ ನಾಯರವರಿಂದ ಮದ್ರಾಸು ನ್ಯಾಯವಿಧಾಯಕ ಸಭೆಯ ಮುಂದಿಡೋಣಾದ ಅಳಿಯ ಸಂತಾನದ ಆಸ್ತಿಯ ವಿಭಾಗ ಬೀಲಿನ ವಿಷಯ ದಕ್ಷಿಣ ಕನ್ನಡದಲ್ಲಿ ಅಷ್ಟೊಂದು ಚಟುವಟಿಕೆಯು ಕಂಡು ಬರುವದಿಲ್ಲ ಈ ಕಟ್ಟನ್ನು ಆಚರಿಸುವ ಜನರಲ್ಲಿ ವಿದ್ಯೆಯು ಹೆಚ್ಚಿಗೆ ಪ್ರಾಬಲ್ಯವನ್ನು ಹೊಂದದೆ ಇರುವದರಿಂದಲೂ ಮತ್ತು ಅವರು ಹಳ್ಳಿಗಳಲ್ಲಿ ವಾಸಿಸಿಕೊಂಡಿರುವದರಿಂದಲೂ ಈ ಬೀಲಿನ ಉದ್ದೇಶ ಮತ್ತು ಅದರ ಗುಣಾವಗುಣಗಳು ಅವರಿಗೆ ತಿಳಿದಿರುವದಿಲ್ಲ. ಆದುದರಿಂದ ಸರಕಾರದವರು ಇಂಥಾ ಪ್ರಾಮುಖ್ಯ ಸಂಗತಿಯನ್ನು ಕೂಡಲೆ ತೀರ್ಮಾನ ಮಾಡಿದರೆ ಈ ಕಟ್ಟನ್ನು ಆಚರಿಸುವ ಜನರಿಗೆ ಹೆಚ್ಚಿನ ತೊಂದರೆಗಳು ಉಂಟಾಗಲಿಕ್ಕೆ ಸಾಕು ನಮ್ಮ ಜಿಲ್ಲೆಯ ಬಹುಮಾನ ಪಟ್ಟ ಮೆಂಬರರು ಈ ಬೀಲಿನ ಸಾರಾಂಶವು ಜನರಲ್ಲಿ ಸಾಕಷ್ಟು ಹಬ್ಬುವಂತೆ ಮಾಡಿ ಅವರು ಇದರ ಗುಣಾವಗುಣಗಳನ್ನು ತಿಳಿಸುವಷ್ಟು ಸಮಯವು ದೊರಕುವಂತೆ ಮಾಡುವುದು ಅವರ ಕರ್ತವ್ಯವಾಗಿರುವುದು ಈ ಪರವಾಗಿ ಸರಕಾರದವರು ಒಂದು ಜಿಕ್ಕ ಕಮಿಟಿಯನ್ನು ನೇಮಕಮಾಡಿ ಇದರ ಮೂಲಕ ಜನರ ಅಭಿಪ್ರಾಯವನ್ನು ತಿಳಿಯುವದು ಅವಶ್ಯವೆಂದು ಕಾಣುತ್ತದೆ. ಈ ಕಮಿಟಿಯವರು ಹಲವು ಊರುಗಳಲ್ಲಿ ಸಭೆಕೂಡಿಸಿ ಜನರ ಅಭಿಪ್ರಾಯಗಳನ್ನು ಪಡಿಯತಕ್ಕದ್ದು. ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ಕುಂದಾಪುರ ತಾಲೂಕುಗಳಲ್ಲಿ ದೊಡ್ಡ ದೊಡ್ಡ ಕುಟುಂಬದವರು ಒಂದೇ ಗ್ರಹಕೃತ್ಯದಲ್ಲಿ ತಮಗೆ ನಡಿಯಲಿಕ್ಕೆ ಕಷ್ಟ ಕಂಡಲ್ಲಿ ವಿವೇಕದಿಂದ ತಮ್ಮೊಳಗೆ ಕವರು ಪಾಲುಮಾಡಿಕೊಂಡು ಬೇರೆ ಬೇರೆ ಗ್ರಹಕೃತ್ಯದಲ್ಲಿರುವರು. ಇಂಥಾ ಕವರು ಪಾಲುಮಾಡಿಕೊಂಡವರು ಇಷ್ಟರ ವರೆಗೆ ತಮ್ಮ ಆಸ್ತಿಯನ್ನು ಮಾರಿ ಕಳಕೊಂತಿದ್ದಿಲ್ಲ ಆದರೆ ತಮ್ಮ ಕಾಯ ಕಷ್ಟದಿಂದ ಅಲ್ಪ ಸ್ವಲ್ಪ ಆಸ್ತಿಗಳನ್ನು ಹೆಚ್ಚಿಗೆ ಸಂಪಾದಿಸಿರುವರು ಮಂಗಳೂರಿನಲ್ಲಿ ಕೂಡಾ ಅನೇಕ ಕುಟುಂಬದವರು ತಮ್ಮೊಳಗೆ ಕವರು ಪಾಲುಮಾಡಿಕೊಂಡು ಪ್ರತಿಷ್ಠಾವದಿಂದಿರುವರು ಕೆಲವು ದೊಡ್ಡ ಕುಟುಂಬಗಳು ಸಾಲದಲ್ಲಿ ಬಿದ್ದು ನರಳುತ್ತಿದ್ದು ಕಟ್ಟಕಡೆಗೆ ತಮ್ಮ ಆಸ್ತಿಗಳನ್ನೂ ಸಾಲಗಳನ್ನೂ ನರಿಯಾಗಿ ಕವರು ಪಾಲುಮಾಡಿ ತಮ್ಮ ನಿರಂತರ ಪ್ರಯತ್ನಗಳಿಂದ ಸಾಲವನ್ನು ತೀರಿಸಿ ತಮ್ಮ ಆಸ್ತಿಗಳನ್ನು ಉಳಿಸಿಕೊಂಡಿರುವರು. ಆಸ್ತಿಗಳನ್ನು ಪಾಲು ಮಾಡಿಕೊಂಡರೂ ಕವರುಗಳಿಗೆ ತಮ್ಮ ಹಿಸೆಗೆ ಬಂದ ಆಸ್ತಿಗಳ ಮೇಲೆ ಸಾಲ ವಗೈರೆ ಮಾತಲಿಕ್ಕೂ, ಅವುಗಳನ್ನು ಮಾರಲಿಕ್ಕೂ ಹಕ್ಕು ಇಲ್ಲದ ಹಾಗೆ ಕುಟುಂಬದ ಹಲವು ಕವರುಗಳು ತಮ್ಮೊಳಗೆ ಕರಾರು ಮಾಡಿಕೊಂಡಿರುವರು. ಮತ್ತು ಒಂದು ಕವರಿನಲ್ಲಿ ಸಂತತಿಯು ಅಳಿದುಹೋದ ಪಕ್ಷದಲ್ಲಿ ಮಿಕ್ಕುಳಿದ ಕವರಿನವರು ಆ ಆಸ್ತಿಗೆ ಬಾಧ್ಯರಾಗಿರುವರು. ಕುಟುಂಬವಿಲ್ಲದ ಕವರಿಗೆ ಕುಟುಂಬದ ಆಸ್ತಿಯನ್ನು ಪರಾಧೀನ ಮಾಡಲಿಕ್ಕೆ ಹಕ್ಕು ಇರುವದಿಲ್ಲ. ಇವೇ ಮೊದಲಾದ ಅನೇಕ ಶರ್ತಗಳನ್ನು ಶೇರಿಸಿ ದೊಡ್ಡ ಕುಟುಂಬದವರು ತಮ್ಮ ಆಸ್ತಿಗಳನ್ನು ಕವರು ಪಾಲು ಮಾಡಿಕೊಂಡಿರುವರು. ಈ ಪ್ರಕಾರ ಪಾಲುಮಾಡಿಕೊಂಡ ಕವರು ತಮ್ಮ ಆಸ್ತಿಗಳನ್ನು ಮಾರಿ ತಿನ್ನಬೇಕೆಂಬ ಇರಾದೆಯಿಂದ ಪಾಲುಮಾಡಿಕೊಂಡಿದ್ದಲ್ಲವೆಂಬುದು ವ್ಯಕ್ತವಾಗುತ್ತದೆ. ಇಂಥಾ ಕುಟುಂಬದವರು ವಿನೇಕ ಕಾಲಗಳಿಗೆ ಸರಿ. ಆದರೆ ಇಂಥಾ ಪಾಲುಗಳು ಆಗಬೇಕಾದರೆ ಕುಟುಂಬದ ಎಲ್ಲಾ ಕವರುಗಳು ಒಪ್ಪಬೇಕು. ಈ ಕಠಿಣ ಕಾಸವು ಹಲವು ಕುಟುಂಬಗಳ ವಿಧಾಗಕ್ಕೂ, ಅಭಿವೃದ್ಧಿಗೂ, ಸಂಸಾರ ಸುಖಕ್ಕೂ ದಾರಿ ತಡೆಯುವದು. ಅನೇಕ ವೇಳೆ ಕುಟುಂಬದ ಹಲವು ಕವರಿನವರು ಒಪ್ಪಿ ಯಜಮಾನನೂ ಅವನ ಸಮೀಪದ ಕವರಿನವರೂ ಒಪ್ಪದೆ ಹೋದರೆ ಪಾಲು ಆಗುವುದಿಲ್ಲ. ಕೆಲವು ವೇಳೆ ಯಜಮಾನರು ತಮ್ಮ ಸಮೀಪದ ಕವರಿನವರನ್ನು ದಯೋದೃಷ್ಟಿಯಿಂದ ನೋಡಿಕೊಂಡಿದ್ದು, ದೂರದ ಕವರಿನವರನ್ನು ಅಲಕ್ಷ ಭಾವದಿಂದ ನೋಡುವದುಂಟು. ಇಂಥಾ ಪಕ್ಷಪಾತಗಳೇ ಅಳಿಯ ಸಂತಾನದ ಕುಟುಂಬಗಳ ಕಲಹದ ಮುಖ್ಯ ಕಾರಣವಾಗಿರುತ್ತವೆ. ಹೀಗಿರುತ್ತ ಆಸಂತುಷ್ಟಿ ಪಟ್ಟ ಕವರಿನವರು ಪಾಲು ಕೇಳಿದರೆ ಯಜಮಾನನು ಒಪ್ಪದೆ ಹೋದರೆ ಪಾಲು ತಿಳಿಯುವದಿಲ್ಲ. ಈ ಆಸಂತುಷ್ಟಿ ಹೊಂದಿದ ಕವರಿನವರನ್ನು ಕುಟುಂಬದ ಮನೆಯಲ್ಲಿ ಇಡುವದರಿಂದ ಇಕ್ಕಟ್ಟಿನವರ ಸಂಸಾರ ಸುಖಕ್ಕೂ ಕೇಡುಬರುವದು ಯಜಮಾನರುಗಳು ವತ್ತಾಯದಿಂದ ಇಂಥಾ ಆಸಂತುಷ್ಟಿಯ ಕವರಿನವರನ್ನು ಒಂದೇ ಗ್ರಹಕೃತ್ಯದಲ್ಲಿ ಇಟ್ಟರೆ ಮುಂದಕ್ಕೆ ಹೆಚ್ಚಿನ ಅನರ್ಥಗಳು ಕುಟುಂಬದಲ್ಲಿ ಉಂಟಾಗಲಿಕ್ಕೆ ಸಾಕು. ಆದುದರಿಂದ ಇಂಥಾ ಆಸಂತುಷ್ಟಿ ಹೊಂದಿದ ಕವರಿನ ಎಲ್ಲಾ ಮೆಂಬರರು ಒಟ್ಟಾಗಿ ಪಾಲು ಕೇಳಿದರೆ ಯಜಮಾನರೂ ಬೇರೆ ಕವರಿನವರೂ ಒಪ್ಪಿ ಅವರಿಗೆ ಕುಟುಂಬ ಆಸ್ತಿಯಲ್ಲಿ ಪಾಲು ವಿಂಗಡಿಸಿ ಕೊಡುವ ಬದಲಾವಣೆಯನ್ನು ಅಳಿಯ ಸಂತಾನದ ಕಟ್ಟಿನಲ್ಲಿ ಮಾಡುವದು ಅವಶ್ಯ. ಕುಟುಂಬವು ಹೆಚ್ಚುತ್ತಾ ಹೋದ ಹಾಗೆ ಸದ ಯೋಚಿತ ಬದಲಾವಣೆಗಳನ್ನು ಮಾಡಬೇಕು. ಇಲ್ಲವಾದರೆ ಕುಟುಂಬಕ್ಕೆ ಹೆಚ್ಚಿನ ನಷ್ಟಕಷ್ಟಗಳು ಉಂಟಾಗಲಿಕ್ಕೆ ಸಾಕು. ಪಾಲು ಹೊಂದಿದ ಕವರಿನವರು ತಮ್ಮ ಪಿಸೆಗೆ ಬಂದ ಆಸ್ತಿಯ ಹುಟ್ಟನ್ನು ಅನುಭವಿಸಬೇಕಲ್ಲದೆ ಆಸ್ತಿಗಳನ್ನು ಕರಾರು ಮಾಡುವ ಹಾಗಿಲ್ಲ ಭದ್ರತೆಗಳನ್ನು ಮಾಡಿಕೊಳ್ಳಬೇಕು. ಮೇಲೆ ಸೂಚಿಸಿದ ಬದಲಾವಣೆಯು ಅಲ್ಪವೆಂದು ಕಂಡರೂ ಪ್ರಕೃತಕ್ಕೆ ಸಾಕೆಂದು ಕಾಣುತ್ತದೆ. ಒಂದೇ ಸಾರಿ ಹೆಚ್ಚಿನ ಬದಲಾವಣೆಯನ್ನು ಒಂದು ಕಟ್ಟಿನಲ್ಲಿ ಮಾಡುವದರಿಂದ ಕುಟುಂಬಗಳಿಗೆ ಹೆಚ್ಚಿನ ಕಷ್ಟಗಳು ಉಂಟಾಗುವವು ಆದುದರಿಂದ ಬದಲಾವಣೆಗಳು ಸ್ವಲ್ಪಸ್ವಲ್ಪವಾಗಿಯೂ ಕಾಲಕ್ರಮೇಣವಾಗಿಯೂ ಬರಬೇಕು. ಜಗಲಿ ಹಾರಿ ಗನ ಹಾರಬೇಕೆಂಬ ಹಿರಿಯರ ಗಾದೆ ಇದೆ ಕೃಷ್ಣ ನಾಯರರ ಬೀಲಿನಲ್ಲಿ ಕೆಲವು ಅಂಶವು ಪರಿಪೂರ್ಣವಾಗಿ ಇಲ್ಲದೆ ಇರುವದರಿಂದಲೂ, ಮತ್ತು ವಿಭಾಗ ಕ್ರಮವು ತೋಕಪಿರುದ್ಧವಾಗಿರುವದರಿಂದಲೂ ಅಳಿಯ ಸಂತಾನದವರು ಈ ಬೀಲನ್ನು ಸಂಪೂರ್ಣವಾಗಿ ತೊರೆದು ಬಿಡಲಿಕ್ಕೆ ಕಾರಣವಾಯಿತು. ಅನೇಕ ಕುಟುಂಬದವರಿಗೆ ಪ್ರಧಾನನದ ಕಟ್ಟಿನಲ್ಲಿ ಬದಲಾವಣೆಗಳು ಆಗಬೇಕೆಂತ ಇಚ್ಛೆಯಿದೆ. ಆದರೆ ಕೃಷ್ಣ ನಾಯರರ ಬೀಲು ಪ್ರಕೃತ ತಮಗೆ ಬೇಕಾದ ಬದಲಾವಣೆಗಳಿಗಿಂತ ಹೆಚ್ಚಿನ ಮಾರ್ಪಾಟವನ್ನು ಏಯಿಸುವದರಿಂದ ಜನರೆಲ್ಲರು ಈ ಬೀಲನ್ನು ಅಲಕ್ಷ ಭಾವದಿಂದ ನೋಡುವರು. ಕೃಷ್ಣ ನಾಯರರ ಬೀಲನ್ನು ಸರಕಾರದವರು ಇದ್ದ ಹಾಗೆಯೇ ಮಂಜೂರು ಮಾಡಿದರೆ ಅಳಿಯ ಸಂತಾನದ ಕುಟುಂಬಗಳಿಗೆ ಹೆಚ್ಚಿನ ತೊಂದರೆಗಳು ಬರಲಿಕ್ಕೆ ಸಾಕು. ಈ ಬೀಲಿನಿಂದ ಪ್ರಯೋಜನವನ್ನು ಹೊಂದುವಷ್ಟು ವಿದ್ಯೆಯೂ ಬುದ್ಧಿಯೂ ಅಳಿಯ ಸಂತಾನದ ಮೆಂಬರರಲ್ಲಿ ಪ್ರಕೃತ ಇಲ್ಲದೆ ಇರುವದರಿಂದ ಬೀಲಿನಿಂದ ಪ್ರಯೋಜನ ಹೊಂದುವದರ ಬದಲಿಗೆ ಕಷ್ಟನಷ್ಟಗಳು ಉಂಟಾಗಲಿಕ್ಕೆ ಸಾಕು. ಹೀಗೆ ಅಭಿಪ್ರಾಯ ಪಡುವದರಿಂದ ಅಳಿಯ ಸಂತಾನದ ಕಟ್ಟಿನಲ್ಲಿ ಪ್ರಕೃತ ಬದಲಾವಣೆಗಳು ಅವಶ್ಯವಿಲ್ಲವೆಂದು ಗ್ರಹಿಸಲಾರದು ಬದಲಾವಣೆಗಳು ಅವಶ್ಯವೆಂಬುವದು ಸರ್ವ ಸಮ್ಮತವಾದದ್ದು. ಇದು ಜನರು ಕೆಲವು ಕಡೆಗಳಲ್ಲಿ ತಮ್ಮೊಳಗೆ ತಮ್ಮ ಕುಟುಂಬದ ಆಸ್ತಿಗಳನ್ನು ಕವರು ಪಾಲುಮಾಡಿಕೊಳ್ಳುವದರಿಂದ ವ್ಯಕ್ತವಾಗುತ್ತದೆ. ಮೇಲೆ ಸೂಚಿಸಿದಂತೆ ಆಸಂತುಷ್ಟಿ ಹೊಂದಿದ ಒಂದು ಕವರಿನವರು ಪಾಲು ಕೇಳಿದರೆ, ಮಿಕ್ಕುಳಿದ ಕವರಿನವರು ಪಾಲು ಕೊಡುವಂತೆ ಸರಕಾರದವರು ಮಾಡಿದರೆ ಸದ್ಯಕ್ಕೆ ಅಳಿಯಸಂತಾನದವರು ತೃಪ್ತಿಹೊಂದುವುದು. ಹಿಸೆ ಪಡದ ಕವರಿನವರಿಗೆ ಆಸ್ತಿಯ ಹುಟ್ಟನ್ನು ಅನುಭವಿಸುವ ಹಕ್ಕಲ್ಲದೆ ಆಸ್ತಿಗೆ ಸಾಲ ವರಾಧೀನ ವಗೈರೆ ಮಾಡುವ ಹಕ್ಕು ಇರುವದಿಲ್ಲ. ಹಿರಿಯರಿಗೂ ಕಿರಿಯರಿಗೂ ಸಮ್ಮತಿಯಾದ ಕೆಲವು ಬದಲಾವಣೆಗಳನ್ನು ಈ ಸಂದರ್ಭದಲ್ಲಿ ಸರಕಾರದವರು ಮುಂದಿಡುವದು ಅವಶ್ಯವೆಂದು ಕಾಣುತ್ತದೆ. ಇಕ್ಕಟ್ಟಿನವರು ಸುಮ್ಮನೆ ಕೂತರೆ ಕೆಲಸವು ಕೆಟ್ಟು ಹೋಗುವದು. ಅಳಿಯ ಸಂತಾನದ ಕುಟುಂಬಗಳ ಹಿತಚಿಂತಕರು ಈ ಕಡೆಗೆ ಲಕ್ಷ್ಯ ಕೊಡುವರಾಗಿ ನಂಬುವ ತಮ್ಮ ವಿಧೇಯ.

ಧೂಮಾಕ್ಷ ಶಾಸ್ತ್ರಿ

ಸ್ವೇಚ್ಛಾವ್ಯಾಖ್ಯಾನಮಿಯ ಟೀಕೆಗಳು

ಪತ್ತನದ ತಾತರು.

ವಿದ್ಯೆಯಲ್ಲಿಯೂ ಬುದ್ಧಿಯಲ್ಲಿಯೂ ಕಡಿಮೆಯವರಲ್ಲದ ತಾತರ ಬೆನ್ನುಗಳ ಹಿಂಬದಿ ನಡಿಯುವ ಕೆಲವು ಕೃತ್ಯಗಳು ಎದುರಿಗೆ ಬರುವ ಮೊದಲೇ ಅವುಗಳ ಕುರಿತು ಅವರನ್ನು ದೂರುವುದು ಕೇವಲ ಅಯುಕ್ತವೇ ಸರಿ. ತಾತರ ಸಭೆಯ ಮುಂದೆ ತಿಂಗಳಿಗೊಮ್ಮೆ ಅಥವಾ ಹೆಚ್ಚು ಸರ್ತಿ ಬರುವ ಪ್ರಸಕ್ತಿಗಳು ನಿಧಾನವಾದ ಆಲೋಚನೆಯಿಂದ ಸರಿಯಾದ ತೀರ್ಮಾನಕ್ಕೆ ಗುರಿಯಾಗುವದು ಒಂದು ಚೋದ್ಯವಲ್ಲ ಅಂತಹ ತೀರ್ಪುಗಳು, ಕಾರ್ಯತಃ ನೆರವೇರಿಸೋಣಾಗುವದೇ ಮುಖ್ಯವಾದ ಕರ್ತವ್ಯವಾಗಿರುತ್ತದೆ. ಎಷ್ಟರ ಮಟ್ಟಿಗೆ ಈ ಕರ್ತವ್ಯಾಂಶವು ತಾತಾಗ್ರೇಸರ ಆಜ್ಞೆಯೊಳಗಣ ಕಾರ್ಯಾಲಯದಲ್ಲಿ ಸಕಾಲ ಜರಗುತ್ತದೆ ಎಂಬುದು ನೋಡಬೇಕಾದ್ದು ಆಗತ್ಯವಾದರೂ ಅದು ಪ್ರಥಮತಾ ತಾತರು ಎಲ್ಲರೂ ಅವಿವಾ ಮೊಬ್ಬೊಬ್ಬರಾಗಿ ಮಾಡತಕ್ಕ ಕೆಲಸವಲ್ಲ ಪರಂತು ಕಾರ್ಯಪ್ರವರ್ತನೆಯ ಹೊಣೆಗಾರಿಕೆಯು ತಾತರ ಸ್ವತಂತ್ರಕ್ಕೆ ಸರ್ವಥಾ ಮಿರಿರುವದಲ್ಲವೆಂಬದಕ್ಕೆ ದೃಷ್ಟಾಂತವು ಮುನಿಸಿಪಲ್ ಕಾಸನದ (ಗಲಬಳನೆ ಅಸವಿ IVನೇ ಅಕ್ಕು) ೫೨ (೨)ನೆಯ ಪ್ರಕರಣದಲ್ಲಿ ತೋರುವುದು ತಾತರ ಸಭೆಯಲಿ ಮಾಡಲ್ಪಟ್ಟ ನಿರ್ಣಯಗಳನ್ನು ಜಾರಿ ಮಾಡಿದ ಮಿತವನ್ನು ತೋರಿಸುವ ಲೆಕ್ಕಗಳು ತಿಂಗಳು ಗಟ್ಟಿಯಾಗಿ ತಾತಾಗ್ರೇಸರು ಸಭೆಯ ಮುಂದೆ ಬರಬೇಕೆಂದು ಮೇಲೆ ಸೂಚಿಸಿದ ಪ್ರಕರಣದ ಎಂತಿತವಾದ ಆಜ್ಞೆ ಇದೆ ಈ ಆಪ್ಪಣೆಯನ್ನು ನಡಿಸುವದು ತಾತಾಗ್ರೇಸರ ಸದ್ಧರ್ಮವಾಗಿರುತ್ತದೆ ಅವರು ಅದನ್ನು ಒಂದು ವರುಷದಲ್ಲಿ ಎಷ್ಟು ಸಾರಿ ನಡಿಸುವರು ಅದಿಷ್ಟು ಅವಶ್ಯ ನಡಿಸಲು ಬದ್ಧರಾಗಿರುವ [illegible] ಯೋಜನೆಗೆ ಹೊರದೆ ಒಂದು ವರುಷದ ಕಾಲದಲ್ಲಿ ಅವರು ಸಭೆಯಿಂದ ಎಷ್ಟು ವಿಷಯಗಳಿಷ್ಟು? ಇದರ ಕಾರಣವೇನೆಂಬ ವಿಚಾರವು ಇದುವರಿಗೆ ಯಾರ ಮನಸ್ಸಿಗಾದರೂ ಬಂದಿರುವದೋ ಎಂಬ ವಿಷಯ ತೀರ್ಮಾನಿಸುವುದು ಪ್ರಯಾಸಕರವಲ್ಲ ತಾತರ ಕಾಲಾವಧಿ ಚರ್ಚೆಯ ಪ್ರೊಸಿಡಿಂಗ್ಸ್ ಎಂಬ ತೀರ್ಪುಗಳನ್ನು ಓದಿ ನೋಡಿದರೆ ಈ ತರದ ತಾತಾಗ್ರೇಸರು ತಮ್ಮ ಧರ್ಮವನ್ನು ಮರತು ಬಿಟ್ಟಿರುವುದೆಂದು ವ್ಯಕ್ತವಾಗುವುದು ತಮ್ಮ ಕಾರ್ಯಾಲಯದ ಉದ್ಯೋಗಸ್ಥರು ಅಂದ ಲೆಕ್ಕವನ್ನು ಸಿದ್ಧಪಡಿಸಲು ತಿಳಿದರು ಎಂದಾಗಿ ಕೊಡೋಣಾಗಬಹುದಾದ ನೆವನವು ಸರ್ವಥಾ ಮಾನ್ಯವಾಗಬಹುದು ಯಾಕಂದರೆ ಕಾರ್ಯಾಲಯದಲ್ಲಿ ಒಳ ಉದ್ಯೋಗಸ್ಥರು ಅವರ ಮೇಲ್ವಿಚಾರಕರು ಸಹ ತಾಪತ್ರಯ ಮುದ್ರೆಯನ್ನು ವರಿಸಿಕೊಳ್ಳುವದೇ ಸತ್ಕರ್ತವ್ಯವೆಂದು ತಿಳಿಕೊಳ್ಳುವದಾದರೆ ಅವರ ಮೇಲೆ ನಡಿಯುವ ಮೇಲ್ವಿಚಾರವು ಎಷ್ಟೆಂಬ ಮರ್ಮವನ್ನು ಸುಲಭವಾಗಿ ತಿಳಿಯಬಹುದು. ಜಾರಿಯಾದ ನಿರ್ಣಯಗಳು ಎತ್ತು, ಮೂಲೆಗೆ ಪತ್ತಿಬಿಟ್ಟ ನಿರ್ಣಯಗಳೆಷ್ಟು ಎಂಬ ವಿವೇಚನವೇ ಶೂನ್ಯವಾದರೆ ಸಮಾಧಾನಕರವಾಗಿ ಸರ್ವವೂ ನಡಿಯುವದಾಗಿ ವರುಷಾವಧಿ ರಿಪೋರ್ಟುಗಳಲ್ಲಿ ಬರದು ತೆಚ್ಚಳ ಪಡುವದು ಸಾಪಕೃತ್ಯವಲ್ಲವೇ? ನಮ್ಮ ಜಿಲ್ಲೆಯ ಹಿಂದಿನ ಅನುಭವಸ್ಥರಾಗಿ ಈಗ ಕಲೆಕ್ಟರರಾಗಿ ನೇಮಕಪಟ್ಟ ದೊರೆಗಳು ನಮ್ಮ ಪತ್ತನದ ತಾತಾಲಯದ ಅವಸ್ಥೆಯ ಕುರಿತು ರವಷ್ಟು ವಿಚಾರಪರರಾದರೆ ಸುಯೋದಯದಿಂದ ಕತ್ತಲೆಯು ಓಡಿ ಹೋಗುವ ರೀತಿಯಲ್ಲಿ ತಾತಾಗ್ರೇಸರ ಕಾರ್ಯಾಲಯಕ್ಕೆ ಈಗ ಪ್ರವೇಶವಾದ ಹಾಗೆ ತೋರುವ ಮುಗಿಲು ನಿರ್ಗತವಾಗುವದು. ಇನ್ನೂ ಕೆಲವು ಯೋಚನಾರ್ಹವಾದ ಸಂಗತಿಗಳವೆ ಮುಂದೆ ತಿಳಿಸುವೆನು.

ವಿದೇಶ ವೃತ್ತಾಂತ.

ಪೋರ್ಚುಗಲ್ ದೇಶದಲ್ಲಿ ಕೆಲವು ದಿನಗಳಿಂದ ಅಲ್ಲಿನ ನಿದ್ಯಾವಂತರಾದ ಕೆಲವು ಜನರ ಮನಸ್ಸಿನಲ್ಲಿ ಪ್ರಜಾ ಪ್ರಭುತ್ವ ಸ್ಥಾಪನೆಯ ಆಶಾಂಕುರವು ಕಾಣಿಸಿಕೊಂಡಿದ್ದಿತು ಅಲ್ಲಿನ ಪ್ರಜೆಗಳ ಆಳುವಿಕೆಯಲ್ಲಿ ಪ್ರಜೆಗಳಿಗೆ ಪರಿತೃಪ್ತಿಯು ಸಮಗ್ರವಾಗಿರಲಿಲ್ಲ ಆ ಪ್ರಜೆಯು ಮತಪ್ರಸಾರಕರ ಸೂತ್ರದ ಬೊಂಬೆಯಾಗಿದ್ದುಕೊಂಡಿರುವನೆಂದು ಅವರು ಅಸಮಾಧಾನಪಟ್ಟಿದ್ದರು. ಇದೇ ಕಾರಣದಿಂದಲೇ ಈಗಿನ ಅಲ್ಲಿನ ಪ್ರಜೆಗಳಾಗಿದ್ದ ಲಿಸ್ಬೆಯ ಡಾಂ ಮ್ಯಾನ್ಯುಯಲ್‌ರವರ ತಂದೆಯೂ ಅಣ್ಣನೂ ಸಹ ೨೩ ವರುಷಗಳ ಕೆಳಗೆ ಪ್ರಜೆಗಳಿಂದ ಕೊಲಲ್ಪಟ್ಟರು ಈಗಿನ ಪ್ರಭುವು ಸಹ ಕಸಗೂ ನ್ಯಾಕಾಯುವುದಾಗಿ ಒಪ್ಪುದೆಂಬ ರೀತಿಯಿಂದ ಕಲವಳಪಡುತ್ತಿದ್ದನು. ಮತ್ತೂ ತನ್ನ ಅಧಿಕಾರವನ್ನೂ ತನ್ನ ಜೀಕ್ಕಪ್ಪನಿಗೆ ವಹಿಸಿಬಿಟ್ಟು ತಾನು ನಿಶ್ಚಿಂತನಾಗಬೇಕೆಂಯ ಯೋಚಿಸಿದ್ದನು ಅದು ನೆರವೇರುವದಕ್ಕಾಗಲಿಲ್ಲ

ಕಳದ ತಾ ೩೦ನ್ನು ಆ ದೇಶದ ರಾಜಧಾನಿಯಾದ ಲಿಸ್ಬನ್ ನಗರದಲ್ಲಿ ಪ್ರಜಾಪ್ರಭುತ್ವಕಾಂಕ್ಷಿಯಾದ ಒಂದು ವರ್ತಮಾನಪತ್ರಿಕೆಯಲ್ಲಿ "ಜನರು ದಂಗೆಯೆದ್ದಿಸಿ, ತಮ್ಮ ಇಷ್ಟಾರ್ಥವನ್ನು ನೆರವೇರಿಸಿಕೊಳ್ಳುವದಕ್ಕೆ ಇದೇ ಸಮಯ"ವೆಂಬ ಲೇಖನವು ಬೆಳೆಯಲ್ಪಟ್ಟು ಬೀದಿಗಳ ಗೋಡೆಗಳಿಗೆಲ್ಲಾ ಅಂಟಿಸಲ್ಪಟ್ಟಿತು ತಾ ೪ನೆಯ ದಿನವೆಂದು ದಂಗೆಗಾರರು ಘೋಷವನ್ನು ಮಾಡಿಕೊಂಡು ಸರಕಾರಿ ಆಯುದ ಶಾಲೆಗೆ ನುಗ್ಗಿ, ಅಲ್ಲಿನ ಅಧಿಕಾರಿಗಳಿಬ್ಬರನ್ನು ಸೆರೆಹಿಡಿದು, ಅಲ್ಲಿದ್ದ ಆಯುಧಗಳನ್ನೆಲ್ಲಾ ತಮ್ಮ ಸ್ವಾಧೀನ ಮಾಡಿಕೊಂಡು, ಒಳಗಿದ್ದ ಸೈನಿಕರನ್ನೆಲ್ಲಾ ತಮ್ಮ ಸಹಾಯಕ್ಕೆ ಕರೆದುಕೊಂಡು ರಾಜದ್ವಜವನ್ನು ಮುರಿದು ಹರಿದು ಚೂರು ಮಾಡಿ, ಮುಂದೆ ಫಿರಂಗಿಯ ಬಂಡಿಗಳನ್ನು ಬಿಟ್ಟುಕೊಂಡು ಬೀದಿಯಲ್ಲಿ ನುಗ್ಗಿ ಹಾವಳಿ ಮಾಡುತ್ತ ಬಂದರು. ಆ ಪಟ್ಟಣದಿಂದ ಇತರ ಸ್ಥಳಗಳಿಗಿದ್ದ ತಂತಿಯ ಸಂಬಂಧವನ್ನೆಲ್ಲಾ ತಪ್ಪಿಸಿಬಿಟ್ಟರು, ಲೋಹಮಾರ್ಗಗಳನ್ನು ಹಾಳು ಮಾಡಿದರು. ಹೀಗೆ ದಂಗೆಯೆದ್ದಿರುವ ಸಂಗತಿಯನ್ನು ಬೇರೊಂದು ಕಡೆಯಲ್ಲಿದ್ದ ಸೈನ್ಯದವರು ಕೇಳಿ ತಮ್ಮ ಕರ್ನಲ್ಲನ್ನೂ, ಇನ್ನಿಬ್ಬರು ಅಧಿಕಾರಿಗಳನ್ನೂ ಕೊಂದು ಈ ದಂಗೆಗಾರರ ಜತೆಗೇ ಸೇರಿಕೊಂಡರು ಪಟ್ಟಣದಲ್ಲಿ ಮುಖ್ಯ ಮುಖ್ಯ ಸ್ಥಳಗಳನ್ನೆಲ್ಲಾ ಈ ದಂಗೆಗಾರರು ಆಕ್ರಮಿಸಿಕೊಂಡರು ಗವರ್ನಮೆಂಟಿನವರು ಪೋಲೀಸಧಿಕಾರಿಯನ್ನು ಕಳಿಸಿದರು ಇದನ್ನು ಶಾಂತಪಡಿಸಿಬೇಕೆಂದು ತಿಳಿಸಿದಾಗ ತನಗೆ ಆಕಸ್ಮಾತ್ ಅಸ್ವಸ್ಥತೆಯುಂಟಾಗಿದೆಯೆಂದು ಹೇಳಿ ತಪ್ಪಿಸಿಕೊಂಡನು ಈ ಅವಾಂತರದ ಸಮಯದಲ್ಲಿ ಮುಖ್ಯ ಮಂತ್ರಿಗಳೂ, ಸೈನ್ಯ ಮುಖ್ಯಾಧಿಕಾರಿಯೂ ಔತ್ತರ ಜಲಕ್ರೀಡೆ ಮೊದಲಾದವುಗಳಲ್ಲಿದ್ದರು ದೊರೆಯು ಒಂದು ಔತ್ತರದಲ್ಲಿ ತತ್ಪರನಾಗಿದ್ದನು. ದಂಗೆಯ ಹಾವಳಿಯು ಪ್ರಬಲವಾಗುತ್ತ ಬಂದಾಗ ಪ್ರಜೆಯಿನ ಪಕ್ಷದ ಕೆಲವರೂ ದಂಗೆಗಾರರಿಗೂ ಕೈ ಕೂಡಿತು ತಾ ೫ರ ರಾತ್ರಿಯೆಲ್ಲಾ ಇವರವರಿಗೆ ಯುದ್ಧವಾಯಿತು ತಾ ೬ರ ಬೆಳಿಗ್ಗೆ ಅರಮನೆಯನ್ನು ಮುತ್ತಿದರು ಪಿರಂಗಿಗಳನ್ನು ಹಾರಿಸಿದರು ಜಲಮಾರ್ಗದಿಂದ ನೌಕಾ ಸೈನಿಕರು ಕಾಣಿಸಿಕೊಳ್ಳಲು ಒಂದು ೧ ಸಾವಿರ ಗಜದ ದೂರದಿಂದ ಅರಮನೆಯ ಮೇಲೆ ಗುಂಡುಗಳನ್ನು ಹಾರಿಸುತ್ತ ಬಂದರು. ಪ್ರಜೆ ಪಕ್ಷದವರು ಅವುಗಳಿಗೂ ಕಾದಾಡಿ ಸಾಕಾಗಿ, ಕಡೆಗೆ ಎಷಾಧ್ಯವಾಗಿ ತೋರಲು ತಲೆ ತಪ್ಪಿಸಿಕೊಂಡು ಹಾಳು ಮನೆಗಳಲ್ಲಿ ಅವಿತುಕೊಂಡರು. ದೊರೆಯೂ ಅವನ ಕುಟುಂಬ ಪರಿವಾರವೂ ಅರಮನೆಯ ಹಿಂಬಾಗಿಲಿಂದ ಹೊರಟು ದೋಣಿಗಳನ್ನು ಹತ್ತಿ, ದೇಹರಕ್ಷಣೆಯನ್ನು ಮಾಡಿಕೊಂಡು ಹೊರಟು ಹೋದರು ಒಳಕ ಅಲ್ಲಿದ್ದ ಪ್ರಜೆ ಪಕ್ಷದವರು ಸ್ವಲ್ಪ ಹೊತ್ತು ಕಾದಾಡಿ ತಟಸ್ಥರಾದರು ಸ್ವಜಾಪಕ್ಷದವರೇ ಜಯಶೀಲರಾಗಿ, ಕಡೆಗೆ ಅರಮನೆಯ ಮೇಲೆ ತಮ್ಮ ಧ್ವಜವನ್ನೇರಿಸಿ. ಎಲ್ಲವನ್ನೂ ತಮ್ಮ ಸ್ವಾಧೀನ ಮಾಡಿಕೊಂಡರು. ಈಚೆಗೆ ಇವರು ತಮ್ಮ ಕಡೆಯ ಪ್ರಮುಖರಿಗೆ ಬೇರೆ ಬೇರೆ ಕಾಮೆಯ ಅಧಿಕಾರಗಳನ್ನೂ ಮಂತ್ರಿತ್ವವನ್ನೂ ವಹಿಸಿ ಕೊಟ್ಟಿದ್ದಾರೆ. ತಮ್ಮಲ್ಲಿನ ಮುಖಂಡನೊಬ್ಬನಿಗೆ ರಾಜ್ಯಾಧಿಕಾರವನ್ನು ವಹಿಸಿ ಕೊಟ್ಟಿದ್ದಾರೆ. ಮ್ಯಾನ್ಯುಯಲ್ ದೊರೆಯು ಅಲ್ಲಿಂದ ಹೊರಟು ಜಿಬ್ರಾಲ್ತರ್ ಎಂಬ ಸಮುದ್ರತೀರ ಪಟ್ಟಣದಲ್ಲಿ ಹಡಗಿನಲ್ಲೇ ಇದ್ದು, ವರ್ತಮಾನ ಕೊಟ್ಟರು. ಅಲ್ಲಿನ ಗವರ್ನರ್ರು ಮೊದಲಾದವರು ಹಡಗಿಗೆ ಬಂದು ಇವರಿಗೆ ಉಡುವ ಒಪ್ಪೆ ಮೊದಲಾದವುಗಳನ್ನು ಕೊಟ್ಟು ಉಪಚರಿಸಿದರು

ಈಗಿನ ಮ್ಯಾನ್ಯುಯಲ್ ಪ್ರಭುವು ತಂದೆಯ ನಂತರ ಪಟ್ಟಕ್ಕೆ ಬಂದು ೩ ವರುಷಗಳು ಮಾತ್ರವೇ ಆಗಿದ್ದವು. ತನ್ನ ತಂದೆಯನ್ನು ಕೊಂದಾಗ ಪ್ರಜೆಗಳು ಊರಿನಲ್ಲೆಲ್ಲಾ ಸಂತೋಷೋತ್ಸವನ್ನು ನಡೆಸಿ ಮೆರೆದಿದ್ದರೂ ಈ ದೊರೆಯು ಪಟ್ಟಕ್ಕೆ ಬಂದನಂತರವೂ ಅದಕ್ಕಾಗಿ ಪ್ರಜೆಗಳ ಮೇಲೆ ಮತ್ಸರಿಸದೆ, ಅದನ್ನೆಲ್ಲಾ ಸೈರಿಸಿಕೊಂಡನು. ತಂದೆಯ ಕಾಲದಲ್ಲಿ ರಾಜವೇತನವು ೫೫ ಸಾವಿರ ಪೌನುಗಳು ಸಲ್ಲುತ್ತಿದ್ದರೂ, ಪಾರ್ಲಿಮೆಂಟಿನವರ ಇಷ್ಟಕ್ಕೆ ವಿರೋಧವಾಗಿ ತಾನು ನಡೆಯುವುದಿಲ್ಲವೆಂದು ಹೇಳಿ ೧೫ ಸಾವಿರ ಪೌನುಗಳನ್ನು ಮಾತ್ರವೇ ತನ್ನ ವೆಚ್ಚಕ್ಕೆ ತೆಗೆದುಕೊಳ್ಳತೊಪ್ಪಿದನು. ವರ್ತಮಾನ ಪತ್ರಿಕೆಗಳನ್ನು ಪ್ರತಿದಿನವೂ ಓದುತ್ತ, ಅದರಿಂದ ಪ್ರಜಾಭಿಪ್ರಾಯವನ್ನು ತಿಳಿದುಕೊಂಡು, ಸಕಲ ವಿಧದಿಂದಲೂ ಪ್ರಜೆಗಳಿಗೆ ಹಿತಕರವಾಗಿಯೇ ರಾಜ್ಯವನ್ನು ಆಳಬೇಕೆಂಬ ಸಂಕಲ್ಪವುಳ್ಳವನಾಗಿದ್ದನು. ಇಂಥ ಪ್ರಭುವನ್ನೂ ಆ ದೇಶೀಯರು ಪದಚ್ಯುತನನ್ನಾಗಿ ಮಾಡಿ, ಪ್ರಜಾಪ್ರಭುತ್ವವನ್ನು ಸ್ಥಾಪಿಸಿಕೊಳ್ಳಲುಜ್ಜುಗಿಸಿದ್ದು ದಕ್ಕೆ ಅವರ ಸ್ವಾತಂತ್ರ್ಯ ಪ್ರೀತಿಯ ಹುಚ್ಚೇ ಮುಖ್ಯ ಕಾರಣವಾಗಿರುತ್ತದೆ ನಿರಂಕುಶನಾಗಿರದೆ ಪ್ರಜಾಪ್ರಿಯನೆನಿಸಿಕೊಂಡಿದ್ದ ಇಂಪ ಮ್ಯಾನ್ಯುಯಲ್ ಪ್ರಭುವಿಗೂ ಇಂಥ ಪದಭ್ರಷ್ಟತೆಯುಂಟಾಯಿತಲ್ಲಾ ಎಂಬುದಕ್ಕಾಗಿ ವಿಷಾದವಾಗುತ್ತದೆ.

ಮೈ. ಸ್ವಾ.

ನಾಸಿಕದ ರಾಜದ್ರೋಹ ಮೊಕದ್ದಮೆಯ ಕೈದಿಯಾದ ಸವಾರಕಾರನನ್ನು ಹಿಂದೂಸ್ಥಾನಕ್ಕೆ ತರುವಾಗ ಫ್ರೆಂಚ ಕರಾವಳಿಯಲ್ಲಿ ಈತನು ತಪ್ಪಿಸಿಕೊಂಡ ಬಳಿಕ ಈತನನ್ನು ಫ್ರೆಂಚ ಕರಾವಳಿಯಿಂದ ಹಿಡಿದು ತಂದದ್ದು ಫ್ರೆಂಚ ಮತ್ತು ಅಂಗ್ಲೇಯರಿಗಿರುವ ಒಪ್ಪಂದಗಳ ಮೇರೆಗೆ ಕಾಯದೆಸೀರ ಆಗಿರುವುದೊ ಎಂಬದನ್ನು ತೀರ್ಮಾನಿಸುವರೆ ಬಂದು ಪಂಚಾಯಿತಿ ಕೋರ್ಟು ಏರ್ಪಟ್ಟಿರುವುದು

[illegible] ಪ್ರಯತ್ನಿಸಿದವರು. ಬೌದ್ಧರ ಪತನಾನಂತರ ಭಾರತಕ್ಕೆ ಸ್ವಾತಂತ್ರ್ಯವಾಗಿ ಬರುವರೆಗೆ ಸುಮಾರು ೧೨೦೦ ವರ್ಷಗಳ ಕಾಲ ಭಾರತದ ಭೂಗೋಳ ಶಾಸ್ತ್ರ ಮಾಹಿತಿ ಮೊದಲಾದ್ದನ್ನು ತಿಳಿಸಿಕೊಡುವ ಮುಖಾಂತರ ಕಲಿಯುತ್ತಿರುವರು

ಉತ್ತರ ಹಿಂದುಸ್ಥಾನ.

ಪಂಜಾಬ್ ಸಂನ್ಯಾಸದ ಎಡ್ವರ್ಡ್ ಚಕ್ರವರ್ತಿಗಳವರ ಸ್ಮಾರಕ ಭಂಡಿನ ಮೊಬಲಗು ಈ ತನಕ ಒಂಬತ್ತು ಲಕ್ಷ ಅರವತ್ತೈದಾಲ್ಕು ಸಾವಿರದ ನೂರಪವತ್ತಾರು ಆಗಿರುವುದು

ಕಲ್ಕತ್ತೆಯಲ್ಲಿರುವ 'ಹಿಲ್‌ತೆಪ್ಪೆರಾ' ಮಹಾರಾಜರ ವಧ ಅರಮನೆಯನ್ನೂ, ದರ್ಬಂಗದ ಮಹಾರಾಜರವರ ಅರಮನೆಯನ್ನೂ ದರೋಡೆ ಕಳ್ಳರು ಪ್ರವೇಶಿಸಿ ಮೊದಲನೆ ಮಹಾರಾಜರವರ ಮನೆಯಿಂದ ಸುಮಾರು ರೂ ೬೦೦೦ದ ಚಿಂದಿಗೆಯನ್ನೂ, ಎರಡನೆ ಮಹಾರಾಜರವರ ಅರಮನೆಯಿಂದ ರೂ ೧೫೦೦೦ರದ ಸೊತ್ತನ್ನೂ ಕಳವು ಮಾಡಿತ ಕೊಂಡು ಹೋಗಿರುವರು

ಕಂಗ್ರಾ ಎಂಬಲ್ಲಿಯ ದೇವಸ್ಥಾನದ ಜೀರ್ಣೋದ್ಧಾರ ಪ್ರಾರಂಭವು ಬಹಳ ಸಂಭ್ರಮದಿಂದ ನಡೆಯಿತು ಎಷ್ಟು ಮಾನವಂತ ಮೆಜೊರ್ ರಾಜಾಜೈಚಂದರವರು ಜೀರ್ಣೋದ್ಧಾರದ ಪಾಯದ ಕಲ್ಲನ್ನು ಹಾಕುವವರಾದರು ಕೆಲೆಯ ರೆವಿನ್ಯು ಅಪೀಸರರಾದ ಮೆ ಎಜ್ ಪ್ರಿವಸ್‌ಕಾಸ್ ವಿ. ಸಿ ಯಸ್ ಎಂಬವರು ಮುಹೂರ್ತ ಕಾಲದಲ್ಲಿ ಹಾಜರಿದ್ದು ಮುಹೂರ್ತದಗೋಸ್ಕರ ಕೂಡಿದ ಅನೇಕ ಹಿಂದು ಗಳಂತೆಯೇ ತನ್ನ ಕಾಲಿನ ಬೂಟೀಸುಗಳನ್ನು ತೆಗೆದಿಟ್ಟು ನೆಲದ ಮೇಲೆ ಅವರೊಡನೆ ಕೂತುಕೊಳ್ಳುವವರಾದರು

ಈ ದೇವಸ್ಥಾನವು ಸೃಷ್ಟಿಯ ಆದಿಕಾಲದಲ್ಲಿಯೇ ಕಟ್ಟಿಸಲ್ಪಟ್ಟಿತೆಂದಾಗಿ ಜನರಲ್ಲಿ ವಾಡಿಕೆಯಾಗಿರುವ ದಂತಕಥೆಗಳಿಂದ ತಿಳಿದುಬರುತ್ತದೆ ಈ ದೇವಸ್ಥಾನವನ್ನು ಪರಿಕ್ಷಿತ ಮಹಾರಾಜರವರು ಪ್ರಥಮ ಸತಿ ಜೀರ್ಣೋದ್ಧಾರ ಮಾಡಿಸಿದ್ದರು ನಂತರದಲ್ಲಿ ಮುದ್ಧ ಮಹಮ್ಮದ ಮತಾವಂತರಗಳನ್ನು ತಾಕಿ ಈ ವರೆಗೂ ಬಾಳಿಕೊಂಡಿರುವುದು ಅಕ್ಬರ ಮತ್ತು ಔರಂಗಜೇಬ ಚಕ್ರವರ್ತಿಗಳವರು ಈ ದೇವಸ್ಥಾನವನ್ನು ನವೀಸಿದ್ದರು

ಹಿಂದೂಳಿಸಿತಿಗಳ ವಾಹಿತಿಯನ್ನು ತಿಳಿಯುವರೆ ಬಾಬು ಗೋದ ಚರಣ ಮಿತರವರು ಉತ್ತರ ಹಿಂದೂಸ್ಥಾನವನ್ನೆಲ್ಲಾ ಸಂದರ್ಶಿಸುವರು

ಈ ತಿಂಗಳ ಒಂದೀಕು ಇಲ್ಲಿ ವಂಗಸಿವಜ ಯವಿನ ವ್ಯಾಚರಿಸಲು ಎಂಗಾಳ ಮುಂದಿಳುಗಳು ಸಜ್ಜಿಯಿಸಿರುವರು. ಮೆ| ರಸಲ್‌ರವರು ಈ ಸಂದರ್ಭದಲ್ಲಿ ಕೂಡುವ ಸಭೆಗೆ ಅಧ್ಯಕ್ಷರಾಗುವರು

ಪಂಜಾವಿನ ಹಿಂದೂ ಮಹಾಜನರ ಸಭೆಯು ಈ ತಿಂಗಳ ತಾ ೧೦ರಲ್ಲಿ ಲಾಹೋರಿನಲ್ಲಿ ಕೂಡಿತು ಅಯಾ ಸಂಸ್ಥಾನಗಳಿಂದ ಸುಮಾರು ೬೦೦ ಪ್ರತಿನಿಧಿಗಳು ಸದರ ಬಂದಿದ್ದರು ಅಧ್ಯಕ್ಷರಾದ ಸಿಕ್ಖ ಮತದ ಬಾಬು ಗೂರ್ಬಕ್ಷ ಸಿಂಗ ಬೆಡಿಯವರು ಸಿಕ್ಖರೂ, ಬೌದರೂ ಬ್ರಹ್ಮ ಆರ್ಯ ಸಮಾಜದವರೇ ಮೊದಲಾದ ಎಲ್ಲರೂ ಹಿಂದೂಗಳಾಗಿರುವರೆಂದು ಹೇಳಿ ಈ ಸುಹಾ ಸಭೆಯು ಈ ಎಲ್ಲಾ ಹಿಂದೂ ವರ್ಗದವರದಾಗಿರುವದೆಂದು ಅಪ್ಪಣೆ ಕೊಟ್ಟರು

ಹಿಂದಿ ಭಾಷಾಭಿಮಾನಿಗಳ ಸಭೆಯು ಈ ತಿಂಗಳ ತಾ ೧೦ರಲ್ಲಿ ಬನಾರಿಸಿನಲ್ಲಿ ಕೂಡಿತು ಬಹುಮಾನವಂತ ಪಂಡಿತ ಮದನ ಮೋಹನ ಮಾಲವಿಯಾರವರು ಸಭಾಧ್ಯಕ್ಷರಾಗಿದ್ದರು. ಹಿಂದಿ ಭಾಷೆಯನ್ನು ಇಡೀ ಹಿಂದೂಸ್ಥಾನಕ್ಕೆ ಸಾಮಾನ್ಯ ಭಾಷೆಯಾಗಿ ಮಾಡುವ ಉಪಯುಕ್ತತೆಯನ್ನು ಸಭೆಯಲ್ಲಿ ಸೂಚಿಸುವವರಾದರು

[illegible] ರಗಳ ದಿನೆಯಿಂದ ಹಿಂದೂಸ್ಥಾನದಲ್ಲಿ ಪೋರ್ಚುಗೀಸರ ಸ್ವಾಸ್ಥ್ಯವಾದ ಗೋವೆಯಲ್ಲಿ ಸಹಸ್ರ ಪೊರ್ಚುಗಲದ ಹೊಸ ಸರಕಾರದವರ ನಿರೂಪಣೆಯ ದಂಗೆರು ಹೊಡದಿರುವ ರಂತೆ ಪ್ರಜೆಗಳಲ್ಲಿ ಹೆಚ್ಚಿನವರು ನವೀನ ಸರಕಾರದವರ ಪಕ್ಷವನ್ನು ಸೇರಿಕೊಂಡಿರುವರಾಗಿ ತಿಳಿಯುತ್ತೇವೆ

ದಕ್ಷಿಣ ಹಿಂದುಸ್ಥಾನ

ಗವರ್ನರ ದೊರೆಗಳವರ ಕಾರ್ಯ ನಿರ್ವಾಹಕ ಸಭೆಯ ವೆಂಬರರಾದ ಬಹುಮಾನಪಟ್ಟ ಬೊಬಿಲಿ ಮಹಾರಾಜರವರು ಕೊಯಂಬುತ್ತೂರಿನಲ್ಲಿರುವ ವ್ಯವಸಾಯ ಕಾಲೇಜನ್ನು ಸಂದರ್ಶಿಸುವವರಾದರು

ಮೈಸೂರು ದಸರಾ ವಸ್ತುಪ್ರದರ್ಶನವು ಯುವರಾಜರವರಿಂದ ಈ ತಿಂಗಳ ತಾ ೧೦ರಲ್ಲಿ ತೆರೆಯಲ್ಪಟ್ಟಿತು

ಬೆಂಗಳೂರಲ್ಲಿರುವ ಮುಖ್ಯ ಸರಕಾರಿ ಆಪೀಸುಗಳನ್ನು ಬೆಂಗಳೂರಿನಿಂದ ಮೈಸೂರಿಗೆ ವರ್ಗಾಯಿಸಬಾರದೆಂದೂ ಅದನ್ನು ಮೈಸೂರು ಸರಕಾರದವರಿಗೆ ಸೂಚಿಸುವರೆ ಈ ತಿಂಗಳ ತಾ ೯ರಲ್ಲಿ ಬೆಂಗಳೂರು ನಿವಾಸಿಕರ ಸಭೆಯು ಕೂಡಿತ್ತು

ಕ್ರೈಸ್ತ ಮತವನ್ನು ಅವಲಂಬಿಸಿದ್ದ ವೇದನಾಯಕ ಶಾಸ್ತ್ರಿಯ ಮತ್ತು ವಾರಣಾಸಿ ರಾಮಕೃಷ್ಣರಾವ್ ಎಂಬವರು ಬಾಹ್ಮಣರು ಶುದ್ಧಿಸಂಸ್ಕಾರವನ್ನು ಪಡದು ಆರ್ಯ ಸಮಾಜವನ್ನು ತಮ್ಮ ಹೆಂಡತಿ ಮಕ್ಕಳ ಸಮೇತ ಸಿಕಂದರಾಬಾದಿನಲ್ಲಿ ಕೂಡಿದರು ಇವರಲ್ಲಿ ರಾಮಯ್ಯನವರಿಗೆ ವಯಸ್ಸಾಯವು ನಾಲ್ವತ್ತು ವರುಷವಾಗಿರುವುದು ಇವರು ಕ್ರೈಸ್ತ ಮತಕ್ಕೆ ಕೂಡಿ ೧೫ ವರುಷಗಳಾಗಿತ್ತು ರಾಮಕೃಷ್ಣರಾವ್‌ರವರ ವ್ಯಾಯವು ೩೫ ವರುಷಗಳಾಗಿರುವುದು ಇವರು ೧೨ ವರುಷದಲ್ಲಿ ಮಧ್ರಾಸಿನಲ್ಲಿ ಕ್ರೈಸ್ತಮತವನ್ನವಲಂಬಿಸಿದ್ದರು

ಜಮ್ಮುನಿಯ ಯುವರಾಜರವರು ಬೆಂಗಳೂರಿಗೆ ಬಂದಾ ಮೈಸೂರು ಸಂಸ್ಥಾನಕ್ಕೆ ಅನೇ ಸಿಕಾರಿ ಗ್ಯಾ ವಾಗುವ ಸಂಭವವಿರುವುದಂತೆ

ದಕ್ಷಿಣ ಕನ್ನಡ

— —೧ —

ಸ್ವೀಕಾರ ಮಸ್ಸರ್ಸ್ ಮೆಕ್‌ಮಿಲನ್ ಕಂಪೆನಿಯವರಿಂದ ಪ್ರಕಟಿಸಲ್ಪಟ್ಟು ಮಂಗಳೂರು ಬಾಸೆಲ್ ಮಿಶನ್ ಬುಕ್ ಎಂಪ್ ಪ್ರಿಂಟಿಂಗ್ ಪೊಜಿಟರಿಯಲ್ಲಿ ಮಾರಲ್ಪಡುವ ಪ್ರಾಚೀನ ಧರ್ಮ ಸಂಗ್ರಹ' ಅಭಿಪ್ರಾಯಗಳನ್ನು ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸುತ್ತೇವೆ

ಮಂಗಳೂರು ಈ ತಿಂಗಳ ತಾ ೧೦ಕ್ಕೆ ಡಿಸ್ಟ್ರಿಕ್ಟ್ ಬೋರ್ಡಿನವರ ವಿಶೇಷ ಸಭೆಯು ಕೂಡಿತ್ತು ವರ್ಗಾಯಿಸಲ್ಪಟ್ಟ ಕಲಕ್ಟರ ಖಾನ್ ಬಹದೂರ ಅಬೀಜುದ್ದೀನ್ ಸಾಹೆಬರವರೂ ಈಗಿನ ಕಲೆಕ್ಟರ ಆರ್ ಎ ಗ್ರಾಹಮ್ ದೊರೆಗಳವರೂ ಸಭೆಯಲ್ಲಿ ಹಾಜರಿದ್ದರು ಬಿಲ್ಲಯನ್ನು ಬಿಟ್ಟು ಹೋಗುವ ಖಾನ್ ಬಹದೂರರವರು ಡಿಸ್ಟ್ರಿಕ್ಟ್ ಬೋರ್ಡಿನ ಅಧ್ಯಕ್ಷರಾಗಿ ಅವರ ಆಡಳಿತೆಯಲ್ಲಿ ಮಾಡಿಸಿದ ಹಲವು ಕೆಲಸಗಳನ್ನು ಕ್ಲಾಪಿಸಿ ಮಾಜಿ ಸಬ್ ಜಡ್ಜ ರಾದ ಮಾ ರಾ ರಾ ಸುಜೀರ ರಘುನಾಥಯ್ಯನವರು ಒಂದು ಭಾಷಣವನ್ನು ಮಾಡಿದರು ಖಾನ್ ಬಹದೂರರವರು ತನ್ನ ಆಡಳಿತೆಯಲ್ಲಿ ತಾನು ನೆರವೇರಿಸಿದ ಕೆಲಸಗಳೆಲ್ಲವೂ ತನ್ನ ಕರ್ತವ್ಯಾಂಶಗಳಾಗಿದ್ದವೆಂದು ಹೇಳಿ [illegible] ತಿಳಿಯುವೆ [illegible]

ಕಳದ ವಾರ ಮುನಿಸಿಪಾಲಿಟಿಯಲ್ಲಿ ೨ ಪ್ಲೇಗದ ಮರಣಗಳೂ ೧ ಶಿಡುಬು ರೋಗದ ಮರಣವೂ ಇದ್ದವು

೨ ತಿಂಗಳ ಹಿಂದೆ ಪೂರ್ಣವಾಗಿ ತೆಗೆದು ಹಾಕಲ್ಪಟ್ಟ ಪ್ಲೇಗ್ ಶಿಬಂದಿಯನ್ನು ಇದೇ ತಿಂಗಳ ತಾ ೧೦ನೆಯುಂದೆ ಪುನಃ ಸ್ಥಾಪಿಸಿರುವರು

ಪುತ್ತೂರು ಡಿವಿಜನ್ ತಹಸೀಲ್ದಾರರಾದ ಮಾ| ರಾ| ವಿ ಎಮ್ ವೆಂಕಾಂದೀಸರವರು ಇದೇ ಬರುವ ನವೆಂಬರ್ ತಿಂಗಳ ತಾ ೧೫ ರಾಗಾಯಿತು ೨ ತಿಂಗಳ ಹಕ್ಕಿನೆ ರಜೆಯನ್ನು ಪಡಕೊಂಡಿರುವದರಿಂದ ಇವರ ಕೆಲಸವನ್ನು ಕಾಸರಗೋಡು ಸಬ್ ಮೇಜಿಸ್ಟ್ರೇಟರಾದ ಮಾ| ರಾ| ಕೆ. ರಾಮವರ್ಮ ರಾಜರವರು ನೋಡುವರಾಗಿಯೂ ಸದರಿ ಕಾಸರಗೋಡು ಸಬ್ ಮೇಜಿಸ್ಟ್ರೇಟರ ಕೆಲಸಕ್ಕೆ ಇಲ್ಲಿಯ ಹೆಜೂರು ಕ್ಲಾಕರಾದ ಮಾ| ರಾ| ಎಮ್ ನಾರಾಯಣ ಕೆನೆ ಬಿ ಎ ಬಿ ಎಲ್ ರವರನ್ನು ನೇಮಿಸಿರುವರಾಗಿಯೂ ಕೇಳುತ್ತೇವೆ

೧೦ ಸಾರಸ್ವತ ಸಂಯುಕ್ತ ಪರಿಷದವಲ್ಲ ಮಂಗಳೂರು ಪರಿಷದಿನ ಮೂರನೇ ಸೆಶೆಯು ಗೋವೆಯಲ್ಲಿ ಕೂಲಿಕ್ಕೆ [illegible]ಯಿಸಿರುವರು

ಇಲ್ಲಿಯ ಕಲಕ್ಟರರ ಪದವಿಗೆ ನೇಮಕ ಪಟ್ಟ ಆರ್. ಎ ಗ್ರಾಹಾಮ್ ಧೂರೆಳವರು ೭ ಜನ ಯುನಿವರ್ಸಿಟಿ ಕಮಿಶನರೂ, ಇದೇ ಕಳೆದ ತಾ ೧೫ನೇ ಸಾಯಂಕಾಲದ ಮೈಲ್ ಟ್ರೈನಿನಲ್ಲಿ ಇಲ್ಲಿಗೆ ಬಂದು ತಲ್ಪುವವರಾದರು. ಲೈ ಇಲ್ಲಿಂದ ಇಲ್ಲಿಯ ಕಲೆಕ್ಟರರಾಗಿದ್ದ ಖಾನ್ ಬಹದೂರ್ ಎಮ್. ಅಬೀಜುದ್ದಿನ್ ಸಾಹೇಬ ಬಹದೂರರವರೂ ಗವರ್ನಮೆಂಟ್ ಕೊಲೆಜಿನ ಪ್ರಿನ್ಸಿಪಾಲರಾದ ಮಿಲವರ್ ದರೆಳೂ ವ್ಯೂಹಿ ಕಲೆಕ್ಟರುಗಳೂ, ೬ ತಹಶೀಲ್ದಾರರುಗಳು, ಕೆಲವು ವಕೀಲರುಗಳೂ, ಹೆಜೂರು ಸಿಬ್ಬಂಯೂ, ಇನ್ನೂ ಅನೇಕ ಪ್ರಮುಖಂಕರೂ ಸದರಿ ಕಲಕ್ಟರು ದೊರೆಸಾನಿಯವರನ್ನು ಎದುರಗೊಂಡು ಸ್ವಾಗತೋಪಚಾರವನ್ನು ಮಾಡುವವರಾದರು

ಇಲ್ಲಿಂದ ದಕ್ಷಿಣ ಆಕಾಶ ಲ್ಲಿಗೆ ವರ್ಗಾಯಿಸಲ್ಪಟ್ಟ ಕಲೆಕ್ಟರ ಎಮ್ ಅಬೀಜುದ್ದಿನ್ ಸಾಹೇಬ ಬಹದೂರರವರು ಇಲ್ಲಿಯ ಊರಗೃಹಸ್ಥರಿಂದ ಸನ್ಮಾನಿಸಲ್ಪಟ್ಟವರಾಗಿ ನಿನ್ನೆ ಬೆಳಿಗ್ಗಿನ ಮೈಲ್ ಟ್ರೈನಿನಲ್ಲಿ ಎಂಗಳೂರಿಗೆ ಸಮೇತ ತೆರಳುವವರಾದರು

